

ಶಾಂತಾದೇವಿ ಕಣವಿ

# ಅಜಗಜಾಂತರ

(ಹರಟೆಗಳ ಸಂಕಲನ)

ಶಾಂತಾದೇವಿ ಕಣವಿ

ಸಂವಹನ

*12 /1A, ಈವನಿಂಗ್ ಬಜಾರ್ ಹಿಂಭಾಗ*

*ಶಿವರಾಂಪೇಟೆ, ಮೈಸೂರು - 570 001*

**AJAGAJANTARA :** *A Collection of essays by Smt. Shantadevi Kanavi, Kalyana Nagar, Dharwad - 580 007; Published by Samvahana, 12/1A, Behind Evening Bazaar, Shivarampet, Mysore - 570 001.*

Pages : viii+100

ಪ್ರಥಮ ಮುದ್ರಣ : ೧೯೮೩

ಪರಿಷ್ಕೃತ ಮುದ್ರಣ : ೨೦೦೩



**Price: Rs. 60-00**

**ಬೆಲೆ : ಅರವತ್ತು ರೂಪಾಯಿ**

ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವ್ನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು - ೫೭೦ ೦೦೧
ದೂರವಾಣಿ : ೨೪೭೬೦೧೯

# ಅಭಿನಂದನೆ

ಬೆಳ್ಳಿಯ ತಲೆಯವರೆಲ್ಲರೂ ಹರಕೆ ನೀಡುವ ಯೋಗ್ಯತೆಯವರಿರುವುದಿಲ್ಲ. ಅಂತೆಯೆ ಈ ಮುನ್ನುಡಿಗೆ ನಾನು ಹರಕೆ ಎನ್ನಲಾರೆ. ಹಾಗಾದರೆ ವಂದನೆ ಹೇಳಲೆ? ಇದೇ ಬೆಳ್ಳಿಯ ತಲೆ ಅಡ್ಡಬರುತ್ತಿದೆ. ಅಂತೆಯೆ ಈ ಅಭಿನಂದನೆ. ಇದೇನು ಹರಕೆಯ ನೆಪದಲ್ಲಿ ಹರಟೆಗೆ ಮೊದಲು ಮಾಡಿಬಿಟ್ಟೆನಲ್ಲ ? ಒಬ್ಬ ಹರಟೆಗಾರರನ್ನು ಅಭಿನಂದಿಸುವಾಗ ಇನ್ನೊಬ್ಬರಿಗೂ ಹರಟೆ ಹೊಡೆಯುವ ಚಪಲವಾದರೆ ಅದು ಸಹಜ.

ಮೇಲೆ ಬೆಳ್ಳಿಯ ತಲೆ ಹಾಕುವುದಕ್ಕೊಂದು ಕಾರಣವಿದೆ. 1947-48 ಸಾಲು. ನಾನು ಮುಂಬಯಿ ಆಕಾಶವಾಣಿಯಲ್ಲಿದ್ದೆ, ನನ್ನ ಆದರಣೀಯ ಹಿರಿಯ ಸ್ನೇಹಿತರಾದ ಶ್ರೀ ಗಿಡ್ನವರ ಮಾಮಲೇದಾರರು ಆಗ ರೋಣದಲ್ಲಿದ್ದರು. ಅವರು ಪ್ರಸಾರಕ್ಕಾಗಿ ಎಂದು ಒಂದು ಕತೆ ಕಳಿಸಿದ್ದರು. ಕತೆಗಾತಿ ಒಬ್ಬ ಶಾಲಾಬಾಲಿಕೆ. ಕತೆ ಓದಿದೆ, ಚೆನ್ನಾಗಿತ್ತು. ನಾಳಿನ ಹಣ್ಣಿನ ರುಚಿ ಅದರಲ್ಲಿ ಮಡಗಿತ್ತು, ಈ ಪುಟ್ಟ ಕತೆಗಾತಿಯನ್ನು ಮುಂಬಯಿವರೆಗೂ ಕರೆಯಿಸಿಕೊಳ್ಳುವಷ್ಟು ನಮಗೆ ಧನಬಲವಿರಲಿಲ್ಲ. ಆದುದರಿಂದ ಕತೆಗೆ ರಾಯಲ್-ಟೀ ಕೊಟ್ಟು ಅದನ್ನು ಇನ್ನೊಬ್ಬ ಬಾಲಿಕೆಯಿಂದ ಓದಿಸಲಾಯಿತು. ಆಲ್ ಇಂಡಿಯಾ ರೇಡಿಯೋ, ರೋಣದ ಈ ಪುಟ್ಟಕತೆಗಾತಿಗೆ ನೀಡಿದ ಗೌರವಧನ - ಐದು ರೂಪಾಯಿ. ಈ ಪುಟ್ಟ ಕತೆ, ಗಾಳಿಯ ಮೇಲೆ ಹೋದ ಎಷ್ಟೋ ದಿವಸಗಳ ತರುವಾಯ ಗಿಡ್ನವರ ಮಾಮಲೇದಾರರು, ಅದರ ಪುಟ್ಟಕತೆಗಾತಿಯ ಕತೆಯೊಂದನ್ನು ಹೇಳಿದರು : ಈ ಕತೆ ಮುಂಬಯಿಯಿಂದ ಪ್ರಸಾರವಾದಾಗ ರೋಣದಲ್ಲಿ ಆ ಕತೆಗಾತಿ ಅದನ್ನು ಕೇಳುವ ಪರಿಸ್ಥಿತಿಯಲ್ಲಿರಲಿಲ್ಲ. ವಿಷಮಜ್ವರದಿಂದ ಹಾಸಿಗೆ ಹಿಡಿದಿದ್ದರಂತೆ. ಈ ರಾಯಲ್ (!) ದೇಣಿಗೆಯನ್ನು ತಮ್ಮ ಔಷಧೋಪಚಾರಕ್ಕಾಗಿ ಬಳಸಬೇಕೆಂದು ಹೇಳಿದರಂತೆ. ಆದರೆ ತಂದೆ ತಾಯಿ ಅದಕ್ಕೆ ಹೇಗೆ ಒಪ್ಪಿಯಾರು ? ತಮ್ಮ ಪುಟ್ಟ ಮಗಳ ದೊಡ್ಡ ಗುಣಕ್ಕಾಗಿ ಸಂತೋಷಪಟ್ಟುಕೊಂಡರು ಅಷ್ಟೆ.

ಅಂದಿನ ಆ ದೊಡ್ಡಗುಣದ ಪುಟ್ಟಕತೆಗಾತಿಯೆ ಇಂದಿನ ಖ್ಯಾತ ಕತೆಗಾತಿ ಶ್ರೀಮತಿ ಶಾಂತಾದೇವಿ ಕಣವಿ ; ಮೂರು ಆವೃತ್ತಿಗಳ 'ಸಂಜೆಮಲ್ಲಿಗೆ', ಎರಡು ಆವೃತ್ತಿಗಳ 'ಬಯಲು ಆಲಯ', ಒಂದೊಂದು ಆವೃತ್ತಿಯ 'ಮರು ವಿಚಾರ', 'ಜಾತ್ರೆ ಮುಗಿದಿತ್ತು' - ಇವಿಷ್ಟು ಕಥಾ ಸಂಗ್ರಹಗಳು, ಮಕ್ಕಳಿಗಾಗಿ 'ನಿಜಗುಣ ಶಿವಯೋಗಿ' ಅವರ ಸದ್ಯದ ಬರವಣಿಗೆಯ ಬತ್ತಳಿಕೆ.

ಮತ್ತೆ ಈಗ ಓದುಗರ ಕೈಗಿರುವುದು ಅವರ ಹರಟೆಯ ಸಂಗ್ರಹ. ಬರವಣಿಗೆ ಗಾಡಿ ಬೇರೆ ದಾರಿ ಹಿಡಿಯಿತಲ್ಲವೆ ? ಹೆಣ್ಣುಮಕ್ಕಳಿಗೆ ಹರಟೆ ಪ್ರಕೃತಿ ಜನ್ಯ. ಹಾಗೆಂದು ಇಲ್ಲಿಯ ಈ ಹದಿನೈದು ಹರಟೆಗಳೆಲ್ಲವೂ ಬರಿ ಪ್ರಕೃತಿ ಜನ್ಯವಲ್ಲ, ಪ್ರತಿಭಾ ಜನ್ಯ. ಅಂತೆಯೆ ಪುಸ್ತಕರೂಪದಲ್ಲಿ ಪ್ರಕಾಶಗೊಳ್ಳುತ್ತಿವೆ.

ಶ್ರೀಮತಿ ಶಾಂತಾದೇವಿ ಕಣವಿ ಅವರು ಕವಿಯ ಪತ್ನಿ. 'ರತ್ನಂ ಸಮಾಗಚ್ಛತು ಕಾಂಚನೇನ' ಎಂದು ಕವಿಕಾಳಿದಾಸ ಯೋಗ್ಯ ದಾಂಪತ್ಯಕ್ಕೆ ಹಾರೈಕೆ ತೋರಿದ್ದಾನೆ. ಕತೆಗಾತಿ ಕವಿಯ ಕೈ ಹಿಡಿದರೆ ಏನಾಗುತ್ತದೆಂದರೆ - 'ಕವಿಯ ಹೆಂಡತಿಯ ಕಣ್ಣಿನಲ್ಲಿ' ಎಂಬ ಹರಟೆಯ ಹೂ ಅರಳುತ್ತದೆ. ಕವಿಯ ಮೂಡಿನ ವಿಕಾರ, ಸಮಾಧಿಯ ವೈಚಿತ್ರ್ಯ, ಗಾಳಿಯಲ್ಲಿ ಬೆರಳ ಕುಣಿತ ಇಷ್ಟೆಲ್ಲಾ ಆದಮೇಲೆ ಪ್ರಸವದ ಕೋಣೆಯಿಂದ ಕವಿ ಹೊರಬೀಳುತ್ತಾನೆ - ಒಂದು ಕೈಯಲ್ಲಿ ಪೆನ್ನು, ಒಂದು ಕೈಯಲ್ಲಿ ಕಾಗದ; ಕತೆಗಾತಿಯ ಕಣ್ಣಲ್ಲಿ ಕವಿಯ ಲೀಲೆ ಹೇಗಿರುತ್ತದೆಂಬುದು ಇಲ್ಲಿದೆ. ಶ್ರೀಮತಿ ಶಾಂತಾದೇವಿ ಕಣವಿ ಅವರು ಕವಿಯ ಪತ್ನಿ. ಅಂತೆಯೆ ಕವಿ ಪಿಟ್ಟೆನ್ನದೆ ಈ ಲೀಲೆಯನ್ನು ನೋಡಿ ಸುಮ್ಮನಿರಬೇಕಾಗುತ್ತದೆ. ಅಂತೂ ಹರಟೆಗಾತಿ ಶ್ರೀಮತಿ ಶಾಂತಾದೇವಿಯವರು ತಮ್ಮ ಹರಟೆಯ ಪ್ರಸಾದವನ್ನು ಪತಿದೇವರನ್ನು ಮೊದಲು ಮಾಡಿಕೊಂಡು ಸ್ನೇಹಿತೆಯರು, ಮನೆಯ ಒಕ್ಕಲಗಿತ್ತಿ, ಸ್ನೇಹಿತೆಯರ ಪತಿಗಳು, ಅವರ ಸಂಸಾರ ಸರ್ಕಸ್ಸು ಹೀಗೆ ತಮ್ಮ ಪರಿಸರದ ಪರಿಜನರಿಗೆಲ್ಲಾ ಮುಟ್ಟಿಸುತ್ತಾರೆ.

'ಮಾತು ಮಾತು ಮಥಿಸಿಬಂದ ನಾದದ ನವನೀತ'ದಂತೆಯೆ ಹರಟೆಯ ಸೃಷ್ಟಿ. ಭಾವಗೀತವು ನಾದದ ನವನೀತವಾದರೆ ಹರಟೆ ಧ್ವನಿಯ ನವನೀತವಾಗಬಹುದು. ಇಲ್ಲಿಯ 'ನಮ್ಮ ಟ್ರಾನ್ಸಿಸ್ಟರ್'ದ ಧ್ವನಿ ಕೇಳಬಹುದು. ಟ್ರಾನ್ಸಿಸ್ಟರ್ ಆದುದರಿಂದ ಹತ್ತು ಕಡೆ ಹಗುರಾಗಿ ಓಡಾಡುತ್ತ ಹತ್ತು ಕಡೆಯ ಮನೆ ಮನೆಗಳ ದೋಸೆಯ ತೂತುಗಳನ್ನು ಎಣಿಸಿಕೊಂಡು ಎಲ್ಲೆಲ್ಲಿ ಎಷ್ಟೆಷ್ಟು ತೂತುಗಳಿವೆಯೆಂಬುದನ್ನು ಪ್ರಕ್ಕಟೆ ಪ್ರಸಾರ ಮಾಡುತ್ತದೆ. ಟ್ರಾನ್ಸಿಸ್ಟರ್ ಎಂಬ ಹೆಸರೇ ಎಷ್ಟು ಸಾಂಕೇತಿಕ ! ಇದು ಕಾಲುಳ್ಳ ಟ್ರಾನ್ಸ್- ಸಿಸ್ಟರ್.

ಹರಟೆ ಪಾಶ್ಚಾತ್ಯರಲ್ಲಿ ಕಾಫಿ ಕ್ಲಬ್ಬಿನಲ್ಲಿ ಉದ್ಭವವಾಯಿತಂತೆ. ನಮ್ಮಲ್ಲಿ ಪಡಸಾಲೆ, ನಡುಮನೆಗಳಿಂದ ಅಡುಗೆಮನೆಯಲ್ಲಿ ತೊಟ್ಟಿಲಾಡಿದೆ. ಶ್ರೀಮತಿ ಶಾಂತಾದೇವಿಯವರು ಈ ಹರಟೆಯ ಶಿಶುವನ್ನು ಚಾಕಲೆಟ್ಟು, ಚಕ್ಕುಲಿಗಳಿಂದ ಪೋಷಿಸಿದ್ದಾರೆ. ಒಮ್ಮೊಮ್ಮೆ ಶುಂಠಿ ಮೆಣಸುಗಳ ಕಷಾಯಿಯಿಂದಲೂ ಉಪಚರಿಸಿದ್ದಾರೆ. 'ಕಂಡದ್ದನ್ನಾಡಿದರೆ' 'ಸಭಾಭೂಷಿತೆ', 'ಶೀತಲಯುದ್ಧ- ಒಪ್ಪಂದ' ಮೊದಲಾದ ವಕ್ರ ಹರಟೆಗಳಲ್ಲಿ ಹರಟೆಯ ಶಿಶುವಿಗೆ ಖಾರದ ಕಷಾಯವನ್ನೇ ಗುಟ್ಟಿ ಹಾಕಲಾಗಿದೆ. 'ಮೈಯಲ್ಲಿ ಸರಿಯಿಲ್ಲಾರೀ' ಒಂದು

ಮಾದರಿಯ ಹರಟೆ. ಅತಿಥಿಗಳ ಪಿಡುಗಿಗೆ 'ಮೈಯಲ್ಲಿ ಸರಿಯಿಲ್ಲಾರೀ' ಎಂಬ ನೆಪ ಒಳ್ಳೆಯ ರಕ್ಷಾಕವಚವೆಂಬುದನ್ನು ಮಾತಿಗೊಂದು ಮಾದರಿಯ ಉದಾಹರಣೆಯಿಂದ ವಿವರಿಸಿದ ಮೇಲೆ, ಕೊನೆಯ ಉದಾಹರಣೆಯಲ್ಲಿ ಬಂದ ಅತಿಥಿಗಳ 'ಏನಾಗೇದರಿ ?' ಎಂಬ ಅನುಕಂಪವೆ ಉರುಲಾಗುತ್ತದೆ. ಅವರ ಆರೋಗ್ಯದ ಪಾಠಗಳನ್ನೂ ಉಪದೇಶಗಳನ್ನೂ ಕೇಳಿ ಕೇಳಿ ಕುಂಟು ನೆಪದ ವ್ಯಕ್ತಿಗೆ ನಿಜವಾದ ತಲೆಶೂಲೆ ಕಾಣಿಸಿಕೊಂಡುಬಿಡುತ್ತದೆಂಬಲ್ಲಿಗೆ ಹರಟೆಯ ಗುಡಿಗೆ ಕಳಸವಿಟ್ಟಂತಾಗಿದೆ. 'ಇದೇ ಕೊನೆಯ ಭಾಷಣ' ಬವಣೆಪಟ್ಟ ಭಾಷಣಕಾರರಿಗೆಲ್ಲಾ ಇದೇ ನಿರ್ಧಾರ ಸರಿ - ಎನಿಸುವಂತೆ ಮಾಡುತ್ತದೆ.

ಹೆಣ್ಣು ಮಗಳು ಹರಟೆಯ ಎಳೆಗಳಿಂದ ಎಂತಹ ಅನುಭವದ ಹಚಡ ನೇಯಬಲ್ಲಳು ಎಂಬುದಕ್ಕೆ ಉತ್ತಮೋತ್ತಮ ಉದಾಹರಣೆಗಳನ್ನು 'ಮಲ್ಲಿಕಾ ಮಾಲಾ ವೃತ್ತ' 'ಶೀತಲಯುದ್ಧ', 'ಕಂಡದ್ದನ್ನಾಡಿದರೆ', 'ಅವರ ಬೆನ್ನು ಹತ್ತಿದಾಗ' ಮೊದಲಾದವುಗಳಲ್ಲಿ ಕಾಣಬಹುದು. ಗೃಹಿಣಿಯ ಗೃಹಕೃತ್ಯಗಳು, ತಾಯಿಯ ಕಾಳಜಿಗಳು ಶ್ರೀಮತಿ ಶಾಂತಾದೇವಿಯವರ ಲೇಖನಿಯಿಂದ ಅಡುಗೆ ಮನೆಯ ಎಂಜಲುಗೋಮ ಮಾಡಿದಷ್ಟು ಸಹಜತೆಯಿಂದ ಮೂಡಿ ಬರುತ್ತವೆ.

ಕೊನೆಯದಾದರೂ ಕಡಮೆಯದಲ್ಲದ ಒಂದು ಮಾತನ್ನಿಲ್ಲಿ ಹೇಳಬೇಕು. ಹದಿನೈದು ಹರಟೆಗಳನ್ನು ಹೊಡೆದಿದ್ದರೂ ಶ್ರೀಮತಿ ಶಾಂತಾದೇವಿ ಅವರು ತಾವು ಮೊದಲು ಚತುರ ಕತೆಗಾತಿ ಎಂಬ ಅಭಿಪ್ರಾಯವನ್ನೆ ಆಳವಾಗಿ ಮೂಡಿಸುತ್ತಾರೆ. 'ಕೈಲಾಸ ಕಂಡುಬಂದೆ' 'ಅವರ ಬೆನ್ನು ಹತ್ತಿದಾಗ' ಈ ಬರವಣಿಗೆಗಳು ಉತ್ತಮ ಸಣ್ಣಕತೆಗಳೆಂದೆ ಹೇಳಬೇಕು. 'ಅವರ ಬೆನ್ನು ಹತ್ತಿದಾಗಂ'ತೂ ಮುಗ್ಧ ಪ್ರಾಮಾಣಿಕ ಸಂಶೋಧಕ ಗಂಡನ ಬಗ್ಗೆ ಆಕೆ ತಾಳಿದ್ದ ಸಂಶಯದ ಮಂಜು ಕರಗಿದಾಗ 'ಅವರ ನೋವಿನ ಮುಖನೋಡಿ' ನಮಗೂ ಕರುಣೆ ಉಕ್ಕುತ್ತದೆ. ಎಂದರೆ, ಶ್ರೀಮತಿ ಶಾಂತಾದೇವಿ ಕಣವಿ ಅವರು ಹರಟೆ ಹೊಡೆಯುತ್ತಲೆ ಕಥೆ ಹೇಳಿಬಿಡುತ್ತಾರೆ. ಸಾಮಾನ್ಯ ಹರಟೆಗಾರನಲ್ಲಿಲ್ಲದ ಒಂದು ಹೆಚ್ಚುಗಾರಿಕೆ ಇದು ಎನ್ನೋಣ ಬೇಕಾದರೆ.

ಸ್ವಾತಂತ್ರ್ಯವಹಿಸಿ ಬರೆದ ಈ ಮುನ್ನುಡಿಯ ಹರಟೆಯನ್ನು ಹದಿನೈದು ಹೆಜ್ಜೆಗಳ ಪ್ರಥಮ ಸಂಗ್ರಹದ ಈ ಹರಟೆಗಾತಿ ಮನ್ನಿಸುವರೆಂದು ತಿಳಿಯುತ್ತೇನೆ. ಏಷ್ಟೆಂದರೂ ನರೆಗೂದಲನ್ನು ಗೌರವಿಸಬೇಕಲ್ಲವೆ ?

- ಎನ್ಕೆ

'ಪರಿಮಳ' ಕಲ್ಯಾಣನಗರ

ಧಾರವಾಡ.

# ಅಭಿವಂದನೆ

ಕಳೆದ ಹದಿನೈದು ವರ್ಷಗಳಲ್ಲಿ ಆಗೊಮ್ಮೆ ಈಗೊಮ್ಮೆ 'ಸುಧಾ' 'ಮಯೂರ', 'ಕನ್ನಡ ಪ್ರಭ' 'ಉತ್ಥಾನ' ಮೊದಲಾದ ಪತ್ರಿಕೆಗಳಿಗೂ ಆಕಾಶವಾಣಿಗೂ ನಾನು ಬರೆದ ನಗೆಬರಹಗಳು ಇಲ್ಲಿ ಮೊದಲಬಾರಿಗೆ ಸಂಗ್ರಹರೂಪದಲ್ಲಿ ಹೊರಬರುತ್ತಿವೆ. ಕತೆಗಳನ್ನು ಬರೆಯುತ್ತಿದ್ದಂತೆಯೇ ನಡುನಡುವೆ ವಿರಳವಾಗಿ ಲಲಿತ ಪ್ರಬಂಧ, ಹರಟೆ, ವ್ಯಕ್ತಿಚಿತ್ರ - ಇತ್ಯಾದಿ ಹೆಸರಿಡಬಹುದಾದ ಈ ಭಾವನಾ ಲಹರಿಗಳು ಹರಿದು ಬಂದಿವೆ. ಲಲಿತ ಪ್ರಬಂಧಗಳನ್ನು ಭಾವಗೀತೆಯಂತೆಯೇ ಮೆಚ್ಚಿಕೊಳ್ಳುವ ಶ್ರೀ ಕಣವಿಯವರು ಈ ಬರವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆ.

ನಾನು ಚಿಕ್ಕವಳಿದ್ದಾಗ ಬರೆದ ಒಂದು ಸಣ್ಣಕತೆಯನ್ನು ಮುಂಬಯಿ ಆಕಾಶವಾಣಿಯಿಂದ ಪ್ರಸಾರಮಾಡಿದ, ಹಾಗೂ ಧಾರವಾಡ ಕೇಂದ್ರದಿಂದ ಇಲ್ಲಿಯ ಕೆಲವು ಬರಹಗಳಿಗೆ ಪ್ರೇರಕವಾದ ಖ್ಯಾತ ಸಾಹಿತಿ ಶ್ರೀ ಎನ್ಕೆಯವರು ಮುನ್ನುಡಿ ರೂಪದಲ್ಲಿ 'ಅಭಿನಂದನೆ' ನೀಡಿ ನನ್ನ ಬಗೆಗೆ ತುಂಬ ವಿಶ್ವಾಸ ತೋರಿದ್ದಾರೆ.

ಇವು ಪತ್ರಿಕೆಗಳಲ್ಲಿ ಪ್ರಕಟವಾದಾಗ ಅನೇಕ ಓದುಗರು, ಹಿತೈಷಿಗಳು ಮೆಚ್ಚಿಗೆಯ ಮಾತನಾಡಿದ್ದಾರೆ.

ಮೈಸೂರಿನ 'ವಾಗ್ದೇವಿ ಪುಸ್ತಕ'ಗಳಲ್ಲಿ ಇದು ಪ್ರಕಾಶಗೊಳ್ಳಲು ಶ್ರೀ ಎನ್. ಚಂದ್ರಪ್ಪ ಅವರು ಮುಖ್ಯ ಕಾರಣರಾಗಿದ್ದಾರೆ.

- ಇವರೆಲ್ಲರಿಗೂ ನನ್ನ ಹಾರ್ದಿಕ ಕೃತಜ್ಞತೆಗಳು.

**- ಶಾಂತಾದೇವಿ ಕಣವಿ**

'ಚೆಂಬೆಳಕು'
ಕಲ್ಯಾಣನಗರ, ಧಾರವಾಡ
೨೦-೯-೧೯೮೨

# ಎರಡನೆಯ ಮುದ್ರಣಕ್ಕೆ ಎರಡು ಮಾತು

ಈಗ್ಗೆ ಇಪ್ಪತ್ತು ವರುಷಗಳ ಹಿಂದೆ ಈ ಪುಸ್ತಕ 'ವಾಗ್ದೇವಿ ಪುಸ್ತಕ'ಗಳಲ್ಲಿ ಪ್ರಕಾಶಗೊಳ್ಳಲು ಕಾರಣರಾಗಿದ್ದ ಶ್ರೀ ಎನ್. ಚಂದ್ರಪ್ಪ ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ಪುಸ್ತಕದ ಪ್ರತಿಗಳು ತೀರಿ ತುಂಬ ದಿನಗಳಾಗಿದ್ದರೂ ಅದರ ಪುನರ್ಮುದ್ರಣದ ಬಗ್ಗೆ ನಾನು ಯೋಚನೆಯನ್ನೇ ಮಾಡಿರಲಿಲ್ಲ. ಇದೀಗ ಆ ಕಾರ್ಯವನ್ನು ಸ್ವಯಂಪ್ರೇರಣೆಯಿಂದ ಪೂರೈಸಿಕೊಟ್ಟ 'ಸಂವಹನ' ಪ್ರಕಾಶನದ ಶ್ರೀ ಡಿ. ಎನ್. ಲೋಕಪ್ಪ ಅವರ ಉಪಕಾರವನ್ನು ಸ್ಮರಿಸದೆ ಇರಲಾರೆ.

ಹಿಂದೆ ಕಣ್ತಪ್ಪಿ ಉಳಿದುಕೊಂಡಿದ್ದ ಇನ್ನೊಂದು ಪ್ರಬಂಧ 'ಮಾದರಿ ಪತಿರಾಯರು' ಇದರಲ್ಲಿ ಈಗ ಸೇರಿಕೊಂಡಿದೆ.

ಪ್ರಸ್ತುತ ಸಂಗ್ರಹದ 'ಕಂಡದ್ದನ್ನಾಡಿದರೆ' ಪ್ರಬಂಧವನ್ನು 'ಶತಮಾನದ ಲಲಿತ ಪ್ರಬಂಧ' ಗ್ರಂಥಕ್ಕೆ (೨೦೦೧) ಆಯ್ಕೆ ಮಾಡಿಕೊಂಡಿರುವ ಸಂಪಾದಕರಿಗೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳು.

**ಶಾಂತಾದೇವಿ ಕಣವಿ**

ಧಾರವಾಡ
ನವೆಂಬರ್ ೧, ೨೦೦೩

# ಪರಿವಿಡಿ

# ಅಜಗಜಾಂತರ

ಕಂಗಾಲ್ ಕರಿಯಪ್ಪನ 'ರೇನಬೊ ರೆಡಿಮೇಡ ಬಟ್ಟೆ ಅಂಗಡಿ'ಯನ್ನು ಅರಿಯದವರು ನಮ್ಮೂರಲ್ಲಿ ಯಾರೂ ಇಲ್ಲ. ಕರಿಯಪ್ಪನ ಪರಿಚಯವಿಲ್ಲದವರೂ ಇಲ್ಲ.

ತಾನೇ ಲೇಟೆಸ್ಟ್ ಫ್ಯಾಷನ್ನಿನ ಅರಿವೆಗಳನ್ನು ಹಾಲಿವುಡ್ಡಿನ ನಟನಂತೆ ಠಾಕೋಠೀಕಾಗಿ ಹಾಕಿಕೊಂಡು ಮಾಡೆಲ್ ಬಾಯ್ ಆಗಿ ನಿಂತು, ಮೂವತ್ತೆರಡೂ ಹಲ್ಲುಗಳನ್ನು ತೋರಿಸುತ್ತ ಗಿರಾಕಿಗಳೊಡನೆ ಮಾತನಾಡುವ ಯುವಕ ಕರಿಯಪ್ಪ ಮೋಜಿನ ಮನುಷ್ಯನೂ ಆಗಿದ್ದಾನೆಂದು ಬೇರೆ ಹೇಳಬೇಕಾಗಿಲ್ಲ. ಒಂದೂವರೆ ಸೆಕೆಂಡಿಗೆ ಒಂದು ಶಿಶುವಿನಂತೆ ಹುಟ್ಟಿ ಬೆಳೆಯುತ್ತಿರುವ ಇಂದಿನ ಜಗತ್ತಿನ ಜನಸಂಖ್ಯೆಯಿಂದಾಗಿ ಅವನ ಅಂಗಡಿಗೆ ನಷ್ಟವಾಗುವುದು ಅಸಾಧ್ಯ ಎನ್ನುವುದು ಎಲ್ಲರಿಗೂ ಗೊತ್ತು. ಸಾಕಷ್ಟು ಆದಾಯ ಮಾಡಿಕೊಂಡು ಉಂಡುಟ್ಟು ಸುಖವಾಗಿರುವ ಕರಿಯಪ್ಪ ವ್ಯವಹಾರ ಚತುರನಷ್ಟೇ ಅಲ್ಲ, ರಸಿಕನೂ ಹೌದು. ಗಿರಾಕಿಗಳಿಲ್ಲದ ಹೊತ್ತಿನಲ್ಲಿ ಸುಮ್ಮನೆ ಕುಳಿತು ತೂಕಡಿಸುತ್ತ, ಚಂದಮಾಮ ಇಲ್ಲವೇ ಪತ್ತೇದಾರಿ ಕಾದಂಬರಿಗಳನ್ನು ಓದುತ್ತ ವ್ಯರ್ಥ ವೇಳೆ ಕಳೆಯದೆ, ದಾರಿಯಲ್ಲಿ ಹೋಗಿಬರುವ ಜನರತ್ತ-ಹೆಚ್ಚಾಗಿ ಮಹಿಳಾಮಣಿಗಳತ್ತ ನೋಡುತ್ತ ಕೂಡುವದು ಅವನ ಹವ್ಯಾಸ. ಅವರು ಅವನ ಅಂಗಡಿಯ ಮುಂದೆ ಹಾಯ್ದು ಹೋಗುವಷ್ಟರಲ್ಲಿಯೆ ಅವರ ನೋಟ, ಮಾತು, ನಗು ಮೈ ಕೈ ಕುಲುಕಾಟ ಇವೆಲ್ಲ ಲಕ್ಷಣಗಳನ್ನೂ ಕಂಡುಕೊಂಡು ಅವರ ಗುಣ, ರುಚಿ, ವಯಸ್ಸು ಎಲ್ಲವನ್ನೂ ಅಳೆಯುವನು. ಅದಕ್ಕೆ ಅವನ ಗೆಳೆಯರು ಅವನಿಗೆ 'ಮಹಿಳಾಗುಣ ವಿದ್ಯಾಪ್ರವೀಣ' ಎಂದು ಬಿರುದನ್ನು ಕೊಟ್ಟು ಗೌರವಿಸಿದ್ದರು. ಇಂಥ ಪ್ರವೀಣನೂ ಒಂದು ದಿನ ಪೆದ್ದನಾದ. ಅವನ ಬಾಯಲ್ಲೇ ಆ ಕಥೆಯನ್ನು ಕೇಳಿ.

ಶಿವರಾತ್ರಿಯಿಂದ ಪ್ರಾರಂಭವಾದ ಬೇಸಿಗೆಯ ಬಿಸಿಲಿಗೆ 'ಶಿವ ಶಿವಾ' ಎನ್ನುತ್ತ ಒಂದು ಮಧ್ಯಾಹ್ನ ಅಂಗಡಿಯೊಳಗೆ ಒಬ್ಬನೇ ಕುಳಿತಿದ್ದೆ. ಸುತ್ತ ಮುತ್ತ ಎತ್ತ ನೋಡಿದರತ್ತತ್ತ ಬಟ್ಟೆಗಳ ರಾಶಿ. ಷೋಕೇಸಿನಲ್ಲಿ ಕಣ್ಣಿಗೆ ತಂಪೆರೆಯುವ ಬಣ್ಣ ಬಣ್ಣಗಳ, ಲೇಟೆಸ್ಟ್ ಫ್ಯಾಷನ್ನಿನ, ಮಕ್ಕಳ, ಹೆಂಗಸರ ಉಡುಪುಗಳು, ತಲೆಯ ಮೇಲೆ

ಹ್ಯಾಂಗರಿನಲ್ಲಿ ತೂಗಾಡುವ ಕಣ್ಣು ಕೋರೈಸುವ ಅರಿವೆಗಳು. ನಡುವೆ ಕ್ಯಾಶ್ ಬಾಕ್ಸಿನ ಹತ್ತಿರ ನಾನು. ಮಾತಿಲ್ಲದೆ ಒಬ್ಬನೇ ಕುಳಿತಿದ್ದಕ್ಕೋ, ಹೊರಗಿನ ಬಿಸಿಲಿನ ಝಳಕ್ಕೋ ಕಣ್ಣಿಗೆ ಮಂಪರು ಬರುತ್ತಿತ್ತು. ಆಗಾಗ ಕಣ್ಣು ಮುಚ್ಚುತ್ತ ತೆಗೆಯುತ್ತ ತೂಕಡಿಸುತ್ತ ಕುಳಿತಿದ್ದೆ. ಮೆಟ್ಟಿಲಿನ ಬಳಿ ಸಪ್ಪಳವಾಯಿತು. ಕಣ್ಣು ನಿಚ್ಚಳಮಾಡಿಕೊಂಡೆ. ಗಂಡ ಹೆಂಡತಿ ಬರುತ್ತಿದ್ದರು. ಮೆಟ್ಟಿಲು ಎಡವಿದ್ದಳೊ ಏನೋ ಗಂಡ 'ಸಾವಕಾಶ ಹತ್ತು ಎಡವಿ ಬಿದ್ದೀ. ಕೈ ಹಿಡೀಲೇನು' ಎನ್ನುತ್ತ ಕೈಹಿಡಿಯಲು ಹೋದ. 'ಬಿಡಿs. ಸಾಕು ತಗೀರಿ. ಪ್ಯಾಟ್ಯಾಗ ಏನು ಚ್ಯಾಷ್ಟಿ ನಿಮ್ಮದು. ನಕ್ಯಾರು ಮಂದಿ' ಎಂದಳು ಹುಸಿಕೋಪ ದಿಂದ. ಮೇಲೆ ಹತ್ತಿ ಅಂಗಡಿಯೊಳಗೆ ಬಂದ ಅವರನ್ನೇ ದಿಟ್ಟಿಸಿದೆ. ಸುಮಾರು 30-35ರ ಸದೃಢ, ಲಕ್ಷಣವತಿ ಹೆಂಡತಿ, ಅವಳಿಗಿಂತ 4-5 ವರ್ಷ ಹೆಚ್ಚು ವಯಸ್ಸಿನ ಗಂಡ. ವಯಸ್ಸಿಗಿಂತ ಹೆಚ್ಚು ಚಪಲನಿದ್ದ. ತುಂಟತನ ಕಣ್ಣುಗಳಲ್ಲಿ ತುಂಬಿತ್ತು. ಅವಳನ್ನು ಕಂಡಾಗ ಕಾಮನಬಿಲ್ಲು ನೋಡಿದ ಅನುಭವವಾಯಿತು ನನಗೆ. ಹಸಿರು ಬಳೆ, ಗುಲಾಬಿ ಸೀರೆ, ಕೆಂಪು ಕುಪ್ಪಸ, ಕಪ್ಪು ಕೂದಲಿನಲ್ಲಿ ಹಳದಿ ಸೇವಂತಿಗೆ. ನಾಚಿಕೆಯಿಂದಲೋ, ಬಿಸಿಲಿನಲ್ಲಿ ಬಂದದ್ದರಿಂದಲೋ ಕೆನ್ನೆ ಕೆಂಪಾಗಿತ್ತು.

'ಹೊಸಾ ಮಾಲು ಬಂದದೇನ್ರೀs' ಗೃಹಸ್ಥ ಕೇಳಿದ.

'ಹೌದ್ರಿ ಬಂದsದ. ಈಗ ಎರಡು ದಿವಸದ ಹಿಂದs ಬಾಂದsದ ಮುಂಬಯಿಯಿಂದ, ಏನು ಬೇಕು ನಿಮಗೆ ?' ಎರಡು ತಿಂಗಳ ಹಿಂದಿನ ಮಾಲು ಇದ್ದರೂ ಅಂಗಡಿಯವರು ಹೇಳಬೇಕಾದದ್ದು ಹೀಗೇ ಅಲ್ಲವೆ ?

'ಹುಂ, ಹೇಳು ಈಗ. ಏನೇನು ಕೊಳ್ಳತಿ' ಹೆಂಡತಿಯ ಕಡೆಗೆ ತಿರುಗಿದ.

'ಕಿಸೇದಾಗ ರೂಪಾಯಿ ಎಷ್ಟು ಅದಾವ ನೋಡಿಕೊಳ್ರಿ ಮೊದಲ. ಅಂಗಡೀನs ಖರೀದಿ ಮಾಡುವವರಾಂಗ ಮಾತಾಡ್ತಿರಲ್ಲ' ಮೆತ್ತಗೆ ತಿವಿದಳು ಆಕೆ ಮಾತಿನಿಂದ.

'ರೊಕ್ಕದ ಕಾಳಜೀ ಯಾಕ ಮಾಡತೀ ನೀನು. ಎಂದೂ ಇಲ್ಲದs ಇವತ್ತು ಅಂಗಡೀಗೆ ಬಂದೀದಿ. ನಿನಗೇನು ಬೇಕು ಎಲ್ಲಾ ತೊಗೊಂಡ ಬಿಡು' ಆಢ್ಯತೆಯಿಂದ ಹೇಳಿ ನಕ್ಕ ಗಂಡ.

'ಏನು ತೋರಿಸಲಿ ನಿಮಗೆ ? ರೆಡಿಮೇಡ ಜಂಪರು, ಪೆಟಿಕೋಟು, ಬ್ರೆಸಿಯರ್ಸ....'

'ಛೇ, ಛೇ ಅವೆಲ್ಲಾ ಬ್ಯಾಡ್ರಿs'

'ಮತ್ತೆ ಫ್ರಾಕು, ಚೊಣ್ಣ, ಬುಶ್‌ಕೋಟು, ಬಾಬಾಸೂಟು ತೋರಿಸಲೇನು ?'

'ಬ್ಯಾಡ ಅವೂ ಬ್ಯಾಡ. ಸಣ್ಣ ಕೂಸಿಗೆ ಅಂಗಿ, ಟೊಪ್ಪಿಗೆ ತೋರಿಸಿರಿ.'

ಕೆಲವು ಮಾದರಿ ತೋರಿಸಿದೆ. ಅವು ಅವರ ಮನಸ್ಸಿಗೆ ಬರಲಿಲ್ಲ.

'ಬ್ಯಾರೇ ಛಂದಂದು ತೋರಿಸರಿ.'

ಮಕಮಲ್ಲಿನ ಅರವಿಯಲ್ಲಿ ಜರಿ, ಮುತ್ತುಗಳಿಂದ ಸೂಕ್ಷ್ಮವಾಗಿ ಕುಸುರಿ ಕೆಲಸ ಮಾಡಿದ ಇನ್ನೊಂದು ಜೋಡಿಯನ್ನು ತೋರಿಸಿದೆ. ಅವರೇನು ಅದನ್ನು ಕೊಳ್ಳಲಾರರು ಎಂದೇ ತಿಳಿದಿದ್ದೆ. ಯಾಕೆಂದರೆ ಅದರ ಬೆಲೆ 22 ರೂ. ಇತ್ತು.

'ನೋಡು, ಈ ಕೆಂಪು ಮಖಮಲ್ಲಿನ ಅಂಗಿ ನನಗೆ ಮನಸ್ಸಿಗೆ ಬಂತು. ಈ ಟೊಪ್ಪಿಗಿ ಅಂತೂ ನನ್ನ ಮೊಮ್ಮಗಗ ಭಾಳ ಒಪ್ಪತದ....'

ನನ್ನ ಕೈಯಲ್ಲಿಯ ರಟ್ಟಿನ ಪೆಟ್ಟಿಗೆ ರಪ್ಪನೆ ಕೆಳಗೆ ಬಿತ್ತು. 'ಮೊಮ್ಮಗಾ' ಎಂದು ಆಶ್ಚರ್ಯದಿಂದ ಬಾಯಿ ತೆರೆದೆ.

'ಯಾಕ್ರೀS ನಮಗೆ ಮೊಮ್ಮಗ ಅದಾನಂತ ಕೇಳಿ ಆಶ್ಚರ್ಯ ಆಯಿತೇನು ನಿಮಗ? ನನ್ನ ಹೆಂಡತೀಗೆ ಹದಿನೈದು ವರ್ಷ ಆದಾಗ ನಮ್ಮ ಲಗ್ನ ಆಯಿತು. ಮರುವರ್ಷನ ಚೊಚ್ಚಲು ಹೆಣ್ಣುಮಗಳು ಹುಟ್ಟಿದಳು. ಈಗ ನಮ್ಮ ಮಗಳಿಗೆ ಗಂಡು ಮಗಾ ಹುಟ್ಟ್ಯಾನ. ಅದಕ್ಕS ಮೊಮ್ಮಗನಿಗೆ ಮುತ್ತಿನ ಟೊಪ್ಪಿಗಿ ಖರೀದಿ ಮಾಡತಾಳ ನಮ್ಮಾಕಿ' ಎಂದ ಆ ಗೃಹಸ್ಥ.

"ಹೆ .... ಹೆ..... ಹೆ ಭಾಳ ಸಂತೋಷ ಸಂತೋಷಾತು" ಎಂದು ಹಲ್ಲು ತೋರಿಸಿ, ಅಂಗಿ ಪ್ಯಾಕ್ ಮಾಡಿಕೊಟ್ಟು, ಬಿಲ್ಲು ಬರೆದೆ. ಹಣ ಕೊಟ್ಟು, ಪ್ಯಾಕೆಟ್ ಸಹಿತ ಕುಣಿತದ ನಡಿಗೆಯಲ್ಲಿ ಹೊರಗೆ ನಡೆದ ಅವರನ್ನೇ ನೋಡುತ್ತ ದಂಗಾಗಿ ಕುಳಿತೆ.

ಮತ್ತೆ ಒಬ್ಬನೇ ಕುಳಿತು ಬೇಸರದಿಂದ ಕಣ್ಣು ಮುಚ್ಚಿದೆ. ಕಾರು, ಬಸ್ಸು ಬುರ್ರನೆ ರಸ್ತೆಯಲ್ಲಿ ಹರಿದಾಗ ಬೆಚ್ಚಿ ಎಚ್ಚರಗೊಳ್ಳುತ್ತಿದ್ದೆ. ಹಾಗೆ ಒಂದು ಕಾರು ಅಂಗಡಿಯ ಮುಂದೆ ಬಂದು ನಿಂತಾಗ ಕಣ್ಣು ನಿಚ್ಚಳ ಮಾಡಿಕೊಂಡು, ಇಲ್ಲದ ನಗೆ ಎಳೆತಂದು ಅವರಿಗೆ ಸ್ವಾಗತ ನೀಡಿದೆ. ಜಾಹೀರಾತಿನಲ್ಲಿ ಕಾಣುವ ಹೆಂಗಸರ ಹಾಗೆ ಅಲ್ಲಲ್ಲಿ ಪಿನ್ನು ಚುಚ್ಚಿ ಓರಣವಾಗಿ ಸೀರೆಯನ್ನುಟ್ಟು, ನೆರಿಗೆಗಳನ್ನು ನೆಲದ ಮೇಲೆ ಎಳೆದಾಡುತ್ತ ವ್ಯಾನಿಟಿ ಬ್ಯಾಗ್ ಹಿಡಿದು ಠೀವಿಯಿಂದ ಮುಂದೆ ಬಂದ ಹೆಂಡತಿಯ ಹಿಂದೆ ಹಿಂದೆ ಫುಲ್ ಸೂಟಿನಲ್ಲಿದ್ದ ಗಂಡ ಬಂದ. ಹಿಂದಿನ ದಂಪತಿಗಳ ಜೋಡಿ ನೋಡಿ ಇನ್ನೂ ಹಸಿರಾಗಿತ್ತು ನನ್ನ ನೆನಪು. ಅವಳು ಮುಂದೆ ಬಂದಾಗ ಬಣ್ಣ ಸುಣ್ಣಗಳ ಹಿಂದಿನ ಅವಳ ಮುಖವೂ ಇವಳು 30-35ಕ್ಕಿಂತ ಕಡಿಮೆ ವಯಸ್ಸಿನವಳೇನಲ್ಲ ಎಂದು ನನಗೆ ತೋರಿಸಿಕೊಟ್ಟಿತು.

ಅವರಿಬ್ಬರನ್ನೂ ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದೆ. ಅಂಗಡಿಯಲ್ಲಿ ಸುತ್ತಲಿನ ಕಪಾಟುಗಳ ಮೇಲೆ ಒಮ್ಮೆ ಗಂಭೀರ ನೋಟ ಬೀರಿ, ಷೋ ಕೇಸಿನ ಎದುರು ಹೋಗಿ ನೋಡ ತೊಡಗಿದಳಾಕೆ. ಗಂಡ ಕೈಕಟ್ಟಿಕೊಂಡು ಹೆಂಡತಿಯ ಕಡೆಗೊಮ್ಮೆ ರಸ್ತೆಯ ಕಡೆಗೊಮ್ಮೆ ನೋಡುತ್ತ ನಿಂತಿದ್ದ.

'ಏನು ತಗೀಲಿs. ಫ್ರಾಕು, ಮನೀಲಾ ಬುಶ್‌ಶರಟು, ಬಾಬಾಸೂಟು....'

'ಬ್ಯಾಡ್ರಿ. ಅವೇನೂ ಬೇಕಾಗಿಲ್ಲ.'

'ಮತ್ತೇನು ತೋರಿಸಲಿ, ಬೆಡ್‌ಕವರ್, ಟಾವೆಲ್, ಪಿಲೋಕೇಸ, ಕರಚೀಫ, ಪಾಯಿಜಾಮ'.

'ಛೀ ಛೀs ಅವೂ ಬ್ಯಾಡ. ಲೇಸಿನ ಪೆಟಿಕೋಟು, ಬ್ರೇಸಿಯರ್ಸ ತಗೀರಿ.'

ಅವಳು ಹೇಳಿದ ಬಟ್ಟೆಗಳನ್ನು ತೆಗೆ ತೆಗೆದು ತೋರಿಸಿದೆ. ಒಂದೊಂದನ್ನೇ ಬಿಚ್ಚಿ, ಎತ್ತಿ, ಹಾಗೆ ಹಿಡಿದು, ಹೀಗೆ ಹಿಡಿದು ನೋಡಿ ಮುಖ ಸಿಂಡರಿಸಿ ಆಚೆಗೆ ತಳ್ಳುತ್ತಿದ್ದಳು. ಕಪಾಟಿನಲ್ಲಿದ್ದ ಅರ್ಧ ಅರಿವೆಗಳೆಲ್ಲ ಟೇಬಲ್ಲಮೇಲೆಯೇ ಬಿದ್ದವು. ನನ್ನ ಸಹನೆ ಬರಬರುತ್ತ ಕಡಿಮೆಯಾಗುತ್ತಿತ್ತು. ಕಡೆಗೂ ಅವಳು ಗಂಡನ ಕಡೆಗೆ ತಿರುಗಿ

'ಇಲ್ಲಿ ಅರಿವೆ ನನ್ನ ಮನಸ್ಸಿಗೆ ಬರಲಿಲ್ಲ. ಬೇರೆ ಕಡೆಗೆ ಹೋಗೋಣ' ಎಂದಾಗ ಅವನು ಕೌಲೆತ್ತಿನ ಹಾಗೆ ಗೋಣುಹಾಕಿದ. ನಾನು ಕಡೆಯ ಪ್ರಯತ್ನ ವೆಂದು ಹೇಳಿದೆ.

'ಈ ಕೆಂಪು ಮಖಮಲ್ಲಿನ ಅಂಗಿ ಟೊಪ್ಪಿಗಿ ಅರೆ ನಿಮಗೆ ಮನಸ್ಸಿಗೆ ಬರ್‍ತದೇನು ನೋಡ್ರಿ, ಮುತ್ತು, ಜರಿ ಕೆಲಸಾ ಮಾಡ್ಯಾರ. ಇದೇ ಈಗ ಒಬ್ಬರು ಒಯ್ದರು ತಮ್ಮ ಮೊಮ್ಮಗನಿಗೆ. ನೀವೂ ತೊಗೊಳ್ರಿ ನಿಮ್ಮ ಮೊಮ್ಮಗನಿಗೆ ಛಂದ ಅದ....'

'ಶಟ್ ಅಪ್, ಮೊಮ್ಮಗನಿಗೆ ಅಂತ. ನಮ್ಮ ಮದುವಿ ಆಗಿ ತಿಂಗಳು ಕೂಡಾ ಆಗಿಲ್ಲ. ಈಗ ಹನಿಮೂನಿಗೆ ಹೊರಟೇವಿ ನಾವು' ಎಂದು ಚೀರಿದವಳೇ ಅವಳು ರಭಸದಿಂದ ಹೋಗಿ ಕಾರಿನಲ್ಲಿ ಕುಳಿತು ಬಾಗಿಲು ಬಡಿದುಕೊಂಡಳು. ಗಂಡ ಅವಳನ್ನು ಹಿಂಬಾಲಿಸಿದ.

ನನ್ನ ಕೈಯಲ್ಲಿಯ ರಟ್ಟಿನ ಪೆಟ್ಟಿಗೆ ಬೀಳದಂತೆ ಭದ್ರವಾಗಿ ಹಿಡಿದುಕೊಂಡು 'ಹೆ .... ಹೆ ... ಬಾಳ ಸಂತೋಷ' ಎಂದು ಹಲ್ಲು ಕಿರಿದೆ.

# ನಮ್ಮ ಟ್ರಾನ್ಸಿಸ್ಟರ್

ಒಳಗಿನ ಕೆಲಸಗಳನ್ನೆಲ್ಲ ಮುಗಿಸಿಕೊಂಡು ಅದೇ ತಾನೇ ಹೊರಗೆ ಬಂದು ಹಾಸಿಗೆಯ ಮೇಲೆ ಒರಗಿದ್ದೆ. 'ಅವ್ವಾರ ಅವ್ವಾರ' ಎಂದು ನಮ್ಮ ಕೆಲಸದವಳು ಗಟ್ಟಿಯಾಗಿ ಕೂಗಿದಳು. 'ಯಾಕs ಎಷ್ಟ ಅವಸರಾ ಮಾಡ್ತೀ ತಡೀ ಬಂದೆ', ಎನ್ನುತ್ತಾ ಎದ್ದು ಬಾಗಿಲು ತೆಗೆದೆ. ಅವಳು ಮುಖಾ ಒಂದು ಥರಾ ಮಾಡಿಕೊಂಡು, 'ಅವ್ವಾರ ನೆಹರೂ ಅಪ್ಪಾ ಅವರು ತೀರಿಕೊಂಡ್ರಿ" ಅಂದಳು. "ಹೋಗs ಏನು ಮಾತಾಡ್ತೀ. ಒಳಿತು ಅನ್ನು, ಇನ್ನೂ ನೂರು ವರ್ಷ ಬದುಕಲಿ" ಅಂದೆ. "ಇಲ್ರೀ ಅವ್ವಾರ ಖರೇನ. ಆಚೀ ಮನ್ಯಾಗ ನಾ ಭಾಂಡಿ ತಿಕ್ಕಿ ಒಳಗೆ ಒಯ್ದು ಇಡತಿದ್ದೆ. ಸಾಹೇಬರು ರೇಡಿಯೋ ಹಚ್ಚಿದ್ದರು. ಅವ್ವಾರು ಗಾಬರ್ಯಾಗಿ ಯಾವಾಗ ? ಹ್ಯಾಂಗ ? ಅಂತ ಕೇಳುತ್ತಿದ್ದರು. ನಾನೂ ಕೇಳಿದಿನ್ರಿ 'ನೆಹರೂಜಿ ತೀರಿಕೊಂಡ್ರು' ಅಂತ ಅವ್ವಾರ ಹೇಳಿದರ್ರಿ. ನಾ ಇತ್ಲಾಗ ಓಡಿ ಬಂದೆ. ನೀವು ರೇಡಿ ಓ ಕೇಳ್ರಿ, ಬೇಕಾರ, ನಾ ಯಾಕ ಸುಳ್ಳು ಹೇಳಲಿ ?"

ಹೌದು, ಅವಳು ಸುಳ್ಳು ಹೇಳಿರಲಿಲ್ಲ. ಅವಳ ಸುದ್ದಿ ನಿಜವಾಗಿತ್ತು. ನಮ್ಮ ಜನಪ್ರಿಯ ಧುರೀಣ ನಮ್ಮನ್ನಗಲಿದ್ದ ವಿಷಯ ನನಗೆ ಮೊದಲು ತಿಳಿದದ್ದು ನಮ್ಮ ಕೆಲಸದವಳಿಂದಲೇ.

ಅವಳ ಹೆಸರೇನೊ ಲಕ್ಷಣವಾಗಿ 'ಲಕ್ಷ್ಮಮ್ಮ' ಎಂದು ಇದೆ. ಆದರೆ ನನ್ನ ಯಜಮಾನ್ರು, ನನ್ನ ತಮ್ಮ ಕೂಡಿ ಅವಳಿಗೆ 'ಟ್ರಾನ್ಸಿಸ್ಟರ್' ಎಂದು ಹೆಸರಿಟ್ಟಿದ್ದಾರೆ. ಅವರಂತೂ ದಿನವೂ ಚೇಷ್ಟೆಯಿಂದ ಕೇಳುತ್ತಾರೆ. 'ಹೋ ಇವತ್ತೇನು ತಾಜಾ ತಾಜಾ ಸುದ್ದಿ' ಎಂದು. ಅಂದ ಹಾಗೆ ಅವಳಿಗೆ ತಿಳಿಯದ ವಿಷಯಾನೇ ಇಲ್ಲಾ ಅನ್ನಬಹುದು. ಕೈ ಕೆಲಸ ಮಾಡ್ತಿದ್ದರೂ ಕಿವಿ ಮಾತ್ರ ತೆರೆದೇ ಇಟ್ಟಿರ್ತಾಳೆ. ಅವಳ ಕಿವಿಯೆಂದರೆ ಅದೊಂದು ರಿಸೀವಿಂಗ್ ಸೆಂಟರ್ ಬಲು ಚುರುಕು. ಎಲ್ಲವನ್ನೂ ಬಹಳ ಬೇಗ ಗ್ರಹಿಸಿಕೊಳ್ಳುತ್ತದೆ. ಯಾರ್‍ಯಾರ ಮನೆಯಲ್ಲಿ ಕೆಲಸ ಮಾಡುತ್ತಾಳೋ ಸಾಧಾರಣ ಎಲ್ಲರ ಮನೆಯ ವಿಷಯಾನೂ ಅವಳಿಗೆ ಗೊತ್ತು. ಅವರ ಮನೆಯಲ್ಲಿಯ ಸಂತೋಷದ ಸುದ್ದಿಯೇ ಆಗಲಿ, ಕೆಟ್ಟ ಸುದ್ದಿಯೇ ಆಗಲಿ ಯಾರಿಗಾದರೂ ಜಗಳವೇ ಆಗಲಿ, ಊರಿಗೆ ಹೋಗಲಿ ಬೀಗರು ಬರಲಿ, ಜಡ್ಡಾಗಲಿ ಎಲ್ಲ ಸುದ್ದಿಯೂ ಇವಳಿಗೆ ತಿಳಿಯಲೇ ಬೇಕು. ಸುಲಭದಲ್ಲಿ ತಿಳಿದರೆ

ಸುಮ್ಮನೆ ಇರುತ್ತಾಳೆ. ಇಲ್ಲದಿದ್ದರೆ ಮನೆಯಲ್ಲಿ ಯಾರನ್ನಾದರೂ ಹಾಗೆ ಮಾತಿಗೆ ಎಳೆದು ವಿಷಯಗಳ ತಳಬುಡವನ್ನೆಲ್ಲಾ ತಿಳಿದುಕೊಳ್ಳುತ್ತಾಳೆ.

ತಾನು ಕೆಲಸ ಮಾಡದಿದ್ದರೂ ಬೇರೆಯವರ ಮನೆಯ ಕೆಲಸದವರೊಡನೆ ಸ್ನೇಹ ಬೆಳೆಸಿ ಅವರ ಮನೆಯ ವಿಚಾರಾನೂ ತಿಳಿದಿರುತ್ತಾಳೆ. ಹಳ್ಳಿಯ ಜನರ ಹಾಗೆ ಪಟ್ಟಣದವರು ಹೆಚ್ಚು ಮಾತುಗುಳಿಗಳಲ್ಲ. ಪರಿಚಯವಿಲ್ಲದವರೊಡನೆ ತಾವಾಗಿಯೇ ಮುಂದೆ ಹೋಗಿ ಮಾತುಕತೆ ಆಡುವುದೂ ಕಡಿಮೆ. ಹೀಗಾಗಿ ನೆರೆಯಲ್ಲಿಯೇ ಇದ್ದರೂ ಒಬ್ಬರಿಗೊಬ್ಬರು ಅಪರಿಚಿತರಂತೆಯೇ ಇರುತ್ತಾರೆ. ಆದರೂ ಅಂಥ ಸಂದರ್ಭಗಳಲ್ಲಿಯೂ ಮನೆ ಕೆಲಸದವಳ ಮುಖಾಂತರ ಅವರಿಬ್ಬರ ಮನೆಯ ವಿಷಯಗಳೆಲ್ಲ ಪರಸ್ಪರರಿಗೆ ಗೊತ್ತಾಗಿರುತ್ತವೆ.

ನಮ್ಮ ನೆರೆಮನೆಯಲ್ಲಿ ಒಬ್ಬ ಗುಜರಾಥಿ ಗೃಹಸ್ಥರಿದ್ದರು. ಮನೆಯವರನ್ನು ಕರೆತಂದಿರಲಿಲ್ಲ. ಒಬ್ಬರೇ ಇರುತ್ತಿದ್ದರು. ಐದಾರು ತಿಂಗಳು ಕಳೆದರೂ ನಮಗೂ ಅವರಿಗೂ ಸಮನಾಗಿ ಪರಿಚಯವಾಗಲೇ ಇಲ್ಲ. ನಮ್ಮ ಕೆಲಸದವಳೇ ಅವರಲ್ಲಿಯೂ ಕೆಲಸ ಮಾಡುತ್ತಿದ್ದಳು. ಒಂದು ದಿನ ಅವಳು ಆ ಗೃಹಸ್ಥರ ಹೆಂಡತಿ ಚೊಚ್ಚಲು ಗಂಡು ಮಗು ಹೆತ್ತರು ಎನ್ನುವ ಸುದ್ದಿಯನ್ನು ನಮಗೆ ಮುಟ್ಟಿಸಿದಳು. ಆ ದಿನವೇ ನಮ್ಮ ಯಜಮಾನರು ಅವರಿಗೆ ಅಭಿನಂದನೆ ಸಲ್ಲಿಸಿ ಸ್ವೀಟ್ ಕೇಳಿದರು. ಆ ಗೃಹಸ್ಥರ ಮುಖ ಅರಳಿತು. ಸಾಯಂಕಾಲ ಮನೆಗೆ ಬರುವಾಗ ಪೇಢೆದ ದೊಡ್ಡ ಪುಡಿಕೆಯನ್ನೇ ಹೊತ್ತು ತಂದಿದ್ದರು. ಅವರ ಸಂತೋಷದಲ್ಲಿ ನಾವೂ ಸಹಭಾಗಿಗಳಾದೆವು. ಅಂದಿನಿಂದ ಅವರು ಇವರ ಆಪ್ತಸ್ನೇಹಿತರಲ್ಲೊಬ್ಬರು. ಈ ಸ್ನೇಹಕ್ಕೆ ಪಾಯ ಹಾಕಿದವಳು ನಮ್ಮ ಟ್ರಾನ್ಸಿಸ್ಟರ್ ಅಲ್ಲವೇ ?

ಒಮ್ಮೆ ನಾನು ಗುರುತಿನವರೊಬ್ಬರಿಗೆ ಕೇಳಿದೆ, 'ಏನ್ರೀ ತಮ್ಮನ ಮದುವೆ ಮಾಡಿದಿರಂತೆ. ನಮಗೆ ಸುದ್ದೀನೆ ತಿಳಿಸ್ಲಿಲ್ಲಾ 'ಅಂತ. ಆಕೆ ನಿಜವಾಗಿಯೂ ಪೆಚ್ಚಾದರು. ಅವರಿಗೆ ನನಗೆ ಭೆಟ್ಟಿಯಾಗಿ ಒಂದೆರಡು ತಿಂಗಳಾಗಿದ್ದವು. ಇವರಿಗೆ ಹೇಗೆ ಸುದ್ದಿ ಗೊತ್ತಾಯಿತು ಅಂತ ಆಶ್ಚರ್ಯ ಅವರಿಗೆ. "ನಮ್ಮನೇ ಕೆಲಸದವಳು ಹೇಳಿದ್ಳು, ನೀವು ತಮ್ಮನ ಮದುವೆಗೆ ತವರ್ಮನೆಗೆ ಹೋಗಿದ್ರಿ ಅಂತ" ಅಂದೆ. ಹೌದೆಂದ್ರು, "ಭಾಳ ಗಡಿಬಿಡಿ ಆತ್ರಿ. ನಿಮಗೆ ತಿಳಿಸ್ಲಿಕ್ಕೆ ಆಗ್ಲೇ ಇಲ್ಲ" ಎಂದು ಜಾರಿಕೊಂಡರು.

ಇನ್ನೊಂದು ಸಲ ನಮ್ಮ ಹಿಂದಿನ ಓಣಿಯಲ್ಲಿರುವ ಗೆಳತಿಯೊಬ್ಬಳು ಮನೆಗೆ ಬಂದಿದ್ದಳು. ಯಥಾಪ್ರಕಾರ ಚಹಾ ತಿನಿಸು ಎಲ್ಲಾ ಆದ ಮೇಲೆ "ಮೊನ್ನೆ ನೀವು ಎಂಥಾ

ಸೀರೆ ತೊಗೊಂಡಿ. ಅಂಗಡಿಗೆ ಹೋಗಿದ್ರಂತೆ" ಅಂದಳು. ನಾನು ಸೀರೆ ತಂದು ಎರಡೇ ದಿನವಾಗಿತ್ತು. ಯಾರೂ ನೋಡಿರಲಿಲ್ಲ. ಇವಳಿಗೆ ಹೇಗೆ ಗೊತ್ತಾಯಿತು ಎಂದು ಆಶ್ಚರ್ಯದಿಂದ ಅವಳನ್ನು ಕೇಳಿಯೇ ಬಿಟ್ಟೆ, "ನಿನಗೆ ಹೇಗೆ ಗೊತ್ತಾಯ್ತು ನಾನು ಸೀರೆ ತಂದದ್ದು" ಎಂದು. "ನಿಮ್ಮ ಮನೇ ಕೆಲಸದವಳೇ ಹೇಳಿದ್ಳು" ಎಂದು ಉತ್ತರ ಬಂದಿತು. ಎರಡು ದಿನಗಳ ಹಿಂದೆ ನಾನವಳಿಗೆ ಹೇಳಿದ್ದೆ : "ಇವತ್ತ ಕೆಲಸಕ್ಕ ಲಗೂನ ಬಾ, ನಾನು ಪೇಟೆಗೆ ಹೋಗಬೇಕಾಗೇದ" ಅಂತ. ಅದಷ್ಟರ ಮೇಲಿಂದನಽ ಸೀರೆ ತಂದಾರ ಅಂತ, ಅವರ ಮುಂದೆ ಹೇಳಿಬಿಟ್ಟಾಳ. 'ಏಳೀ ಸಿಕ್ಕರ ಹಚ್ಚಡಾ ನುಂಗೂದು' ಅಂತಾರಲ್ಲಾ ಅಂಥಾ ಜಾತಿ ಅವಳದು, ಅವಳ ತರ್ಕಬುದ್ಧಿಗೆ ಮೆಚ್ಚಿ ತಲೆತೂಗಿ ಸೀರೆ ತರಲು ಒಳಗೆ ಹೋದೆ.

ಒಂದು ದಿನ ಮನೆಯಲ್ಲಿದ್ದಾಗ ನಮ್ಮವರಿಗೆ "ಆ ನಿಮ್ಮ ಗೆಳೆಯರು ಪರದೇಶಕ್ಕೆ ಹೋಗ್ತಾರಂತ. ಮನೀಯವರನ್ನ ತವರ್ಮನಿಗೆ ಕಳಿಸ್ತಾರಂತ. ಅವರು ಹೋಗೂದರಾಗ ಒಮ್ಮೆ ಊಟಕ್ಕೆ ಕರೀಬೇಕು ನೋಡ್ರಿ" ಅಂತ ಹೇಳಿದೆ. ಅವರು ನಗಹತ್ತಿದರು. "ಯಾಕೆ?" ಅಂದೆ. "ಅವರು ನಿನ್ನೇ ಇಂಟರ್‌ವ್ಯೂಗೆ ಹೋಗಿ ಬಂದರು. ಇವತ್ತ ನನ್ನ ಹತ್ತರ ಬಂದಿದ್ದರು ಅವರು. ಪರದೇಶಕ್ಕೆ ಹೋಗತಾರ ಅನ್ನೋ ಸುದ್ದಿ ಆಗಲೇ ನಿನಗೆ ಗೊತ್ತಾಗೇದ. ಯಾರ ಹೇಳಿದರು ನಿನಗ ?" ಅಂದರು, "ಮತ್ಯಾರು ನಮ್ಮ ಟ್ರಾನ್ಸಿಸ್ಟರು" ಅಂದೆ. ಬಾಯಿ ಮುಚ್ಚಿಕೊಂಡ, ಥಣ್ಣಗಾದರು.

"ತಿಂಗಳಾ ಇಷ್ಟ ಪಗಾರ ಬರತದ. ಆಚೀ ಕಡೆ ಕದೀ ಮನ್ಯಾಗ ಅದಾನಲಾ ಮುದುಕಾ. ಎಷ್ಟ ಜಿಪುಣ ಅದಾನವಾ, ಮತ್ತೆ ಮ್ಯಾಲೆ ಪೆನ್ಶನ್ ಬ್ಯಾರೆ ಬರತದ ಅಂತ." ಎಂದು ತಮ್ಮನೊಡನೆ ಹೇಳಿದಾಗ ಅವನು ಬಿದ್ದು ಬಿದ್ದು ನಕ್ಕ. "ಮೊನ್ನೆ ನಾನು ಒಂದಿಬ್ಬರು ಗೆಳೆಯರೂ ಕೂಡಿ ನೆರೆ ಹಾವಳಿ ಸಂತ್ರಸ್ತರ ನಿಧಿಗೆ ರೊಕ್ಕಾ ಕೂಡಿಸೂ ಮುಂದೆ ಆ ಮುದುಕನ ಮನೆಗೆ ಹೋಗಿದ್ದೆವು. ನಿಧಿಗೆ ರೊಕ್ಕಾ ಕೊಡ್ರಿ ಅಂತ ನಾವು ಕೇಳಿದರ ಭಿಕ್ಷುಕರಿಗೆ ಹಾಕೂ ಹಾಂಗ ನಾಲ್ಕಾಣೆ ಕೊಡಲಿಕ್ಕೆ ಬಂದ. ನನ್ನ ಗೆಳೆಯಾ ಮೊದಲ ಭಾಳ ತಿರಸಟ್ಟ, ಅಂದಬಿಟ್ಟಾ, 'ನೋಡ್ರಿ ಸಾಹೇಬ್ರ ಇಲ್ಲಿ ನಾಲ್ಕು ಖಾತೇ ಮಾಡೇವಿ. ನಿಮ್ಮ ಹೆಸರು ಪ್ಯಾಸರ ಲಿಸ್ಟಿನ್ಯಾಗ ಹಾಕತೇವಿ. ಯಾಕಂದರೆ ಅವರೂ ನಾಲ್ಕಣೇನ ಕೊಟ್ಟಾರ' ಅಂತ. ಅವಾಗ ಮಾರೀ ಕೆಟ್ಟ, ಮಾಡಿ ಒಂದು ರೂಪಾಯಿ ತಂದುಕೊಟ್ಟ. ಹೊರಗೆ ಬಂದ ಮ್ಯಾಲೆ ಎಲ್ಲಾರೂ ನಕ್ಕದ್ದೋ ನಕ್ಕದ್ದೆ. "ಆದರ ನಿನಗೆ ಹ್ಯಾಂಗ ಗೊತ್ತಾತು ? ಅಂವಾ ಜಿಪುಣಾ ಅಂತ. ಅವರ ಮನ್ಯಾಗ ಹೆಂಗಸರು ಯಾರೂ ಇಲ್ಲಾ" ಎಂದು ತಮ್ಮನು

ನನ್ನನ್ನೇ ಕೇಳಿದ. ನಮ್ಮ ಕೆಲಸದಾಕಿಗೆ ಅವನ ಅಡಿಗೀ ಮಾಡೂ ಆಳಿಗೆ ಭಾಳ ಗುರುತು. ಅಡಿಗೆ ಮಾಡಿಸೂ ಮುಂದ ಮುದುಕಾ ಇಬ್ಬರಿಗೇ ಸಾಲಬೇಕು - ಅಷ್ಟೇ ಅಡಿಗೀ ಸಾಮಾನು ಕೊಡತಾನಂತ. ಎಲ್ಲಾ ಕಪಾಟಿನಾಗಿಟ್ಟು ಕೀಲಿ ಹಾಕತಾನಂತ. ಒಂದು ಚೂರು ಸುದ್ದಾ ಭಿಕ್ಷುಕರಿಗೆ ಹಾಕೂದಿಲ್ಲ. ಹೊರಗಿನಿಂದ ಅವರನ್ನ ಬಾಯಿ ಮಾಡಿ ಓಡಿಸತಾನಂತ. ಭಾಳ ಜಿಪುಣ ಅಂತ ಆಕೀನ ಹೇಳಿದ್ದು ಅಂದೆ. "ಭಾಳ ಪ್ರಚಂಡೆ ನಿನ್ನ ಕೆಲಸದಾಕಿ" ಅಂತ ಹೊಟ್ಟೆ ತುಂಬ ನಕ್ಕ.

ನಾಲ್ಕಾರು ಜನ ಹೆಣ್ಣು ಮಕ್ಕಳು ಕೂಡಿ ಮಾತನಾಡುವಾಗ ಮನೆಯ ಖರ್ಚು ವೆಚ್ಚ, ಕಾಯಿಲೆ ವಿಷಯ, ಪೇಟೆಯ ಧಾರಣೆ ಇವೆಲ್ಲಾ ಚರ್ಚೆಯ ವಿಷಯ ಆಗುವದು ಸ್ವಾಭಾವಿಕ. ಹಾಗೆ ಮಾತು ನಡೆದಾಗ ಒಬ್ಬರು, "ಆ ರೇಶನ್ನಿನಲ್ಲಿ ಸಿಗುವ ಅಮೇರಿಕನ್ ಗೋಧಿ ತಂದರೆ ನಮ್ಮ ಮನೆಯಲ್ಲಿ ಯಾರೂ ಊಟಾ ಮಾಡುದಿಲ್ಲ. ಅದಕ್ಕೇ ನಾವು ರೂಪಾಯಿ ನಾಲ್ಕಾಣೆಗೆ ಕಿಲೋದಂತೆ ಕೊಟ್ಟಾದರೂ ಪೇಟೆಯಲ್ಲಿಯ ಗೋಧಿನೇ ತರ್ತೇವಿ" ಎಂದು ಹೇಳಿದರು. ಅವರು ನಮಗಿಂತಲೂ ದೊಡ್ಡ ಸಂಬಳದವರು ಇದ್ದರೂ ಇರಬಹುದು ಎಂದು ನಾವೆಲ್ಲ ನಂಬಿ ಸುಮ್ಮನಾದೆವು. ಆದರೆ ಆ ಮಾತು ಪೂರ್ತಿ ಸುಳ್ಳಾಗಿತ್ತೆನ್ನುವದು ನನಗೆ 'ಟ್ರಾನ್ಸಿಸ್ಟರ್'ದಿಂದ ತಿಳಿಯಿತು.

ಬರಿಯ ಸುದ್ದಿ ಸಮಾಚಾರಗಳನ್ನು ಸಂಗ್ರಹಿಸುವುದಲ್ಲದೆ ನನ್ನ ಗೃಹಕೃತ್ಯಕ್ಕೆ ಬೇಕಾಗುವ ಸಾಮಾನುಗಳನ್ನು ತೆಗೆದುಕೊಳ್ಳುವಾಗಲೂ ನನಗೆ ಅವಳ ಸಹಾಯಬೇಕು. ನಾವು ಕೊಳ್ಳುತ್ತಿದ್ದ ಹಾಲು ಬಹಳ ನೀರಿರುತ್ತಿತ್ತು. ಗೌಳಿಗೆ ಎಷ್ಟೋ ಸಲ ಹೇಳಿಯಾಯಿತು. ಅವನೇನೂ ಸುಧಾರಿಸಲಿಲ್ಲ. ಕಡೆಗೆ ಕೆಲಸದವಳಿಗೆ ಹಾಲುಕೊಡುವವರು ಬೇರೆ ಯಾರಾದರೂ ಸಿಕ್ಕರೆ ನಮಗೆ ಹೇಳು. ತುಟ್ಟಿಯಾದರೂ ಚಿಂತೆ ಇಲ್ಲ. ಹಾಲು ಚೆನ್ನಾಗಿರಬೇಕು, ಎಂದೆ. ಸರಿ, ಎರಡು ದಿನಗಳಲ್ಲಿಯೇ ಒಬ್ಬನನ್ನು ಕರೆತಂದಳು. ರೂಪಾಯಿಗೆ ಏಳು ಪಾವು, ಮನೆಯ ಮುಂದೆ ಎಮ್ಮೆ ತಂದು ಹಿಂಡುತ್ತಾನೆ ಎಂದು ಹೇಳಿ ಗೊತ್ತು ಮಾಡಿಕೊಟ್ಟಳು. ಮರುದಿನ ಹಾಲು ಕುಡಿಯುವಾಗ ಇವರು ಭೇಷ್ ಎಂದು ಶಹಭಾಸಗಿರಿ ಕೊಟ್ಟರು. ಅದು ನಮ್ಮ 'ಟ್ರಾನ್ಸಿಸ್ಟರ್'ಗೆ ಸಲ್ಲಬೇಕು ಎಂದು ನಾನೆಂದೆ.

ದೀಪಾವಳಿ ಸಮೀಪ ಬಂದಿತ್ತು. ಹಬ್ಬಕ್ಕೆ ಬೆಣ್ಣೆ ಬೇಕಾಗಿತ್ತು. ಒಬ್ಬ ಮುದುಕಿ ಬೆಣ್ಣೆ ಬೇಕೇನೆಂದು ಕೇಳುತ್ತ ಮನೆಯ ಮುಂದೆ ಬಂದಳು. ನಾನೂ ಅವಳನ್ನು ಕರೆದು ಧಾರಣೆ ಕೇಳಿದೆ. ಒಂದೂವರೆ ರೂಪಾಯಿಗೆ ಸೇರು ಅಂದಳು. ಹಬ್ಬ ಸಮೀಪವೆಂದು

ಬೆಣ್ಣೆ ತುಟ್ಟಿ ಆಗಿದ್ದರೂ ಆಗಿರಬಹುದು ಎಂದು ಅದೇ ಧಾರಣೆಗೆ ಒಪ್ಪಿಕೊಂಡು ನಾಲ್ಕು ಸೇರು ಬೆಣ್ಣೆ ತೂಗಿಸಿದೆ. ಅಷ್ಟರಲ್ಲಿ ನಮ್ಮ ಸುದ್ದಿ ಸೂರಕ್ಕ ಬಂದಳು. ಧಾರಣೆ ಕೇಳಿ ಮುದುಕಿ ಜೋಡಿ ಜಗಳಾ ಸುರು ಮಾಡಿದಳು. ಯಾಕೆಂದರೆ ಹಿಂದಿನ ಓಣಿಯೊಳಗೆ ಅದೇ ಮುದುಕಿ ಒಂದು ರೂಪಾಯಿ ನಾಲ್ಕಾಣೆಗೆ ಸೇರಿನಂತೆ ಬೆಣ್ಣೆ ತೂಗಿದ್ದಳಂತೆ. ಅವಳಿಂದಲೇ ನನಗೆ ಮುದುಕೀ ಮೋಸ ಗೊತ್ತಾಯ್ತು. ನನ್ನ ಒಂದು ರೂಪಾಯಿನೂ ಉಳಿಯಿತು. ಹಾಗೆಯೇ ಮೆಣಸಿನ ಕಾಯಿ, ಹುಣಸೀ ಹಣ್ಣು, ಕಾಯಿಪಲ್ಲೆ, ಮನೆಯ ಮುಂದೆ ಏನು ಕೊಳ್ಳಬೇಕಾದರೂ ನನಗೆ ಅವಳ ನೆರವು ಬೇಕು. ಇಲ್ಲದಿದ್ದರೆ ಪೇಟೆಯ ಧಾರಣೆ ಗೊತ್ತಾಗದೆ ನಾನು ಮೋಸ ಹೋಗಬೇಕಾಗುತ್ತದೆ.

ಈ ರೀತಿ ಪರೋಪಕಾರೀ ಮನೋಭಾವದವಳು ನಮ್ಮ ಕೆಲಸದವಳು. ಹಾಗೆಯೇ ಹೊಗಳಿ, ಉಬ್ಬಿಸಿ, ತನ್ನ ಕೆಲಸ ಸಾಧಿಸಿಕೊಳ್ಳುವ ಕಲೆ ಅವಳಿಗೆ ಚೆನ್ನಾಗಿ ಸಾಧಿಸಿದೆ. "ನಮ್ಮ ಅವ್ವಾರು ಮಾಡುವ ಸಾರು ಬಲು ಸೆಂವಿ. ಹಾಂಗ ನಾ ಯಾರ ಮನ್ಯಾಗೂ ಉಂಡಿಲ್ಲಾ" ಅಂದರೆ ಸಾಕು, ಅವ್ವಾರು ಹಿಗ್ಗಿ ಅಂದು ಅವಳಿಗೆ ಅನ್ನ ಸಾರು ಕೊಡುವವರೇ. "ನಮ್ಮ ಅವ್ವಾರು ಏನ್ ತಿನಸ ಮಾಡಿದರೂ ನನ್ನ ಬಿಟ್ಟ ತಿನ್ನೂದಿಲ್ಲ ನೋಡ್ರಿ, ಭಾಳ ಜೀಂವಾ ನನ್ನ ಮ್ಯಾಲೆ" ಅಂದಾಗ ಅವ್ವಾರು ಉಬ್ಬಿ ಅವತ್ತು ಮಾಡಿದ ಉಂಡಿ ಚಕ್ಕಲಿ ಕೊಡಲೇಬೇಕು. "ಅವ್ವಾರ ಯಾಕೋ ಮೂರನಾಕ ದಿನ ಆತು ಬಾಯಿ ಇಸಾ ಆಗೇದ ಒಂದೀಟು ಉಪ್ಪಿನಕಾಯಿ ಕೊಡ್ರಿ. ನಿಮ್ಮ ಕೈಯ್ಯಾಗಿನ ಉಪ್ಪಿನಕಾಯಿ ತಿಂದರ ನಾಲಿಗಿ ಜಿಡ್ಡು ಬಿಡ್ತದ" ಎಂದು ಅವಳು ಅಂಗಲಾಚಿದಾಗ ತೆಗೆದಿದ್ದ ಉಪ್ಪಿನಕಾಯಿ ತೀರಿದ್ದರೆ ಅವ್ವಾರು ನಾಗೊಂದಿಗೆಯ ಮೇಲಿನ ದೊಡ್ಡ ಭರಣಿಯನ್ನು ಇಳಿಸಿ ತೆಗೆದುಕೊಡಲು ಸಿದ್ಧ.

ಇದರಂತೆಯೇ ಎರಡನೆಯವರು ಕೊಟ್ಟ ವಸ್ತುವನ್ನು ನಿಮ್ಮೆದುರು ತೋರಿಸಿ, ಅವರನ್ನು ಹೊಗಳಿ, ನಿಮ್ಮಲ್ಲಿ ನಾವೇನು ಕಡಿಮೆ ಎನ್ನುವ ಅಭಿಮಾನ ಹುಟ್ಟಿಸಿ, ನಿಮ್ಮಿಂದ ತನಗೆ ಬೇಕಾದುದನ್ನು ಎತ್ತುವ ಚಾಣಾಕ್ಷತನವೂ ಅವಳ ರಕ್ತಗುಣವಾಗಿದೆ. ಮೊನ್ನೆ ನಮ್ಮ ಕೆಲಸದವಳಿಗೆ ನಾನೊಂದು ಹಳೆಯ ಪತ್ತಲವನ್ನು ಕೊಟ್ಟೆ. ಅದನ್ನು ಸಾಬೂನು ಹಚ್ಚಿ ಒಗೆದು ಉಟ್ಟುಕೊಂಡು ಮತ್ತೊಂದು ಮನೆಯ ಯಜಮಾನಿಗೆ ಅದನ್ನು ತೋರಿಸಿ, "ನೋಡ್ರಿ ನಮ್ಮ ಅವ್ವಾರು ಎಂಥಾ ಛಲೋ ಪತ್ತಲಾ ಕೊಟ್ಟಾರ. ಅದರ ಜೋಡಿ ಲಂಗಾನೂ ಬೇಡಿದ್ದರ ಕೊಡುತ್ತಿದ್ದರು. ನಾನ ಬಾಯಿ ಬಿಚ್ಚಿ ಕೇಳಲಿಲ್ಲ. ಭಾಳ ದೊಡ್ಡ ಮನಸೇರು ನಮ್ಮ ಅವ್ವಾರು' ಎಂದು ಹೇಳಿ ಅವಳಿಂದ ಒಂದು ಗಟ್ಟಿಯಾದ ಲಂಗವನ್ನೇ

ಜಾರಿಸಿ ತಂದಿದ್ದಳು.

ಇನ್ನೊಂದು ಗುಟ್ಟಿನ ಮಾತು ಹೇಳೂದದ. ನಮ್ಮ ಯಜಮಾನ್ರು ನನಗೆ ಎಚ್ಚರಿಕೆ ಕೊಟ್ಟಾರ. ಕೆಲಸದಾಕಿ ಮನೆಯೊಳಗ ಇದ್ದಾಗ ನೀ ಮಂದೀ ಸುದ್ದಿ ಏನರೇ ಮನಸ ಬಿಚ್ಚಿ ಮಾತಾಡೀ ಅಂತ. ಅವು ಆಗಿಂದಾಗ ರಿಲೇ ಆಗತಾವ. ಇಷ್ಟ ಅಲ್ಲ ಒಂದು ಇದ್ದರ ಒಂಬತ್ತು ಆಗಿ ರಿಲೇ ಆಗತಾವ. ಜ್ವಾಕಿ ಅಂತ ಹೇಳ್ಯಾರ. ನಾನೂ ಅದನ್ನ ಅಕ್ಷರಶಃ ಪಾಲಿಸ್ತೇನಿ.

ಇನ್ನೊಂದು ಮಾತು ನಿಮಗೆ ಹೇಳಲಿಕ್ಕೆ ಮರೆತೆ. ಈ ಜೀವಂತ ಟ್ರಾನ್ಸಿಸ್ಟರ್ ಇರೂ ಮುಂದೆ ಆ ನಿರ್ಜೀವ ಪೆಟ್ಟಿಗೆ ಯಾಕ ಅಂತ ನಾ ಎಷ್ಟ ಹೇಳಿದರೂ ಕೇಳಲಾರದ ಮೊನ್ನೆ ನಮ್ಮವರು ರೇಡಿಯೋ ತಂದ ಬಿಟ್ಟಾರ. ಆದರ ನಾ ಏನ ಅದನ್ನ ಹಚ್ಚೂದಿಲ್ಲ ನೋಡ್ರಿ.

# ಹೊರಳುವ ನಾಲಿಗೆ

ಹೊಮ್ಮಕೊಂಡ ಶಾಲನ್ನು ಮಡಿಕೆ ಮಾಡಿ ಕೈಮೇಲೆ ಹಾಕಿಕೊಳ್ಳುತ್ತಾ ಸುಮನಾ ಮೆಟ್ಟಿಲೇರಿದಳು.

ಇವಳಿಗೂ ಮೊದಲೇ ಬಂದಿದ್ದ ಕೆಲವು ಜನ ಪರಿಚಿತರು ಕ್ಲಬ್ಬಿನ ಆವರಣದಲ್ಲಿ ಗುಂಪಾಗಿ ಕುಳಿತಿರುವುದನ್ನು ಕಂಡಳು. ಮಗ್ಗುಲಿನ ಕೋಣೆಯಿಂದ ಗಂಡಸರ ಅಬ್ಬರದ ನಗೆಯೂ, ಧೂಮಪಾನದ ಹೊಗೆಯೂ ಏಕಕಾಲಕ್ಕೆ ಬರುತಿದ್ದವು.

"ಓಹೋ, ಯಾ, ಯಾ, ಇಲ್ಲಿ ಬಾ, ಬಾ" ಎಂದು ಶ್ರೀಮತಿ ಪೋತದಾರ ತನಗೆ ಬರುವಷ್ಟು ಕನ್ನಡದಲ್ಲಿಯೇ ಸುಮನಾಳನ್ನು ಸ್ವಾಗತಿಸಿದಳು. ಕನ್ನಡ ಮಾತನಾಡಲು ಕಲಿಯಬೇಕೆನ್ನುವ ಹುಮಸ್ಸು ಅವಳಿಗೆ. ಅವಳ ಹುರುಪಿಗೆ ಪ್ರೋತ್ಸಾಹ ಕೊಡುವವಳು ಸುಮನಾ.

ನಸು ನಗುತ್ತ ಸುಮನಾ "ಬಾ ಅನ್ನಬಾರ್ದು ಬರ್ರಿ ಅನ್ನಬೇಕು" ಎನ್ನುತ್ತ ಅವಳ ಬಳಿಯೇ ಕುಳಿತಳು. ಅವಳ ದೃಷ್ಟಿ ಶ್ರೀಮತಿ ದೇಸಾಯಿ ಉಟ್ಟ ಕ್ರೇಪ ಸೀರೆಯ ಮೇಲೆ ಹರಿದಿದ್ದಿತು. ತಾನು ಉಟ್ಟುಕೊಂಡ ಪ್ರಿಂಟೆಡ್ ನೈಲಾನ್ ಸೀರೆ ತೀರ ಸಾದಾ ಎನಿಸಿತು. ತಾನು ಮಾಡಿಕೊಂಡ ಅಲಂಕಾರವೂ ಸಾಲದೆನಿಸಿ ಮುಖ ಸಪ್ಪಗಾಯಿತು. ತನ್ನ ಅಲಂಕಾರಕ್ಕೆ ಸಾಕಷ್ಟು ವೇಳೆ ಕೊಡದ ಗಂಡನ ಮೇಲೆ ಆ ಸಿಟ್ಟು ಹರಿಯಿತು.

"ಇನ್ನೂ ಎಲ್ಲಾರೂ ಬಂದಾಂಗ ಕಾಣಿಸೂದಿಲ್ಲ. ನಮ್ಮ ಮನೀಯವರು ಎಷ್ಟು ಗಡಿಬಿಡಿ ಮಾಡಿದರ್ರಿ. ಅವರ ಅವಸರಕ್ಕ ಕೈಗೆ ಸಿಕ್ಕ ಪತ್ತಲಾ ಉಟ್ಟುಕೊಂಡು ಬಂದೆ" ಸುಮನಾ ರಾಗವೆಳೆದಳು.

"ನಮ್ಮ ಮನ್ಯಾಗೂ ಹಾಂಗs ಮಾಡಿದರ್ರಿ. ಅಡಗೀಯವಗ ಸಂಜೀ ಅಡಗೀದಷ್ಟು ಹೇಳಬೇಕು ಅನ್ನೂದರೊಳಗ, ತಾವು ತಯಾರಾಗಿ ಹೊರಗ ಬಂದು ನಿಂತು ಎಷ್ಟು ತಡಾ ಮಾಡ್ತೀ ಅಂತ ನನ್ನ ಮ್ಯಾಲೆ ಸಿಟ್ಟಿಗೇಳತಾರ" ದನಿಗೂಡಿಸಿದವಳು ಶ್ರೀಮತಿ ಕುಲಕರ್ಣಿ.

"ಹೌದ್ರೀ ನಮ್ಮ ವಿನುತಾ, ಗೀತಾ ಇಬ್ಬರೂ ಎಂಟು ಗಂಟೇಕ್ಕ ಮಲಕೊಂಡು ಬಿಡತಾರ. ಅದಕ್ಕs ಅವರಿಗೆ ಸಂಜೀಮುಂದs ಹೊಟ್ಟೆ ತುಂಬ ತಿಂದಿ ತಿನ್ನಸಿ ರಾತ್ರಿ

ಹಾಲು ಅಷ್ಟು ಕುಡಿಸಿ ಬಿಡವ್ವಾ ಅಂತ ತಂಗಿಗೆ ಹೇಳಿ ಬರೂದರಾಗ ಇವರು ಸಿನಗೆ ವಾಚು ಕೊಡಿಸಿದ್ದು ಛಂದಕ್ಕೇನು ಅಂತ ಸಿಟ್ಟಿಗೆದ್ದು ನಿಂತಾರ ನೋಡ್ರಿ" ಎಂದು ಗಂಡನ ವರ್ಣನೆ ಮಾಡಿದವಳು ಶ್ರೀಮತಿ ಪಾಟೀಲ.

"ಈ ಗಂಡಸರ ಹಣೇಬರಾನೆ ಇಷ್ಟು. ಒಟ್ಟು ಏನು ತಪ್ಪಿದರೂ ಹೆಂಡರ ಮ್ಯಾಲೆ ಹಾಕೂದು. ತಾವು ಒಬ್ಬರು ತಯಾರಾಗೂದು ಎಷ್ಟೊತ್ತಿನ ಮಾತು. ಹೆಂಗಸರು ಮನೀ, ಕೆಲಸಾ, ಹುಡುಗರೂ, ಹೋಗು ಮುಂದಿಂದು ಬಂದ ಮ್ಯಾಲಿಂದು ಎಲ್ಲಾ ಸಾವರಿಸಿ ತಾವ್ರ ತಯಾರಾಗಬೇಕು. ಅದರೊಳಗs ಸ್ವಲ್ಪ ಹೆಚ್ಚು ಕಡಿಮಿ ಆದರ ಎಷ್ಟು ಹಾರ್‍ಯಾಡತಾರ, ನಾ ಎಲ್ಲಾ ಮುಗಿಸಿ ತಯಾರಾಗಿ ಹೊರಗೆ ಬಂದು ನಿಂತ ಮ್ಯಾಲೆ ತಾವು ಕೋಟಿನ ಕಿಸೇದಾಗ ಕೈಹಾಕಿ ಕರಚೀಫ ಮರತೇನಿ ತೊಗೊಂಡು ಬಾ ಅಂತ ಹೇಳಿದರು ನಮ್ಮ ಮನೆಯವರು. ನಾನೂ ಬಿಡಲೇ ಇಲ್ಲ ಹಂಗಿಸೇ ಬಿಟ್ಟೆ" ಎಂದು ನಸುನಕ್ಕಳು ಶ್ರೀಮತಿ ದೇಶಪಾಂಡೆ.

"ನೋಡ್ರಿ ಸುಮನಾ, ನಮ್ಮ ಕೆಲಸದಾಕಿಗೆ ದಿನಾ ತುಂಬ್ಯಾವ, ತನಗ ಕೆಲಸ ಆಗೂದಿಲ್ಲಾ ಅಂತ ಮಗಳ್ನ ಕಳಸತಾಳ. ಅದು ಸಣ್ಣದು, ಕೆಲಸಾ ಛೋಲೋ ಮಾಡುದಿಲ್ಲ. ಅದಕ್ಕs ಬದಲೀ ಯಾರ್‍ನರೇ ಹಚ್ಚಿಕೋಬೇಕಂತ ಮಾಡೇನಿ. ನಿಮ್ಮ ಕೆಲಸದಾಕಿ ಹ್ಯಾಂಗ ಮಾಡತಾಳ ?" ಶ್ರೀಮತಿ ಹುಬ್ಬಳ್ಳಿ ಮಾತಿನ ದಿಕ್ಕು ಬದಲಿಸಿದಳು.

"ಅಡ್ಡೀ ಇಲ್ರಿ ಮನಶ್ಯಾಳು ಒಳ್ಳೇಕಿ. ಆದರ ಸ್ವಲ್ಪ ಹೇಳಿ ಮಾಡಿಸಿಕೋ ಬೇಕಾಗ್ತದ. ನಾಳೆ ಕಳಿಸಿಕೊಡ್ತೀನಿ ಕೇಳ್ರಿ ಬೇಕಾದರ," ಎಂದು ಸುಮನಾ ಶ್ರೀಮತಿ ಕುಲಕರ್ಣಿಯ ಕಡೆಗೆ ಹೊರಳಿ "ಅಲ್ರೀ ಇಂದಿರಾ ಬಾಯಿ, ಹೋದ ವರ್ಷ ನಮಗೆ ಹುಣಸಿಹಣ್ಣು ಕೊಡಿಸಿದ್ರೆಲ್ಲಾ. ಈ ಸಾರೆನೂ ನೀವು ತಗೊಳ್ಳು, ಮುಂದ ನಮಗೊಂದು ಅರ್ಧಮಣ ಕೊಡಿಸ್ರಿ" ಎಂದಳು.

"ಆಗಲಿ, ನಾನೂ ಇನ್ನೂ ತೊಗೊಂಡಿಲ್ಲಾ. ಬಂದ ಕೂಡ್ಲೆ ನಿಮ್ಮ ಮನೀಗೂ ಕಳಸ್ತೇನಿ. ಆದರ ಈ ಸಾರೆ ಹಣ್ಣು ಹೆಚ್ಚಿಗಿ ಆಗಿಲ್ಲಂತ, ಭಾಳ ತುಟ್ಟಿ ಆಗೇದ್ರವಾ" ಇಂದಿರಾಬಾಯಿ ಬೇಸರದಿಂದ ನುಡಿದಳು.

"ಅದು ಒಂದs ಏನ್ರೀ ತುಟ್ಟಿ ಆದದ್ದು ಅಕ್ಕಿ, ಗೋಧಿ, ಜೋಳ, ತೊಗರಿಬ್ಯಾಬಳಿ ಮೊದಲ ಮಾಡಿಕೊಂಡು ಎಲ್ಲಾ ತುಟ್ಟಿ ಆಗ್ಯಾವ. ಇಷ್ಟ ಪಗಾರ ಬರೂ ನಾವs ಹಿಂಗಂತೀವಿ. ಇನ್ನ ಬಡವರು ಏನ ತಿನಬೇಕು ನೋಡ್ರಿ ಪಾಪ!" ಶ್ರೀಮತಿ ದೇಶಪಾಂಡೆ ಅನುಕಂಪದ ಮಾತನ್ನಾಡಿದಳು.

"ಹುಂ ಬಡವರಿಗೆ ಮಕ್ಕಳೂ ಭಾಳ. ನಮ್ಮ ಕೆಲಸದಾಕಿಗೆ ಈಗs ಆರು ಮಕ್ಕಳದಾವ. ಇನ್ನೊಂದು ಹೊಟ್ಟೀಯೊಳಗ ಅದ. ಅದಕ್ಕs ನಾ ಒಂದಿನಾ ಅವಳಿಗೆ ಕುಟುಂಬ ಯೋಜನಾದ ಸಲುವಾಗಿ ಹೇಳಿದೆ. ಅದಕ್ಕ ಏನಂದಳ ಗೊತ್ತದ ಏನ್ರೀ ಆಕೀ 'ಬಿಡ್ರೀ ಅವ್ವಾರ ಎಂಥಾ ಮಾತು, ಜೀಸೂ ಕಲ್ಲಮ್ಯಾಲೆ ನಮ್ಮ ಅವ್ವ ಹಿಂಗ ಹಾಡತಿದ್ದಳು ನೋಡ್ರಿ.

*ಬಡತನ ನನಗಿರಲಿ ಭಾಳ ಮಕ್ಕಳಿರಲಿ*
*ಮ್ಯಾಲೆ ಗುರುವಿನ ದಯವಿರಲಿ|*
*ಮಲ್ಲಯ್ಯ ಬಡತನದ ಚಿಂತಿ ನಿನಗಿರಲಿ*

– ಅಂತ ಹಾಡಿಯೇ ತೋರಿಸಿಬಿಟ್ಟಳು ! ನನ್ನ ಮಾತು ಅವಳ ತಲೀಯೊಳಗs ಹೋಗಲಿಲ್ಲ" ಶ್ರೀಮತಿ ಹುಬ್ಬಳ್ಳಿ ಹೇಳಿದಳು.

ತನ್ನ ವಾಚು ನೋಡಿಕೊಳ್ಳುತ್ತ ಸುಮನಾ "ಅಬ್ಬಾ ! ಆರೂವರೆ ಆಯ್ತಲ್ರೀ. ನಮಗೆ ಟಾಯಿಮ್ ಆರು ಗಂಟೆ ಅಂತ ಕೊಟ್ಟಾರ" ಎಂದು ಮಾತಿನ ಪ್ರವಾಹಕ್ಕೆ ತಡೆಗಟ್ಟಿದಳು.

ಎರಡನೆಯ ಸಲ ಬಂದ ಪಾನೀಯದ ಗ್ಲಾಸನ್ನೆತ್ತಿಕೊಳ್ಳುತ್ತ ಶ್ರೀಮತಿ ಹುನಗುಂದ ಪಾನೀಯ ತಂದ ಸಿಪಾಯಿಗೆ ಪಾರ್ಟಿ ಪ್ರಾರಂಭವಾಗಲು ಇನ್ನೂ ತಡವೇ ಎಂದು ಕೇಳಿದಳು.

"ಇಲ್ರೀ, ಎಲ್ಲಾ ಸಾಹೇಬ್ರು, ಬಾಯಿಯವರೂ ಬಂದಾರ. ಆದರ ದೊಡ್ಡ ಮ್ಯಾನೇಜರ ಸಾಹೇಬರು, ಬಾಯಿಯವರು ಬಂದಿಲ್ರಿ ಅದಕ್ಕs ತಡಾ ಆಗೇದ" ಎಂದ.

"ಮ್ಯಾನೇಜರ ಸುಬ್ಬಯ್ಯ ಅವರು ಅಮೆರಿಕಾದಾಗ ಐದು ವರ್ಷ ಇದ್ದರಲ್ರೀ ಸುನಂದಾಬಾಯಿ." ಸುಮನಾ ಶ್ರೀಮತಿ ಪಾಟೀಲರನ್ನು ಕೇಳಿದಳು.

"ಹೌದು, ಅವರು ಅಮೇರಿಕಾದಾಗ ಐದು ವರ್ಷ ಇದ್ದರು. ಆದರ ಹೊತ್ತಿಗೆ ಸರಿಯಾಗಿ ಬರಬಾರದು ಅನ್ನೂ ರಕ್ತಗುಣ ಅವರಲ್ಲಿ ಇಳದs ಬಿಟ್ಟದ." ಸುನಂದಾ ಬಾಯಿಯ ವ್ಯಂಗ್ಯಕ್ಕೆ ಎಲ್ಲರೂ ನಕ್ಕರು.

ಕನ್ನಡ ಸರಿಯಾಗಿ ತಿಳಿಯದ ಶ್ರೀಮತಿ ಪೋತದಾರ ಝುವೇರಿ, ಸಿಂಧೆ ಅವರೆಲ್ಲ ನಗುತ್ತಿರುವವರ ಮುಖವನ್ನು ಮಿಕಿ ಮಿಕಿ ನೋಡಿದರು.

ಹೊರಗೆ ಕಾರಿನ ಸಪ್ಪಳವಾಯಿತು. ಶ್ರೀಮತಿ ಸುಬ್ಬಯ್ಯ ಅವರ ಮಗಳು ವಂದನಾ, ಅಲ್ಲದೆ ಇನ್ನೊಬ್ಬ ಅಪರಿಚಿತ ಸುಂದರ ಮಹಿಳೆಯೂ ಒಳಗೆ ಬಂದರು. ವಯಸ್ಸಿನಲ್ಲಿ

ಎಲ್ಲರಿಗಿಂತ ಹಿರಿಯರಾದ ಶ್ರೀಮತಿ ಸುಬ್ಬಯ್ಯ ನಗುತ್ತ ಎಲ್ಲರಿಗೂ ನಮಸ್ಕರಿಸಿ ಯೋಗಕ್ಷೇಮ ವಿಚಾರಿಸಿದರು. ಪರಿಚಯವಿಲ್ಲದ ಒಬ್ಬಿಬ್ಬರನ್ನು ಹೊಸದಾಗಿ ಪರಿಚಯ ಮಾಡಿಕೊಂಡರು. ಹೊರಗಿನ ಚಳಿಗಾಳಿ ಕಿಟಕಿಯಿಂದ ಬೀಸಿ ಬಂದಿದ್ದರಿಂದ ನಡುಗಿದ ಶ್ರೀಮತಿ ಸುಬ್ಬಯ್ಯ ವಂದನಾಳನ್ನು ಕಾರಿನಲ್ಲಿದ್ದ ಶಾಲು ತರಲು ಕಳುಹಿಸಿದರು. ಆಮೇಲೆ ಇನ್ನೊಬ್ಬ ಮಹಿಳೆಯನ್ನು ಕರೆದು, "ಇವರು ಶ್ರೀಮತಿ ಜಯಂತಿ ದೇಸಾಯಿ, ನಮ್ಮ ಅಸಿಸ್ಟೆಂಟ್ ಮ್ಯಾನೇಜರರ ಹೆಂಡತಿ, ಸೂರತ್‌ನಲ್ಲಿದ್ದವರು. ಈಗ ವರ್ಗವಾಗಿ ಇಲ್ಲಿಗೆ ಬಂದಿದ್ದಾರೆ" ಎಂದು ಎಲ್ಲರಿಗೂ ಪರಿಚಯ ಮಾಡಿಕೊಟ್ಟರು.

ಪಾರ್ಟಿಗೆ ಕರೆ ಬಂದುದರಿಂದ ಎಲ್ಲರೂ ಅಲ್ಲಿಂದ ಎದ್ದು ಹಾಲಿಗೆ ನಡೆದರು. ಒಂದೊಂದು ಮೇಜಿಗೆ ಆರಾರು ಜನ ಕೂಡ್ರುವ ವ್ಯವಸ್ಥೆಯಿತ್ತು. ಸ್ವಲ್ಪ ವಯಸ್ಸಾದವರೆಲ್ಲ ಶ್ರೀಮತಿ ಸುಬ್ಬಯ್ಯ ಅವರೊಡನೆ ಕುಳಿತರು.

ಸುಮನಾ ಇದ್ದ ಮೇಜಿಗೆ ಅವಳ ಸಮ ವಯಸ್ಕರಾದ ಶ್ರೀಮತಿ ಹುಬ್ಬಳ್ಳಿ, ಕುಲಕರ್ಣಿ ದೇಶಪಾಂಡೆ, ಹುನಗುಂದ ಮುಂತಾದವರಿದ್ದರು. ತಿಂಡಿ ತಿನ್ನುವದರೊಡನೆ ಮೆಲು ದನಿಯಲ್ಲಿ ಮಾತೂ ಸಾಗಿಸಿದರು.

ಬಾಲೂಷವನ್ನೆತ್ತಿಕೊಂಡು ಸುಮನಾ ಅಂದಳು "ಶ್ರೀಮತಿ ದೇಸಾಯಿ ಎಷ್ಟು ಛಂದ ಅದಾರಲ್ಲ. ದುಂಡನ್ನ ಮುಖ, ಉದ್ದ ಮೂಗು, ಮತ್ತೆ ಕೂದಲ ಎಷ್ಟು ಉದ್ದ ಅದಾವ ನೋಡ್ರಿ" ಇವರ ಮಾತು ಕೇಳಲಾರದಷ್ಟು ದೂರದಲ್ಲಿದ್ದಳು ಶ್ರೀಮತಿ ದೇಸಾಯಿ.

"ನನಗಂತೂ ನೋಡ್ಲಿಕ್ಕೆ ಸಿನಿಮಾ ನಟಿ ವೈಜಯಂತಿಮಾಲಾನ ಹಾಂಗs ಅನಿಸಿದರು. ಆದರೂ ಕಣ್ಣು ಅಷ್ಟು ದೊಡ್ಡವು ಇಲ್ಲ" ಟೋಸ್ಟ ಕಚ್ಚುತ್ತ ಶ್ರೀಮತಿ ಹುಬ್ಬಳ್ಳಿ ಹೇಳಿದಳು.

"ನೋಡ್ಲಿಕ್ಕೆ ಏನೂ ಅಡ್ಡಿ ಇಲ್ಲಾ. ಆದರ ಮುಖಾ ಯಾಕೋ ಭಣಾ ಭಣಾ ಅಂತಿತ್ತು. ಅಲ್ಲೇನ್ರಿ" ಎಂದಳು ಶ್ರೀಮತಿ ಕುಲಕರ್ಣಿ.

"ಹೌದ್ರಿ ನನಗೂ ಹಾಂಗs ಅನ್ನಿಸ್ತು, ಕುಂಕುಮ, ಕೊರಳಿನ ಚೈನು, ಉಂಗುರ, ಎಲ್ಲಾ ಇದ್ದವು. ಆದರ ಕಿವಿಯೊಳಗ ಏನೂ ಹಾಕಿದ್ದಿಲ್ಲಾ ಅದಕ್ಕ ಹಾಂಗ ಕಾಣಸ್ತಿರಬೇಕು" ಶ್ರೀಮತಿ ಹುಬ್ಬಳ್ಳಿ ಅವಳ ಮಾತನ್ನು ಸಮರ್ಥಿಸಿದಳು.

"ಗ್ರಾಜುಯೇಟ ಇದ್ದಾಳಂತ ಫ್ಯಾಷನ್‌ಕ ಕಿವಿಯೊಳಗಿನವು ತಗದಿರಬೇಕು." ಕಾರಣವನ್ನು ಊಹಿಸಿದಳು ಶ್ರೀಮತಿ ಹುನಗುಂದ.

"ಹಾಂಗಲ್ರೀ, ಶ್ರೀಮತಿ ಪೋತದಾರ ಹೇಳತಿದ್ದರು ಆಕೀ ಭಾಳ ಶ್ರೀಮಂತರ ಮಗಳಂತ, ದೇಸಾಯಿ ಅವರು ಫಾರಿನ್‌ಕ ಹೋಗಿ ಬಂದಾರಂತ ಮಗಳ್ನ ಕೊಟ್ಟರಂತ.

ಶ್ರೀಮಂತರ ಮಗಳು ಅಂದ ಮ್ಯಾಲೆ ಹಾಕಿದರ ವಜ್ರದ ಓಲೇನs ಹಾಕಬೇಕು ಅಂತ ಮನಸ್ಸು ಮಾಡಿರಬೇಕು. ಗಂಡಕೊಡಿಸಿಲ್ಲೊ ಏನೊ. ನನಗ ಹಿಂಗ ಅನಸ್ತದ" ಸುಮನಾ ಹೊಸ ಮಾತನ್ನೇ ಹೇಳಿದಳು.

"ಶ್ರೀಮಂತಿಕೆ, ವಿದ್ಯಾ. ರೂಪ ಎಲ್ಲಾ ಅದs ಅಂದ ಮ್ಯಾಲೆ ಸೊಕ್ಕು ಇರಬೇಕು. ಮನೀಯೊಳಗ ತನ್ನ ಹಟಾನs ನಡಸ್ತಿರಬೇಕು' ಎಂದಳು ಶ್ರೀಮತಿ ಹುನಗುಂದ.

"ಹೊರಗ ಗಂಡ-ಹೆಂಡತಿ ಇಬ್ಬರನ್ನೂ ನೋಡೇನಿ. ಆದರ ಗುರ್ತs ಆಗಿದ್ದಿಲ್ಲಾ. ನಮ್ಮ ಮನೀ ಒಕ್ಕಲಗಿತ್ತೀನs ಅವರ ಮನೀನೂ ಮಾಡ್ತಾಳಂತ. ಗಂಡನ ಕೂಡ ಯಾವಾಗಲೂ ವಾದಿಸ್ಯಾಡತಾಳಂತ, ಆಕೀನ ಹೇಳತಿದ್ಲಳು." ಶ್ರೀಮತಿ ಕುಲಕರ್ಣಿ ಒಕ್ಕಲಗಿತ್ತಿಯ ಮಾತನ್ನು ನಂಬಿ ಅದನ್ನೇ ಅಧಿಕೃತವಾಗಿ ಸಾರಿದಳು.

"ಮತ್ತೇನದ, ವಜ್ರದ ಓಲೆ ಬೇಕು, ನೆಕ್ಲೇಸಬೇಕು, ಅಂತೆಲ್ಲಾ ಗಂಡನ್ನ ಕಾಡತಿರಬೇಕು. ಪಾಪ ಏನ ಮಾಡ್ಯಾರು ದೇಸಾಯರು" ಶ್ರೀಮತಿ ಹುಬ್ಬಳ್ಳಿ ಸಹಾನುಭೂತಿ ತೋರಿಸಿದಳು.

"ರೂಪ ನೋಡಿ ಮಳ್ಳ ಆಗ್ಯಾರ ಅಂದ ಮ್ಯಾಲೆ ಅನುಭೋಗಿಸ್ತಾರ ಮತ್ತೇನು ಮಾಡಬೇಕು. ಆದ್ರೂ ಇಂಥಾ ದಿನದಾಗ ವಜ್ರದ ಓಲೆ ಕೊಳ್ಳಬೇಕಂದರ ಕಠಿಣ ಅಲ್ಲೇನ್ರೀ" ಎಂದಳು. ಶ್ರೀಮತಿ ಕುಲಕರ್ಣಿ ಬೆರಗಿನಿಂದ.

"ಅವರಿಗೇನ್ರಿ ತಿಂಗಳಾ ಎಂಟನೂರು ರೂಪಾಯಿ ಪಗಾರ ಬರತsದ. ಇಂಥಾ ಗ್ರ್ಯಾಜುಯೇಟ, ಸುಂದರ ಹೆಂಡತಿ ಸಿಕ್ಯಾಳಲ್ಲ, ಅಂದಮ್ಯಾಲೆ ಅತ್ತೆ, ಮಾವ, ಮೈದುನ ನಾದಿನಿಯರನ್ನ ಹಚ್ಚಿಕೋತಿರಲಿಕ್ಕಿಲ್ಲ. ಗಂಡಾ ಹೆಂಡತಿ ಇಬ್ಬರs ಖರ್ಚರೇ ಎಷ್ಟು. ರೊಕ್ಕಾ ಮಾಡಿರಲಿಕ್ಕೇ ಬೇಕು." ಸುಮನಾ ಊಹೆಯಿಂದ ಮಾತನ್ನು ಬೆಳೆಸಿದಳು.

"ಬರೇ ರೂಪಾ, ವಿದ್ಯಾ, ಹಣ ಇದ್ದರ ಏನೂ ಉಪಯೋಗ ಇಲ್ಲ. ಮನುಷ್ಯಗ ಗುಣಾ ಇರಬೇಕ್ರೀ" ಶ್ರೀಮತಿ ದೇಶಪಾಂಡೆ ಅನುಭವದ ಮಾತನ್ನಾಡಿದಳು.

ಚಹದ ಕಪ್ಪನ್ನು ಕೆಳಗಿಟ್ಟು ಏಳುವಾಗ ಅವರೆಲ್ಲರಲ್ಲಿ ಜಯಂತಿ ದೇಸಾಯಿಯ ಬಗ್ಗೆ ಮೂಡಿದ್ದು ತಿರಸ್ಕಾರ ಭಾವನೆ ಮಾತ್ರ.

ಮನರಂಜನೆಯ ಕಾರ್ಯಕ್ರಮ ಮುಗಿಯಲು ರಾತ್ರಿ ಒಂಭತ್ತು ಗಂಟೆಯಾಯಿತು. ರಾತ್ರಿ ಚಳಿ ಹೆಚ್ಚಾಗುವುದೆಂದು ಶ್ರೀಮತಿ ಸುಬ್ಬಯ್ಯ ಮೊದಲೇ ಹೋಗಿ ಬಿಟ್ಟಿದ್ದರು. ದೇಸಾಯರು ಯಾರೊಡನೆಯೋ ಮಾತನಾಡುತ್ತಿದ್ದುದರಿಂದ ಜಯಂತಿ ಒಬ್ಬಳೇ ವರಾಂಡದಲ್ಲಿ ನಿಂತು ಗಂಡನ ದಾರಿ ಕಾಯುತ್ತಿದ್ದಳು. ಉಳಿದ ಹೆಣ್ಣು ಮಕ್ಕಳೆಲ್ಲ ತಮ್ಮ ತಮ್ಮ ಸ್ವೆಟರು, ಶಾಲು ಸರಿಮಾಡಿಕೊಂಡು ವರಾಂಡಕ್ಕೆ ಬಂದಾಗ ಅವರನ್ನು ನೋಡಿ

ನಸುನಕ್ಕಳು ಜಯಂತಿ.

ಸುಮನಾಳಿಗೆ ಏನೋ ಯೋಚನೆ ಹೊಳೆಯಿತು. ನೇರವಾಗಿ ಅವಳು ನಿಂತಲ್ಲಿಗೆ ಹೋಗಿ "ಅಲ್ರೀ ನೀವು ಕಿವಿಯೊಳಗಿನವು ಯಾಕ ಹಾಕ್ಕೊಂಡಿಲ್ಲಾ?" ಎಂದಳು.

"ಯಾಕ ? ಹಾಂಗs ಇದ್ದರ ಛೊಲೋ ಕಾಣಿಸೂದಿಲ್ಲೇನು ?" ಎಂದಳು ಜಯಂತಿ ನಗುತ್ತ.

"ಅಲ್ಲಾ ಫ್ಯಾಷನ್‌ಕ ಬಿಟ್ಟಿರೋ, ಏನ ವಜ್ರದ ಓಲೇನs ಹಾಕಬೇಕೂ ಅಂತ...." ಅವಳ ಮಾತು ಮುಗಿಯುವ ಮೊದಲೇ ಜಯಂತಿ ಎಂದಳು. "ಎರಡೂ ಅಲ್ಲಾ. ಫ್ಯಾಷನ್ ನನಗ ಸೇರೂದಿಲ್ಲಾ. ಮತ್ತ ಎರಡನೆಯದು ಅಂದರs ವಜ್ರದ ಓಲೆ ನಮ್ಮತ್ತೆ ಮದುವೆಯೊಳಗs ನನಗಿಟ್ಟರು. ಆದರೆ ಕಿವಿ ನೋವಾಗ್ತದ ಅಂತ ತೆಗೆದ ಇಟ್ಟೇನಿ. ಏನು ಔಷಧ ಹಚ್ಚಿದರೂ ಕಡಿಮಿ ಆಗೂದಿಲ್ಲ. ಕಿವಿಯೊಳಗೆ ಅವನ್ನು ಹಾಕಿದ ಕೂಡಲೆ ನೋವಾಗ್ತದ, ಹಸಿಯಾಗ್ತದ. ಅದಕ್ಕs ಹಾಕೂದು ಬಿಟ್ಟೇನಿ, ಮತ್ತೇನಿಲ್ಲಾ" ಎಂದು ಸ್ವಲ್ಪ ಹೊತ್ತು ತಡೆದು "ಹೊತ್ತು ಭಾಳ ಆತು ನೋಡ್ರಿ ನಮ್ಮ ಅತ್ತೆಯವರು ಒಬ್ಬರs ಇದ್ದಾರ ಮನೀಯೊಳಗ, ಮೈದುನ ನಾದಿನಿ ಎಲ್ಲಾರೂ ಸಿನಿಮಾಕ್ಕೆ ಹೋದರು. ನಮ್ಮ ಕೂಡ ಬರ್ರಿ ಅಂದರು ಇವರು, ನಾ ಒಲ್ಲೇ ಗಂಡಾ-ಹೆಂಡತಿ ನೀವೇ ಹೋಗಿ ಬರ್ರಿ ಅಂದರು" ಎಂದಳು.

ಅಷ್ಟರಲ್ಲಿ ಗಂಡ ಬಂದದ್ದರಿಂದ ಸುಮನಾ ಮತ್ತು ಉಳಿದವರತ್ತ ಹೊರಳಿ ನಗುತ್ತ "ಹೋಗಿ ಬರ್ತೇವಿ ನಮಸ್ಕಾರ" ಎಂದಳು ಜಯಂತಿ.

ಸುಮನಾ ಪ್ರಶ್ನಾರ್ಥಕ ದೃಷ್ಟಿಯಿಂದ ಉಳಿದವರತ್ತ ನೋಡಿದಳು. ಅವಳ ಗೆಳತಿಯರೂ ಒಬ್ಬರನ್ನೊಬ್ಬರು ನಿಟ್ಟಿಸಿದರು.

ಅಷ್ಟರಲ್ಲಿ ಗಂಡ ಬಂದದ್ದರಿಂದ ಎಲ್ಲರಿಗೂ ನಮಸ್ಕಾರ ಹೇಳಿ ಜಯಂತಿ ಗಂಡನೊಡನೆ ಹೊರಟಳು.

ಅವಳ ಬಗ್ಗೆ ತಾವು ಕಟ್ಟಿದ ಊಹೆ ನಿಜವಾಗದುದಕ್ಕೆ ಇವರು ನಿರಾಶೆಯಿಂದಲೆ ಒಬ್ಬರೊಬ್ಬರ ಮುಖ ನೋಡಿಕೊಂಡರು.

# "ಮೈ ಸರಿಯಿಲ್ಲಾರೀೀ"

ನೂರ ಮೂವತ್ತು ಪೌಂಡು ತೂಕ. ಆರೋಗ್ಯದಿಂದ ಕಳಕಳಿಸುವ, ನಗುಮುಖ ಇದ್ದಂಥಾ ನನ್ನ ಗೆಳತಿ ಗೌರಿ ಇದ್ದಕ್ಕಿದ್ದ ಹಾಗೆ 'ನನಗೆ ಮೈ ಸರಿ ಇಲ್ಲಾ' ಎಂದು ಬಿಟ್ಟಳು. ನನಗಂತೂ ಆಶ್ಚರ್ಯದಿಂದ ಮುಖ ಮುಖ ನೋಡುವ ಹಾಗಾಯಿತು. ಸಂದರ್ಭ ತಿಳಿದ ಮೇಲೆ ಅವಳು ಹೇಳಿದ್ದು ಸರಿ ಎನ್ನಿಸ್ತು.

ಅಂದು ಮಧ್ಯಾಹ್ನ ಸ್ವಲ್ಪ ಪುರುಸತ್ತಾಗಿದ್ದರಿಂದ ಗೌರಿಯ ಮನೆಗೆ ಹೋಗಿದ್ದೆ. ನಾನೂ ಅವಳೂ ಬಾಲ್ಯದ ಗೆಳತಿಯರು. ಆದರೆ ಭೆಟ್ಟಿಯಾಗುವುದೇ ಅಪರೂಪ. ಅಂದು ನನ್ನನ್ನು ಕಂಡು ಬಹಳ ಸಂತೋಷವಾಯಿತು ಅವಳಿಗೆ. ನಾವಿಬ್ಬರೂ ಸ್ವಲ್ಪ ಹೊತ್ತು ಮಾತನಾಡುತ್ತಿದ್ದೆವು. ಬಾಲ್ಯದ ನೆನಪು ನಮಗೆ ನುಗ್ಗಿ ಬಂದುದರಿಂದ ಮಾತು ಬಹಳ ಮೋಜಿನಿಂದ ಸಾಗಿತ್ತು. ಅಷ್ಟರಲ್ಲಿ ಅವಳ ನೆರೆಮನೆಯ ಹುಡುಗಿಯೊಬ್ಬಳು ಬಂದು, 'ಅವ್ವಾ, ಇಂದು ಹಪ್ಪಳ ಹಿಟ್ಟು ನಾದಿದ್ದಾಳಂತ್ರೀ. ಮಣೇ, ಲತ್ತೀಗುಣಿ ಕೊಡ್ರಿ. ಮತ್ತೆ ನೀವೂ ಸ್ವಲ್ಪ ಹೊತ್ತು ಹಪ್ಪಳಾ ಮಾಡಲಿಕ್ಕೆ ಬರಬೇಕಂತೆ' ಅಂದಳು. ಕೂಡಲೇ ಗೌರಿಯ ಮುಖ ಸಪ್ಪಗಾಯಿತು. ಒಳಗೆ ಎದ್ದು ಹೋಗಿ ಮಣಿ, ಗುಣಿ ತಂದು ಅವಳ ಕೈಗೆ ಕೊಟ್ಟು 'ನಿಮ್ಮ ತಾಯಿಗೆ ಹೇಳು ಅವರು ನಾಳೆ ಲಗೂನ ಬಂದು ಹಪ್ಪಳಾ ಮಾಡತಾರಂತ. ಇವತ್ತು ಮೈ ಸರಿ ಇಲ್ಲಾ ಅಂತ ಹೇಳು' ಎಂದು ಹೇಳಿ ಅವಳನ್ನು ಕಳಿಸಿ ನನ್ನತ್ತ ತಿರುಗಿ 'ಎಂದೂ ಇಲ್ಲದ ಇವತ್ತೆ ನೀ ನಮ್ಮ ಮನೀಗೆ ಬಂದೀದಿ. ನಾ ಹಪ್ಪಳಾ ಮಾಡಲಿಕ್ಕೆ ಹೋಗಲ್ಯಾ ಅವರ ಮನೀಗೆ. ಅದನ್ನ ತಪ್ಪಿಸಲಿಕ್ಕೇ ಈ ಕುಂಟು ನೆವ' ಎಂದು ನಸು ನಕ್ಕಳು.

ಒಲ್ಲದ ಗೆಳೆಯನನ್ನು ಕಟ್ಟಿಕೊಂಡು ಮನೆಗೆ ಬಂದ ಗಂಡ ಹೆಂಡತಿಯ ಕಿವಿಯಲ್ಲಿ ಹೇಳಿದ "ಏನೋ ಕೆಲಸಕ್ಕೆ ಬಂದನಾಂತ. ರಾತ್ರಿ ಊಟಕ್ಕೆ ಇಲ್ಲೇ ನಿಲ್ಲೂ ಹಾಂಗ ಕಾಣ್ತದ. ಇನ್ನೇನ್ಮಾಡಬೇಕು ?" ಎಂದು. ನಾ ಎಲ್ಲಾ ಉಪಾಯ ಮಾಡ್ತೀನಿ, ನೀವು ಮಾತಾಡಿ ಕೋತ ಸುಮ್ಮನ ಕೂಡ್ರಿ ಹೋಗಿರಿ ಎಂದ ಗೃಹಿಣಿ ಸ್ವಲ್ಪ ಹೊತ್ತಿಗೆ ಹಣೆಗಷ್ಟು ನೀಲಗಿರಿ ಎಣ್ಣೆ ತಿಕ್ಕಿಕೊಂಡು ಮುಖ ಕಿವುಚಿಕೊಳ್ಳುತ್ತ ಬಾಗಿಲ ಬಳಿ ಬಂದು ನಿಂತಳು.

ಗಂಡನ ಗೆಳೆಯನಿಗೆ "ಏನೋ ಅಪರೂಪಕ್ಕೆ ಬಂದ್ರಿ ನಮ್ಮನೀಗೆ ಭಾಳ ಸಂತೋಷ ಆತು ನಮಗೂ. ಆದರ ಈ ತಲೆನೋವು ನನಗೆ ಹಾಸಿಗಿ ಬಿಟ್ಟು ಏಳಗೊಡವಲ್ಲದು, ಶುಂಠಿ ಆತು, ಮೆಂಥೇಲ್, ಸಾರಿಡಾನ್. ಅನಾಸಿನ್ ಯಾವುದಕ್ಕೂ ಜಗ್ಗವೊಲ್ಲದು. ನನಗ ಆರಾಮ ಇದ್ರ ರಾತ್ರಿ ಊಟಕ್ಕೆ ನಿಲ್ಲತಿದ್ರಿ. ನೀವು ಬಂದ ಹೊತ್ತಿನ್ಯಾಗ ಹಿಂಗಾತು. ನಮಗ ಭಾಳ ಕೆಟ್ಟ ಅನ್ನಿಸೇದ ನೋಡ್ರಿ" ಎಂದಳು ಮಾತಿಗೊಮ್ಮೆ ನರಳುತ್ತ. ಅದಕ್ಕೆ ಗೆಳೆಯ "ಛೇ, ಛೇ, ಹಾಗ್ಯಾಕ ತಿಳಿಕೋತೀರಿ ನೀವು ? ಆರಾಮ ತೊಗೊಳ್ರೀ. ಅದು ಮುಖ್ಯ. ನನ್ನ ಊಟದ್ದೇನು ? ಮತ್ತೊಮ್ಮೆ ಬಂದಾಗ ಬರ್ತೀನಿ" ಎನ್ನುತ್ತ ಕೈಚೀಲ ಹಿಡಿದು ಎದ್ದೇ ಬಿಟ್ಟ.

"ಏನs ಏ ಬಾ ಇಲ್ಲೆ" ಗಾಬರಿಯಾಗಿ ಗಂಡ ಕೂಗಿದ.

"ಏನ್ರೀ ಅದು, ಯಾಕೋ ಎಷ್ಟು ಅವಸರಾ ಮಾಡ್ತೀರಿ, ಯಾರ ಪತ್ರ ಅದು ?"

"ಶಾಲಿನಿ ಪತ್ರಾ ಬರದಾಳ."

"ಏನಂತ ? ಆರಾಮ ಆದಾರೇನು ಎಲ್ಲಾರೂ ?"

"ಆರಾಮ ಆದಾರ. ಆಕಿ ಗಂಡ ಹದಿನೈದು ದಿನ ರಜಾ ತೋಗೋತಾರಂತ. ಆಕಿ ಗಂಡ, ನಾಲ್ಕು ಮಕ್ಕಳು ಎಲ್ಲರೂ ಸೂಟಿಗೆ ಇಲ್ಲಿಗೇ ಬರಬೇಕಂತ ಮಾಡ್ಯಾರಂತ. ಅತ್ತಿಗೀಗೆ ನಮಸ್ಕಾರ ಹೇಳ್ಯಾಳ ಮತ್ತ ಮ್ಯಾಲೆ."

"ಆಯ್ತು ನಂದೂ ನಮಸ್ಕಾರ ಹೇಳ್ರಿ. ನಿಮ್ಮ ತಂಗೀಗೆ ಸ್ವಲ್ಪೂ ಬುದ್ಧಿ ಇಲ್ಲ. ಏನು ಈಗಿನ ಕಾಳು-ಕಡಿ, ನೀರಿನಂಥ ಹಾಲು ರೂಪಾಯಿಗೆ ಆರು ಪಾವು. ಬೆಣ್ಣೆ ಅಂತೂ ಸೇರಿಗೆ ಒಂದು ರೂಪಾಯಿ ಎಂಟಾಣೆ. ಇಂಥಾ ದಿನದಾಗ ಬರೂ ಪಗಾರಕ ಮನೀ ಖರ್ಚಿಗೆ ಹ್ಯಾಂಗ ಬಾಯಿ ಗೂಡಿಸಬೇಕು.... ಅಂತ ನಾವು ಒದ್ದಾಡ್ತೀವಿ. ಇವರು ಆರಾಮ ತೊಗೊಳ್ಳೂಲಿಕ್ಕೆ ಆರು ಮಂದಿ ಬಂದರ ಹ್ಯಾಂಗ ಮಾಡ್ಬೇಕೂ ಅಂತೀನಿ,"

"ನನಗೂ ಆದ ಚಿಂತಿ ಹತ್ತೇದ ಈಗ. ಈ ತಿಂಗಳು ಪ್ರೀಮಿಯಂ ಬ್ಯಾರೆ ತುಂಬಬೇಕು. ಅವರಿಗೆ ಸಹಾಯಾರ್ಥ, ಇವರಿಗೆ ಸಹಾಯಾರ್ಥ, ಅಂತ ಹೇಳೇ ಪಗಾರದಾಗಿನ್ನೂ 25 ರೂಪಾಯಿ ಹೋಗ್ಯಾವ ಈಗ. ಹ್ಯಾಂಗರೆ ಮಾಡಿ ತಪ್ಪಿಸಬೇಕು ಇವರ್ನ. ಆದ್ರ ಏನ್ ಮಾಡಬೇಕು ?"

"ಅದರೊಳಗೇನದ ಬರೀರಿ : ಮನೀಯಾಕೆಗೆ ಮೈಯಾಗ ಆರಾಮ ಇಲ್ಲಾ. ಹಾಸಿಗಿ ಹಿಡದಾಳ. ಔಷಧ ಇಂಜೆಕ್ಷನ್ ಸುರೂ ಆದ. ಕಾಳಜೀ ಮಾಡೂ ಕಾರಣೆಲ್ಲ.

ಸಾಲಿಗೆ ಹೋಗೂ ಮಂಜುಳಾನs ಅಡಿಗೀ ಮಾಡತಾಳ. ನಾನೂ ಅಷ್ಟು ನೆರ ವಾಗ್ತೀನಿ" ಅಂತ.

"ಅಲ್ಲ ಮತ್ತು ಖರೇನ ನೀ ಮಲಕೊಂಡೀದಿ, ಅಣ್ಣಗ ತ್ರಾಸಾಗ್ತದ ಅಂತ ಶಾಲಿನಿ ಬಂದ ಬಿಟ್ಟರ ಹ್ಯಾಂಗ ?"

"ಅಲ್ರೀ ನೀವೂ ಶಾಣ್ಯಾರು. ವಿಶ್ರಾಂತಿಗಂತ ರಜಾ ತಗೊಂಡವರು, ಆರಾಮ ಆಗಿ ಇರುವವರು, ಅದೆಲ್ಲಾ ಬಿಟ್ಟು ತನ್ನ ಮಕ್ಕಳ್ನ ಕರಕೊಂಡು ನಮ್ಮ ಐದಾರು ಮಂದಿ ಚಾಕರಿ ಮಾಡಾಕ ಬರ್ತಾಳೇನು ? ಶಾಲಿನಿ ಬರೂದಿಲ್ಲ ಬಿಡ್ರಿ, ನಾ ಹೇಳಿದಾಂಗ ಮಾಡರಿ."

ಈ ಉಪಾಯ ಯಶಸ್ವಿ ಆದಾಗ ಗಂಡ ಹೆಂಡತಿಗೆ ಬಹಳ ಕೃತಜ್ಞ.

ಒಮ್ಮೊಮ್ಮೆ ಸಂದರ್ಭ ನೋಡಿ ಇದೇ ಉಪಾಯ ತಿರುವು ಮುರುವಾಗಿ ಪ್ರಯೋಗಿಸಲಾಗುತ್ತದೆ :

"ಅಲ್ರೀ ಪಾಟೀಲರ ಹಿರಿಯ ಮಗನ ಲಗ್ನಂತ ಅವರ ಊರಾಗ. ಅವರ ಹೆಂಡತಿ ನೀವು ಲಗ್ನಕ್ಕೆ ಬರಲಿಕ್ಕೇ ಬೇಕು ಅಂತ ಭಾಳ ಒತ್ತಾಯ ಮಾಡಲಿಕ್ಕೆ ಹತ್ಯಾರಲ್ಲ. ಏನ ಮಾಡಲಿ ?"

"ಮಾಡೂದೇನು ? ಹೋಗಿ ಬಾರಲ್ಲ. ಇಷ್ಟು ಪ್ರೀತಿಯಿಂದ ಕರೀತಾರ ಅಂತೀರಿ. ನೀವು ಅವರ ಊರು ನೋಡಿದಾಂಗ ಆಗ್ತದ. ಅವ್ವ ಇರ್ತಾರಲ್ಲ ಮನ್ಯಾಗ."

"ಎರಡ ದಿನಾ ಎಲ್ಲೀದ್ರಿ. ಅವರ ವತನ ಭಾಳ ದೊಡ್ಡದಂತ. ದೊಡ್ಡಗೌಡರು. ಮಗನ ಮದುವಿ ಭರ್ಜರೀ ಮಾಡವರು, ದೊಡ್ಡ ಮಂದಿ. ಅದಕ್ಕ ಸರಿಯಾಗಿ ಛೊಲೋ ಉಡುಗರಿ ಕೊಡಬೇಕಲ್ಲ ನಾವು. ಅದಕ್ಕ ವಿಚಾರ ಮಾಡಲಿಕ್ಕೆ ಹತ್ತೇನಿ."

"ನೋಡು, ನಿನಗ ತಿಳಿದಾಂಗ ಮಾಡು. ಪ್ರಜೆಂಟ ತರಲಿಕ್ಕೆ ಈಗ ನನ್ನ ಹತ್ತರಂತೂ ರೊಕ್ಕ ಇಲ್ಲಾ. ತಂದರ ಉದ್ದರೀ ತರಬೇಕು"

ಆಫೀಸಿಗೆ ಹೋದ ಗಂಡ ಸಂಜೆ ತಿರುಗಿ ಮನೆಗೆ ಬಂದಾಗ ಮದುವೆಗೆ ಹೋಗದೇ ಇದ್ದ ಹೆಂಡತಿಯನ್ನು ಹೋಗಿ ಕೇಳಿದ.

"ಯಾಕ ಹೋಗಲಿಲ್ಲೇನು ? ಅವರಿಗೇನು ಕಾರಣಾ ಹೇಳಿದಿ?"

"ಪಾಟೀಲರ ಹೆಂಡತೀನೇ ಕರೀಲಕ್ಕೆ ಬಂದಿದ್ದರು. ಥಟ್ಟನ ಒಂದು ಉಪಾಯ ಹೊಳೀತು. ನಮ್ಮ ಯಜಮಾನರಿಗೆ ಮೈಯಾಗ ಆರಾಮ ಇಲ್ರೀ. ನಿನ್ನೆ ರಾತ್ರಿಯಿಂದ ಹೊಟ್ಟೆ ನೋಯ್ತದಂತ. ಈಗ ಡಾಕ್ಟರ ಕಡೆಗೆ ಹೋಗ್ಯಾರ ಅವರ್ನ ಬಿಟ್ಟು ಹ್ಯಾಂಗ ಬರಲಿ ಅಂದೆ. ಅಯ್ಯೋ ಪಾಪ ; ಹಿಂಗಾಯ್ತ ಅಂದು ಹೋದರು" ಎನ್ನುತ್ತ ವಿಜಯದ

ನಗೆ ನಗುತ್ತಾಳೆ. ಹೆಂಡತಿ.

ಅವರಿಬ್ಬರೂ ನವದಂಪತಿಗಳು. ಅವರು ಇರುವ ಕುಟುಂಬ ಬಹಳ ದೊಡ್ಡದು. ಮನೆ ತುಂಬ ಜನ, ಅತ್ತೆ, ಮಾವ, ಭಾವ, ಮೈದುನ, ನಾದಿನಿ, ನೆಗೆಣ್ಣಿಯರು, ಎಲ್ಲರ ಇದಿರು ಮಾತನಾಡಲು ಈ ದಂಪತಿಗಳಿಗೆ ಇನ್ನೂ ಸಂಕೋಚ, ಹೆಂಡತಿಯೊಡನೆ ತಿರುಗಾಡಲು ಹೊರಗೆ ಹೋಗಬೇಕು, ಮಾತಾಡಬೇಕು, ನಗಬೇಕು, ಕೆಲೆಯಬೇಕು ಎಂದು ಗಂಡನಿಗೆ ಆಸೆ. ಆದರೆ ಮನೆಯ ಜನರ ನಡುವೆ ಇವರ ಏಕಾಂತಕ್ಕೆ ಬಿಡುವೇ ಸಿಗುತ್ತಿದ್ದಿಲ್ಲ.

ಒಂದು ಆದಿತ್ಯವಾರ ಮಧ್ಯಾಹ್ನ ಮಗ ಗಾಬರಿಯಾಗಿ ತಾಯಿಯ ಹತ್ತಿರ ಬಂದು ಹೇಳಿದ : "ಅವ್ವಾ, ಅವಳಿಗೆ ಹೊಟ್ಟೆನೋವು ಬಂದದ, ಬಹಾಳ ತ್ರಾಸಾಗ್ತದ ಅಂತ" "ಅಯ್ಯ ಮುಂಜಾನೆ ಆರಾಮ ಇದ್ಲಲ್ಲಾ, ಏನಾಯ್ತಪಾ" ರಾಗವೆಳೆದಳು ತಾಯಿ. ಹತ್ತಿರವೇ ಇದ್ದ ಅವನ ಅತ್ತಿಗೆಯೊಬ್ಬಳು ಸಲಹೆ ಕೊಟ್ಟಳು. "ಹ್ಯಾಂಗೂ ಆದಿತ್ಯವಾರ, ಸೂಟಿ ಅದ, ನೇರ ಡಾಕ್ಟರರ ಕಡೆ ಕರಕೊಂಡು ಹೋಗಿ ಬರ್ರೆಲಾ." ಮಗನಿಗೆ ಅತ್ತಿಗೆಯ ಸಲಹೆ ಮನಸ್ಸಿಗೆ ಬಂದಿತು. ಅವ್ವನ ಒಪ್ಪಿಗೆ ಪಡೆದು ಹೆಂಡತಿಯನ್ನು ದವಾಖಾನಿಗೆ ಕರೆದುಕೊಂಡು ಹೊರಟೇಬಿಟ್ಟ. ಮಧ್ಯಾಹ್ನದ ಮ್ಯಾಟಿನಿ ಸಿನೀಮಾ ನೋಡಿ ಒಳ್ಳೇ ಖುಷಿಯಿಂದ ಬಂದ ಗಂಡ ಹೆಂಡತಿಯರಿಗೆ ತಮ್ಮ ಗುಟ್ಟು ಯಾರಿಗೂ ಗೊತ್ತೇ ಇಲ್ಲವೆನ್ನುವ ಭಾವನೆಯಿತ್ತು.

ಅಡಿಗೆ ಮನೆಯಿಂದ ಹೊರಬರುತ್ತಾ ಅವ್ವ ಕೇಳಿದಳು "ಏನಪಾ ಏನಂದ್ರು ಡಾಕ್ಟರು. ಹೊಟ್ಟೆನೋವು ಯಾಕೆ ಬಂದಿತ್ತಂತ ?" "ಏನಿಲ್ಲವಾ ಅಜೀರ್ಣ ಆದಂಗ ಆಗಿತ್ತಂತ. ಔಷಧಿ ಬ್ಯಾಡಾ ಅಂತ ಹೇಳಿ ಗುಳಿಗೆ ಕೊಟ್ಟಿದ್ರು. ಅಲ್ಲೆ ನುಂಗಿದಳು. ಈಗ ಅರಾಮು ಅದಾಳ. ರಾತ್ರಿ ಊಟಾ ಕಡಿಮೆ ಮಾಡು ಅಂತ ಹೇಳಿದರು." ಮಗ ಸುಳ್ಳು ಪೋಣಿಸಿದ. ಸಮಾಧಾನದಿಂದ ಅವ್ವ ಒಳಗೆ ಹೋದ ಮೇಲೆ ಅಣ್ಣ ತಮ್ಮನ ಬೆನ್ನು ಚಪ್ಪರಿಸಿ ಕೇಳಿದ. "ಯಾಕಪಾ ಹ್ಯಾಂಗಿತ್ತು ಸಿನಿಮಾ?" ಎಂದು. ತಮ್ಮ ಗಾಬರಿಯಾಗಿ ಕಣ್ಣು ಕಣ್ಣು ಬಿಟ್ಟ. "ಬಿಡೋ ನಿನ, ಅಷ್ಟ್ಯಾಕ ಗಾಬರಿಯಾಗ್ತಿ. ನೀವು ಸಿನಿಮಾಕ್ಕೆ ಹೋಗಿದ್ದಿರಿ ಅನ್ನೊದು ನನಗ ಗೊತ್ತಿಲ್ಲೇನು ? ನಾವೂ ಎಲ್ಲಾ ಹಿಂಗ ಮಾಡಿದವರ. ಮೈಯಾಗ ಆರಾಮು ಇಲ್ಲಾ ಅನ್ನೂ ಸೋಗು ಹಾಕಿ ಸಿನಿಮಾ ಹೋಟೆಲ್ಲು ಎಲ್ಲಾ ಮುಗಿಸಿ ಬಂದೀವಿ ನಾವೂ" ಎನ್ನುತ್ತ ತನ್ನ ಹೆಂಡತಿಯ ಕಡೆ ನೋಡಿ ನಕ್ಕ. ಆಗ ತಮ್ಮ ಮನಸ್ಸು ಬಿಚ್ಚಿ ಗಟ್ಟಿಯಾಗಿ ನಕ್ಕು ಹೆಂಡತಿಗೆ ಹೇಳಿದ:

'ರಾತ್ರಿ ಬರೆ ಅನ್ನ-ಸಾರು ಊಟಾ ಮಾಡು. ಗುಲಾಬ ಜಾಮೂನು, ದೋಸೆ ತಿಂದೀಯಲ್ಲಾ ಹೋಟಲಿನ್ಯಾಗ" ಎಂದು.

ಅವನು ಒಂದು ಕಚೇರಿಯಲ್ಲಿ ಕಾರಕೂನನಾಗಿದ್ದ. ಮನೆಮಾಡಿ ನಾಲ್ಕು ವರುಷಗಳಾಗಿದ್ದವು. ಒಮ್ಮೆ ಮನೆಯವರೊಡನೆ ಗೆಳೆಯರೊಡನೆ ಎಲ್ಲಿಯಾದರೂ ಪಿಕ್‌ನಿಕ್ ಹೋಗಬೇಕೆಂದು ಆಸೆ ಮಾಡಿದ್ದ. ಆಗಾಗ ಹೇಳುತ್ತಲೇ ಇದ್ದ. ಆದರೆ ಒಮ್ಮೆಯೂ ಕೃತಿಗೆ ಇಳಿಯಲಿಲ್ಲ ಅವನ ವಿಚಾರ. ಅದಕ್ಕೆ ಕಾರಣ ಅವನ ಕಚೇರಿಯ ಕೆಲಸ. ದಿನವೂ ಎಂಟು ಗಂಟೆಯವರೆಗೆ ಕೆಲಸ ಮಾಡುವುದಲ್ಲದೇ ಆದಿತ್ಯವಾರವೂ ಅವನಿಗೆ ಕೆಲಸ ಇದ್ದೇ ಇರುತ್ತಿತ್ತು, ಮೇಲಧಿಕಾರಿಯ ಮನೆಯಲ್ಲಿ. ಈ ವಿಷಯಕ್ಕೆ ಆಗಾಗ ಗಂಡ ಹೆಂಡತಿಯರಲ್ಲಿ ವಾಗ್ವಾದ ನಡೆಯುತ್ತಿತ್ತು. ಹೆಂಡತಿಯು ಆಗಾಗ ಹಂಗಿಸುತ್ತಿದ್ದಳು, ನೀವು ಕಚೇರಿಯ ಕೆಲಸದೊಡನೆ ಲಗ್ನ ಮಾಡಿಕೊಂಡಿದ್ದೀರಿ ಎಂದು. ಕಡೆಗೆ ಒಂದು ಸಲ ಗಟ್ಟಿ ಮನಸ್ಸು ಮಾಡಿ ಈ ಆದಿತ್ಯವಾರ ಪಿಕ್‌ನಿಕ್‌ಗೆ ಹೋಗಿಯೇ ತೀರುವದೆಂದು ನಿರ್ಧಾರ ಮಾಡಿದ. ಅದಕ್ಕಾಗಿ ಮನೆಯಲ್ಲಿ ತಯಾರಿ ನಡೆಯಿತು. ಹೊರಡುವ ದಿನವೂ ಬಂದಿತು. ಹತ್ತು ಗಂಟೆಗೆ ಮನೆ ಬಿಡುವದೆಂದು ಗೊತ್ತಾಗಿತ್ತು. ಒಂಬತ್ತು ಗಂಟೆಯಾದಾಗ ತಮ್ಮ ಮೇಲಧಿಕಾರಿಯ ಸಿಪಾಯಿ ಮನೆಯ ಕಡೆಗೆ ಬರುತ್ತಿರುವುದನ್ನು ಕಂಡವನೇ ಗಾಬರಿಯಾಗಿ ಹೆಂಡತಿಯನ್ನು ಕರೆದು ಕಿವಿಯಲ್ಲಿ ಏನೋ ಹೇಳಿ ಕೋಣೆಗೆ ಹೋದವನೇ ಹಾಸಿಗೆಯ ಮೇಲೆ ಮಲಗಿಬಿಟ್ಟ. ಸಿಪಾಯಿ ಮನೆಯ ಬಾಗಿಲಿಗೆ ಬರುವ ಹೊತ್ತಿಗ ಅವನ ನರಳಾಟ ಜೋರಾಗಿತ್ತು. ಹೆಂಡತಿ ಶುಂಠಿ ತೇಯ್ದು ಕೈಯಲ್ಲಿ ಹಿಡಿದುಕೊಂಡೇ ಹೊರಗೆ ಬಂದಳು. "ಬಾರಪಾ, ನಿನ್ನೆ ರಾತ್ರಿಯಿಂದ ಜ್ವರಾ ಭಾಳ ಬಂದಾವ ಇವರಿಗೆ. ಒಂದೆರಡು ಸಾರೆ ವಾಂತೀನೂ ಆತು. ಪಿತ್ತ ಆಗೇದೋ ಏನೋ" ಅಂದಳು ಸಿಪಾಯಿಗೆ. ಅವನು ಕೋಣೆಗೆ ಹಣಿಕಿ ನೋಡಿ "ಆರಾಮ ತೋಗೊಳ್ಳೀಟ್ರಿ. ನಾ ಹೇಳ್ತೀನಿ ಸಾಹೇಬರಿಗೆ ಅವರಿಗೆ ಜ್ವರಾ ಬಂದಾವಂತ. ನಾ ಹೋಗಿ ಬರ್ತೇನ್ರಿ. ಬಾಯಾರ" ಎನ್ನುತ್ತ ಹೋದ. ಕೂಡಲೆ ಮುಸುಕು ತೆಗೆದು ಎದ್ದು ಕುಳಿತ ಗಂಡ "ನಡೀ ಇನ್ನ ಅಡಿಗೀಮನೀಗೆ ಹೊತ್ತಾತು. ಈಗ ಎಲ್ಲಾರೂ ಬರ್ತಾರ" ಎಂದ.

ಮತ್ತೊಬ್ಬರ ಮನೆಯಲ್ಲಿಯ ಬೇರೊಂದು ಸಮಸ್ಯೆಗೆ ಪರಿಹಾರ ಸಿಗುತ್ತದೆ ಇದೇ ಉಪಾಯದಿಂದ.

"ನೋಡ್ರಿ ಇವತ್ತು ಮಧ್ಯಾಹ್ನ ಒಂದು ಮೋಜಾಯ್ತು."

ಪೇಪರು ಓದುತ್ತಿದ್ದ ಗಂಡ ಇನ್ನು ತನ್ನ ಓದು ಮುಂದೆ ಸಾಗುವದು ಸಾಧ್ಯವೇ ಇಲ್ಲವೆಂದು ಗೊತ್ತಾಗಿ ಪೇಪರು ಬದಿಗಿಟ್ಟು ಹೆಂಡತಿಯ ಮಾತಿಗೆ ಕಿವಿಗೊಟ್ಟ.

"ಮಹಿಳಾ ಸಮಾಜದ ಕಾರ್ಯದರ್ಶಿ ಶಾರದಾಬಾಯಿ ನಮ್ಮ ಮನೆಗೆ ಬಂದಿದ್ದರು. ನಾಳೆ ಸಂಜೆಗೆ ಸಮಾಜದಲ್ಲಿ ಭಾಷಣ ಕಾರ್ಯಕ್ರಮವಂತೆ. ಆ ಸಭೆಯ ಅಧ್ಯಕ್ಷತೆ ನಾನು ವಹಿಸಬೇಕೂಂತ ಹೇಳಿದರು. ನಾನು ಆಗುವುದಿಲ್ಲ ಎಂದೆ. ಬಹಳ ಒತ್ತಾಯ ಮಾಡಿದರು. ಪದವೀಧರರಾದ ನೀವು ಒಲ್ಲೆ ಅಂದರೆ ಹೇಗೆ ಅಂದರು.'

"ಒಪ್ಪಿಕೋಬೇಕಾಗಿತ್ತು."

"ಏನ್ರೀ ನೀವೂ ಹೀಂಗ ಅಂತೀರಿ. ನನಗೆ ಭಾಷಣ ಮಾಡಲಿಕ್ಕೆ ಬರೂದಿಲ್ಲ. ವೇದಿಕೆ ಏರಿದೆ ಅಂದರ ಕಾಲು ನಡಗ್ತಾವ. ಇನ್ನ ಭಾಷಣಾ ಮಾಡುದಂತೂ ದೂರ ಉಳೀತು."

"ಅವರಿಗೆ ಏನು ಕಾರಣಾ ಹೇಳಿದಿ?"

"ಎರಡು ದಿನದ ಹಿಂದೆ ಫ್ಲೂ ಆಗಿತ್ತು. ಆ ಜ್ವರದ ನಿಶ್ಶಕ್ತತನಾ ಇನ್ನೂ ಅದ. ಬಹಾಳ ಹೊತ್ತು ಕೂಡ್ರುದು ಆಗೂದಿಲ್ಲ. ಇಂಥಾ ಸ್ಥಿತಿಯೊಳ ಸಮಾಜಕ್ಕೆ ಹ್ಯಾಂಗ ಬರಲಿ ಅಂದೆ. ಸುಮ್ಮನ ಹೋದರು. ಒಂದು ದೊಡ್ಡ ಕುತ್ತದಿಂದ ಪಾರಾದಂಗಾತು ನೋಡ್ರಿ ನನಗೆ" ಗೃಹಿಣಿ ಹಾಯಾಗಿ ಉಸಿರು ಬಿಡ್ತಾಳೆ.

ತಮಗೆ ಬೇಡದ ಕೆಲಸಗಳನ್ನು ತಪ್ಪಿಸಲಿಕ್ಕೆ ಬೇಡವಾದಾಗ ಹೊರಗೆ ಹೋಗುವುದನ್ನು ತಪ್ಪಿಸಲಿಕ್ಕೆ ಹೆಣ್ಣು ಮಕ್ಕಳಿಗೆ "ಮೈ ಸರಿ ಇಲ್ಲಾರೀ" ಎನ್ನುವುದೊಂದು ರಾಮಬಾಣ. ಎಲ್ಲ ರೋಗಗಳಿಗೂ ಈ ಔಷಧಿ ಸರಿಯಾಗಿ ನಾಟುತ್ತದೆ. ಯಾರು ಬೇಕಾದರೂ ಇದರ ಪ್ರಯೋಗ ಮಾಡಿ ನೋಡಬಹುದು.

"ಮೈ ಸರಿ ಇಲ್ಲಾ" ಎಂದು ಕೇಳಿದ ಮೇಲೆ ಸುಮ್ಮನಿರುವದು ಹೇಗೆ? 'ಏನಾಗಿದೇರಿ' ಎನ್ನುವ ಅನುಕಂಪದ ಪ್ರಶ್ನೆ ಬಂದೆ ಬರುತ್ತದೆ. ಅದಕ್ಕೆ ಕಣ್ಣಿಗೆ ಕಾಣದ ತಲೆನೋವು, ಹೊಟ್ಟೆನೋವು ಯಾವುದಾದರೊಂದು ಸುಳ್ಳು ಉತ್ತರ ಸಿದ್ಧವಾಗಿರಲೇ ಬೇಕು. ಅಷ್ಟಕ್ಕೇ ಸುಮ್ಮನಾಗುವವರೇ ಆ ಸಹೃದಯಿಗಳು, 'ಅಯ್ಯೋ ಹೀಗೆ ಮೇಲಿಂದ ಮೇಲೆ ತಲೆನೋವು ಬರೋದು ಒಳ್ಳೇದಲ್ರಿ. ಕಣ್ಣಿನ ತಜ್ಞರನ್ನು ನೋಡಿರಿ ಇಲ್ಲವೇ ಮೆದುಳಿನ ತಜ್ಞರನ್ನು ಕಾಣಿರಿ' ಎಂದು ನಿಮ್ಮ ಹಿತಚಿಂತನೆ ಮಾಡುತ್ತಾರೆ. ಒತ್ತಾಯದಿಂದ ನಿಮ್ಮನ್ನು ಮಲಗಿಸಿ ತಾವೂ ಕೂತು ಒಂದು ಒಂದೂವರೆ ಗಂಟೆಯವರೆಗೆ ನಿಮಗೆ ಆರೋಗ್ಯದ ಬಗ್ಗೆ ಎಲ್ಲ ಪಾಠಗಳನ್ನು ಕಲಿಸಿಕೊಟ್ಟು ಹೋಗುತ್ತಾರೆ. ಆದರೆ ಅವರು ಹೋಗುವ

ಹೊತ್ತಿಗೆ ನಿಮಗೆ ನಿಜವಾಗಿಯೂ ತಲೆನೋವು ಬಂದಿರುವ ವಿಷಯ ನಿಮ್ಮ ಗಮನಕ್ಕೆ ಬರುತ್ತದೆ.

ಇದುವರೆಗೆ 'ಮೈ ಸರಿ ಇಲ್ಲಾರೀ' ಎನ್ನುವ ಉಪಾಯವನ್ನು ಬೇರೆ ಬೇರೆಯವರು ಪ್ರಯೋಗಿಸಿದ್ದನ್ನು ಹೇಳಿದೆ. ಈ ಉಪಾಯವನ್ನು ನಾನು ಪ್ರಯೋಗಿಸಿದ್ದೇನೆಯೇ ಎಂದು ನೀವು ಕೇಳಬಹುದು. ಓಹೋ ಅದಕ್ಕೆ ಸಾಕ್ಷಿ ಇಲ್ಲಿಯೇ ಇದೆ ನಿಮ್ಮ ಕೈಯಲ್ಲಿ. ಒಂದೆರಡು ದಿನಗಳಿಂದ ತಲೆಯಲ್ಲಿ ವಿಚಾರಗಳೆಲ್ಲಾ ಸುಳಿಯುತ್ತಲೇ ಇದ್ದವು. ಅದಕ್ಕೊಂದು ಆಕಾರ ಕೊಡಬೇಕೆಂದರ ಮನೆಗೆಲಸ, ಮಕ್ಕಳ ಉಪಚಾರದಲ್ಲಿ ಬಿಡುವೇ ಆಗಲಿಲ್ಲ. ಕಡೆಗೊಮ್ಮೆ ಹೇಳಿಯೇಬಿಟ್ಟೆ, ನಮ್ಮವರಿಗೆ, "ನೋಡ್ರಿ ಈ ದಿನ 'ಮೈ ಸರಿ ಇಲ್ಲಾ' ನಾನು ಅಡುಗೆ ಮನೆಗೆ ಬರಲಾರೆ" ಎಂದು. ಅದರ ಫಲ ಈ ಲೇಖನ.

# ಮಲ್ಲಿಕಾಮಾಲಾ ವೃತ್ತ

'ಮಲ್ಲಿಕಾ' ನಮ್ಮ ಮನೆಗೆ ಬಂದಾಗಿನಿಂದ ನಮ್ಮ ಯಜಮಾನರಿಗೆ ಬಹಾಳ ಖುಷಿ. ಆಫೀಸು, ಸ್ನಾನ, ಊಟ, ಪೇಪರ್ ವಾಚನ ಅಷ್ಟು ಹೊತ್ತು ಬಿಟ್ಟು ಉಳಿದ ವೇಳೆ ಎಲ್ಲಾ ಅವಳ ಜೊತೆಗೆ ಚಿನ್ನಾಟ ಆಡೂದರಾಗ ಕಳಿತಾರ. ಊಟಾ ಮಾಡೂ ಮುಂದೂ ಅವಳು ಮಗ್ಗುಲಲ್ಲಿ ಇರಬೇಕು. ಬಿಸಿ ರೊಟ್ಟಿಗೆ ಬೆಣ್ಣೆ ಸವರಿ ಅವಳ ಬಾಯೊಳಗಿಡುತ್ತ ತಾವು ಊಟಾ ಮಾಡಬೇಕು. ಪೇಪರ್ ಓದು ಮುಂದಂತೂ ತೊಡೀ ಮ್ಯಾಲೆ ಮಲ್ಲಿಕಾನ್ನ ಮಲಗಿಸಿಕೊಂಡು ಬೆನ್ನ ಮೇಲೆ ಕೈಯಾಡಿಸತಾ ಇರಬೇಕು. ಅವಳು ಮಲಗೂದು ಅವರ ಇಟಾಲಿಯನ್ ರಗ್ಗಿನೊಳಗs ಬೆಚ್ಚಗ.

ಹಸಿವಿ ಆದ ಕೂಡಲೆ ಅಡಿಗಿ ಮನೀಗೆ ಬಂದು ನನ್ನ ಹಿಂದಿನಿಂದ ಮ್ಯಾಂವ್ ಮ್ಯಾಂವ್ ಅನ್ನಕೋತ ಅಡ್ಡಾಡುತ್ತಿದ್ದಳು. ನಾ ಏನೂ ಹಾಕದಿದ್ದರೆ ಅವರ ಕೋಣೆಗೆ ಹೋಗಿ ಕಾಲು ನೆಕ್ಕಿ ನನ್ನ ಬಗ್ಗೆ ತಕರಾರು ಹೇಳುತ್ತಿದ್ದಳು. ಅವಳು ಹೀಗೆ ಚಾಡಿ ಹೇಳತಾಳಂತ ನನಗೆ ಅವಳ ಮ್ಯಾಲೆ ಮತ್ತಿಷ್ಟು ದ್ವೇಷ ಉಕ್ಕುತ್ತಿತ್ತು. ಅವರಿಗೆ ಗೊತ್ತು ನನ್ನ ಸ್ವಭಾವ. ಅದಕ್ಕ ಅವರು ತಾವೇ ಎದ್ದು ಒಳಗೆ ಬಂದು, ಅವಳ ಬಟ್ಟಲ ಹುಡುಕಿ ಹಾಲು ಹಾಕಿ, ಬ್ರೆಡ್ಡು ಚೂರು ಮಾಡಿ ಹಾಕಿ, ತಿನ್ನಿಸಿ ಹೊರಗೆ ಕರೆದುಕೊಂಡು ಹೋಗುತ್ತಿದ್ದರು.

ಇಂಥಾ ಪರಿಯಿಂದ ಇವಳನ್ನ ಮನಿಯೊಳಗ ಯಾಕ ಇಟ್ಟುಕೊಂಡಿರಿ ಅಂತ ಕೇಳತಿರೇನು ? ಹೇಳತೀನಿ ತಡೀರಿ, ನಮ್ಮ ನೆರೆಮನೆಯವರಿಗೆ ವರ್ಗಾಯಿತು. ಬೇರೆ ಊರಿಗೆ ಹೋಗೂ ಮುಂದ ಈ ಮಲ್ಲಿಕಾನ ಇಲ್ಲೇ ಬಿಟ್ಟು ಹೋದರು. ಆಯಿತು, ಇವಳು ನಮ್ಮ ಮನೀ ಸೇರಿಕೊಂಡಳು. ಮೊದಲು ನಾನೂ ಅವಳನ್ನ ಹೊರಗೆ ಹಾಕಬೇಕು ಅಂತ ಪ್ರಯತ್ನ ಮಾಡಿದೆ. ಆದರ ನಾಚಿಕೆ ಬಿಟ್ಟ ಜಾತಿ ಅವಳದು. ಹುಶ್ ! ಅಂದರೂ ನನಗ ಬಾ ಅಂದರು ಅಂತ ತಿಳಿದುಕೊಂಡು ನಮ್ಮ ಕಾಲಿಗೆ ಮೈ ತಿಕ್ಕೂದು, ಸುಮ್ಮನ ಕೂತಾಗ ಬಂದು ಮ್ಯಾಲೆ ಏರೂದು, ಬೆಚ್ಚನ್ನ ಹಾಸಿಗೆಯೊಳಗೆ ತಾನೂ ಬಂದು ಕಾಲ ಚಾಚೂದು ಸುರು ಮಾಡಿದಳು. ನನಗೆ ತಡೀಲಿಲ್ಲ. ಹೀಗೆ ಸಲಿಗಿ ಕೊಟ್ಟರ ತಲೀಗೆ ಏರಿ

ಕೂತಾಳು ಅಂತ ಚೆನ್ನಾಗಿ ಕಸಬರಿಗಿ ಸೇವಾ ಮಾಡಿದೆ. ಮುಂದೆ ನನ್ನ ಬಿಟ್ಟಳು. ಅವರನ್ನ ಬೆಂಬತ್ತಿದ್ದಳು. ಅವರು ತಮ್ಮ ಪ್ರೀತಿ ಎಲ್ಲಾ (ನನ್ನ ಪಾಲಿನದೂS) ಇವಳ ಮ್ಯಾಲ ಸುರಿಸಿದರು. ಇವಳಿಗೂ ಅಷ್ಟS ಬೇಕಾಗಿತ್ತು. ನಮ್ಮ ಮನೆಯೊಳಗ ತನ್ನ ಸ್ಥಾನ ಭದ್ರ ಮಾಡಿಕೊಂಡಳು. ಅಂದಿನಿಂದ ಅವರಿಗೂ ನನಗೂ ಸಿಟ್ಟು-ಸೆಡವು, ಮಾತು-ಜಗಳ, ವಾದ-ವಿವಾದ, ಕಡಿದಾಟ-ಬಡಿದಾಟ ಸುರು ಆದವು.

ಅವರು ಇಷ್ಟೊಂದು ಪ್ರೀತಿ ಮಾಡ್ತಾರ ಇರಲಿ ಅಂತ ಅಥವಾ ಮನೆಯೊಳಗ ಶಾಂತಿ ಇರಲಿ ಅಂತ ತಿಳಿದು ನಾನು ಸಹನೆ ಮಾಡಿಕೋ ಬಹುದಾಗಿತ್ತು ಅನ್ರಿ. ಆದರೆ ಮಲ್ಲಿಕಾ ಡೈನಿಂಗ್ ಟೇಬಲ್ಲಿನ ಕೆಳಗೆ ಧ್ಯಾನ ಮಾಡುವವರ ಹಾಗೆ ಕಣ್ಣುಮುಚ್ಚಿ ಕೂತು ನಾನು ಅಡಿಗೆ ಮನೆ ಬಿಟ್ಟು ಹೊರಗೆ ಬಂದ ತಕ್ಷಣ ಒಳಗೆ ಹೊಕ್ಕು ಹಾಲು, ಮೊಸರು, ಕೆನೆ, ಬೆಣ್ಣೆ ಏನು ಇದ್ದದ್ದೆಲ್ಲಾ ಕಬಳಿಸಲಿಕ್ಕೆ ಪ್ರಾರಂಭ ಮಾಡಿದಳು ನೋಡ್ರಿ. ಒಂದು ಘಳಿಗಿ ಹೊತ್ತು ನಾನು ಅಡಿಗೆಮನೆ ಬಿಟ್ಟು ಕದಲಬಾರದು. ಅದು ಹ್ಯಾಂಗ ಆಗತದ ? ಹಾಲು ತೊಗೋಬೇಕು, ಹುಡುಗರಿಗೆ ಸ್ನಾನಾ ಮಾಡಿಸಬೇಕು, ಅರಿವೀ ತೊಡಿಸಬೇಕು, ದೊಡ್ಡ ಮಕ್ಕಳಿಗೆ ಪುಸ್ತಕ ಹುಡುಕಿ ಕೊಡಬೇಕು, ಅವರಿಗೆ ಕ್ಷೌರಕ್ಕೆ ಬ್ಲೇಡು ತೆಗೆದುಕೊಡಬೇಕು, ದೇವರ ಪೂಜೆಗೆ ಹೂ ತೆಗೀಬೇಕು, ಮಗಳ ತಲೆ ಬಾಚಬೇಕು, ಒಂದ, ಎರಡ ಇವಕ್ಕೆಲ್ಲಾ ಹೊರಗ ಹೋಗಬೇಕಾಗ್ತದ. ಮತ್ತೆ ಅಡಿಗೆ ಮನೆ ಬಿಟ್ಟು ಹೋಗೊವಾಗೊಮ್ಮೆ ಈ ತಿನ್ನುವ ಸಾಮಾನೆಲ್ಲಾ ಎತ್ತಿ ಕಪಾಟಿನೊಳಗ ಇಟ್ಟು ಬಾಗಿಲು ಮುಚ್ಚಿ ಹೋಗಲಿಕ್ಕೆ ಆಗ್ತದS ?

ಅದಕ್ಕS ಇವಳ ಖೊಟ್ಟಿ ಗುಣಾ ನೋಡಿ ನನಗೂ ಸಿಟ್ಟು ಭಾಳ ಬಂದಿತು. ಅವರ ಮುಂದ ಇವಳ ಗುಣ ವರ್ಣನಾ ಮಾಡಿದೆ. ಆದರ ಅದೇನೂ ಪರಿಣಾಮ ಮಾಡಲಿಲ್ಲ. ಅವರಿಗೆ ಮಲ್ಲಿಕಾನ ಮ್ಯಾಲೆ ಸಿಟ್ಟು ಬರೋ ಬದಲು ನನಗS ಅಂದರು 'ನೀನು ಹೊಟ್ಟಿ ತುಂಬಾ ಹಾಕೂದಿಲ್ಲಾ ಅದಕ್ಕ ತಿಂತಿದ್ದಾಳು' ಅಂದರು. ಅದಕ್ಕ ನಾನೂ 'ನನ್ನ ಮ್ಯಾಲೆ ನಿಮಗ ಭರವಸೆ ಇಲ್ಲಾ. ಅದಕ್ಕ ನೀವS ಸ್ವತಃ ಸಣ್ಣಾಕ್ಕಿ ಅನ್ನ, ಹಾಲು, ಕೆನೆ ಹಾಕಿ ಕಲಿಸಿ ಯಾರದರೆ ದೃಷ್ಟಿ ತಾಕೀತು ಅಂತ ಬಟ್ಟಲಾ ಒಯ್ದು ಕೋಣಿ ಖೋಲಿಯೊಳಗ ಇಟ್ಟು ಬರತೀರಲ್ಲ. ಅಂದರೂ ಹೊಟ್ಟಿ ತುಂಬೂದಿಲ್ಲ ಇವಳದು. ಇವಳು ಬಕಾಸುರನ ಮೊಮ್ಮಗಳೋ ಏನೋ' ಅಂತ ಅವರಿಗೇ ಹಂಗಿಸಿದೆ.

ಅವರ ಜೊತೆಗೆ ಜಗಳಾಡಿ ಅಡಿಗೆ ಮನೆಗೆ ಬಂದೆ. ರಾತ್ರಿಯ ಹಾಲಿನ ಪಾತ್ರೆ ಖಾಲಿಯಾಗಿತ್ತು. ಟೇಬಲ್ಲಿನ ಕೆಳಗೆ ಕೂತು ಮಲ್ಲಿಕಾ ನಾಲಿಗೆ ಸವರಿಕೊಳ್ಳುತ್ತಿದ್ದಳು,

ಏನೂ ಅರಿಯದ ಮಳ್ಳೀ ಹಾಗೆ ಕಣ್ಣು ಮುಚ್ಚಿದ್ದಳು. ನಾನೂ ಸುಮ್ಮನಾದೆ. ಐದು ನಿಮಿಷದೊಳಗ ಅವರು ಒಳಗ ಬಂದು 'ಚಹಾ ಮಾಡು ಲಗೂನ. ನನ್ನ ಅಪರೂಪದ ಗೆಳೆಯರು ಬಂದಾರ' ಅಂದರು.

'ರಾತ್ರಿ ಹಾಲು ನಿಮ್ಮ ಮಲ್ಲಿಕಾ ಕುಡಿದಳು. ಮುಂಜಾನಿ ಹಾಲು ಇನ್ನೂ ಬಂದಿಲ್ಲ' ಅಂದೆ. ತೆಪ್ಪಗೆ ಹೊರಗೆ ಹೋದರು.

ಬಕಾಸುರನ ವಂಶದಾಕೆ ಮಲ್ಲಿಕಾಗ ಇಷ್ಟs ಆಹಾರ ಸಾಲಲಿಲ್ಲ. ಹೊರಗಿನಿಂದ ಗುಬ್ಬಿ, ಹಾವರಾಣಿ, ಇಲಿ ಎಲ್ಲಾ ಹಿಡಿದು ತಂದು ಅರ್ಧಮರ್ಧ ತಿಂದು ಉಳಿದದ್ದು - ಟೇಬಲ್ಲು, ಮಂಚದ ಕೆಳಗೆ ಚೆಲ್ಲಿಬಿಡುವದು, ಅವರ ಕೋಣೆಯೊಳಗ ಸೋಫಾದ ಮ್ಯಾಲೆ ಮಲಗಿ ಅಲ್ಲೇ ಹೊಲಸು ಮಾಡುವದು. ಎಲ್ಲಾ ದುಶ್ಚಟಾ ನೋಡಿ ನನ್ನ ಸಹನೆಯ ಕಟ್ಟು ಒಡೆಯಿತು. ನಾನು ಅವರಿಗೆ ಹೇಳಿಬಿಟ್ಟೆ, 'ನೋಡಿ ಇದನ್ನೆಲ್ಲಾ ಯಾರು ಸ್ವಚ್ಛ ಮಾಡುವವರು. ನನ್ನ ಕಡೀಂದ ಆಗೂದಿಲ್ಲ. ನಾನು ಇವಳನ್ನ ಒದ್ದು ಹೊರಗ ಹಾಕ್ತೀನಿ' ಅಂತ. ಅವರಿಗೂ ಸಾಕಾಗಿತ್ತೇನೋ, 'ಏನಾದರೂ ಮಾಡಿಕೊಳ್ಳಿರಿ' ಅಂತ ನಮ್ಮ ಮೇಲೆಯೇ ಭಾರ ಹಾಕಿ ತಾವು ಪಾರಾಗಿಬಿಟ್ಟರು. ಆದರ ಭಾರಿ ಜಿಗುಟು ಆಸಾಮಿ ಇವಳು. ಎಂಟು ದಿನಾ ಪ್ರಯತ್ನ ಮಾಡಿದರೂ ಮನೀ ಬಿಟ್ಟು ಪೂರ್ಣ ಹೋಗಲಿಲ್ಲ. ಹಗಲು ಎಲ್ಲಾ ಹೊರಗ ಪಿರೀಪಿರೀ ತಿರುಗಿ ರಾತ್ರಿ ನಮ್ಮ ಮನೆಗೆ ಬಂದು ಬೆಡ್‌ರೂಮಿನ ಕಿಡಿಕಿ ಕರಾಬರಾ ಗೀರುವದು, ಮ್ಯಾಂಗುಡುವದು ಸುರು ಮಾಡುತ್ತಿದ್ದಳು. ಇದರಿಂದ ಇವರ ನಿದ್ದೆ ಕೆಟ್ಟು ಕಿಡಿಕಿ ತೆಗೆದ ಕೂಡಲೆ ಒಳಗೆ ಬಂದು ರಗ್ಗಿನೊಳಗೆ ಕಾಲು ಚಾಚಿ ನಿಶ್ಚಿಂತಾಗಿ ನಿದ್ದೆ ಹೊಡೀತಿದ್ದಳು. ಇದೇ ಅವಳ ದಿನಚರಿ ಆಯಿತು.

ಆಗ ನನಗೆ ಅನ್ನಿಸಿತ್ತು. ಹೀಗಾದರ ಇವಳು ಹೊರಗ ಹೋಗೂದಿಲ್ಲ. ನಮಗ ಇವಳ ಕಾಟ ತಪ್ಪೂದಿಲ್ಲ, ಇದಕ್ಕ ಏನರೆ ಬೇರೆ ಉಪಾಯ ಮಾಡಬೇಕು ಅಂತ. ಅದಕ್ಕೆ ನನ್ನ ತಮ್ಮಗ ಹೇಳಿದೆ 'ಮಲ್ಲಿಕಾನ್ನ ಚೀಲದೊಳಗ ಹಾಕಿ ಎಲ್ಲ್ಯಾರ ದೂರ, ನಮ್ಮ ಮನೀ ಗುರುತು ಸಿಗದಂಥಾ ಜಾಗಾಕ ಒಯ್ದು ಬಿಟ್ಟು ಬರಬೇಕು' ಅಂತ. 'ಆಗಲಿ ಇವತ್ತ ಮಧ್ಯಾಹ್ನ ಒಯ್ದು ಮಾಳ ಮರಡಿಯೊಳಗ ಬಿಟ್ಟು ಬರತೇನಿ' ಅಂದ. ನಾನು, ನನ್ನ ಇಬ್ಬರು ಮಕ್ಕಳು ತಮ್ಮ, ನೆರಮನಿ ಹುಡುಗರು ಕೂಡಿ ಕಷ್ಟಪಟ್ಟು ಹಿಡಿದು ಮಲ್ಲಿಕಾನ್ನ ಗೋಣೀಚೀಲದೊಳಗ ಹಾಕಿದೆವು, ನನ್ನ ತಮ್ಮ ತೊಗೊಂಡು ಹೋದ. ಹಾಯೆಂತ ಉಸಿರು ಬಿಟ್ಟೆ. ಸಂಜೆಗೆ ಇವರು ಬಂದರು. ಅವರ ಮುಂದೆ ಯಾರೂ ಏನೂ

ಹೇಳಲಿಲ್ಲ. ಅವರಿಗೂ ಭಣಭಣ ಅನಿಸಿರಬೇಕು. ಆದರ ಕೇಳಿದರ ನಾನು ಹರಿ ಹಾಯ್ತೇನು ಅಂತ ಕೇಳಲಿಲ್ಲ. ಹುಡುಗರಿಗೆ ಅವರ ಮುಂದ ಹೇಳಬಾರದು ಅಂತ ಬಿಸ್ಕೀಟಿನ ಲಂಚಾ ಕೊಟ್ಟಿದ್ದೆ. ಆವತ್ತು ರಾತ್ರಿ ಕಣ್ಣು ತುಂಬ ನಿದ್ದೀ ಮಾಡಿದೆ. ಬೆಳಿಗ್ಗೆ ಎದ್ದೆ. ಮನಸ್ಸು ಯಾಕೋ ಹಗುರಾಗಿ ಗಾಳಿಯೊಳಗ ತೇಲೂ ಹಾಂಗ ಅನ್ನಿಸಿತು. ಸಂತೋಷದ ಭರದೊಳಗೆ ಹಾಡು ಗುಣಗುಣಿಸುತ್ತಾ ಅಡಿಗೆ ಮನೆಗೆ ಕಾಲಿಟ್ಟೆ. ನನ್ನ ಬಾಯಿ ಬಂದಾಯ್ತು. ಗಂಟಲು ಒಣಗಿ ಹೋಯ್ತು. ಧ್ವನಿಯೇ ಹೊರಡಲಿಲ್ಲ.

ಮಲ್ಲಿಕಾ ಒಲೆಯ ಮೇಲೆ ಬೆಚ್ಚಗೆ ಮಲಗಿದ್ದಳು. ಹಿಂದಿನಿಂದ ಬಂದು ಇಣುಕಿದ ನಮ್ಮ ಯಜಮಾನರಿಗೆ ಖುಷಿಯೋ ಖುಷಿ.

# ಶೀತಲಯುದ್ಧ - ಒಪ್ಪಂದ

'ಅವ್ವಾs ಮಾಮಾ, ಮಾಮೀ, ಶಕ್ಕೂ ಬಂದರು'

ಮಗನ ಕೂಗಿಗೆ ಕೂದಲು ಕೈಯಿಂದಲೇ ಸರಿಪಡಿಸುತ್ತ ಸೆರಗು ಸರಿಮಾಡಿಕೊಂಡು ಗಿರಿಜೆ ಹೊರಗೆ ಬಂದಳು.

'ಬಾರs ಒಳಗೆ ಬಾ' ಎಂದು ಗೆಳತಿ ಉಮೆಯನ್ನು ಒಳಗೆ ಕರೆದೊಯ್ಯುತ್ತ ಅವಳ ಗಂಡನಿಗೆ ಕೂಡ್ರಲು ಹೇಳಿ, ಅವನ ಮುಂದಿದ್ದ ಟೀಪಾಯ್ ಮೇಲಿನ ಪತ್ರಿಕೆಗಳನ್ನು ಸರಿಪಡಿಸಿದಳು. ಅವಳ ಮಗ ರಾಜು ಆಗಲೇ ಶಕುಂತಲೆಯನ್ನು ಅಂಗಳಕ್ಕೆ ಕರೆದೊಯ್ದು ಅವಳೊಡನೆ ಟ್ರೈಸಿಕಲ್ ಆಡುತ್ತಿದ್ದ.

ಮನೆಯಲ್ಲಿ ಗೆಳೆಯನ ಸುಳಿವು ಕಾಣದ ವಿಶ್ವನಾಥ ಕೇಳಿದ 'ಶೇಖರ ಮನ್ಯಾಗಿಲ್ಲೇನು? ಎಲ್ಲಿ ಹೋಗ್ಯಾನ? ಎಷ್ಟೊತ್ತಿಗೆ ಬರತಾನ?'

ಒಂದು ನಿಮಿಷ ಸುಮ್ಮನಿದ್ದ ಗಿರಿಜೆ 'ಭಾಳ ಹೊತ್ತಾತು ಹೊರಗ ಹೋಗಿ, ಈಗ ಬರ್‍ತಾರ ಕೂಡ್ರಿ' ಎಂದು ಉಮಾನ ಕೈಹಿಡಿದು ಅಡಿಗೆ ಮನೆಗೆ ಕರೆದೊಯ್ದಳು.

'ಈಗೇನೂ ಮಾಡಬ್ಯಾಡ ಗಿರಿಜಾ, ನಾವು ಇದೇ ಈಗ ಚಹಾ ತೊಗೊಂಡs ಬಂದೇವಿ. ಬಾ, ಹೊರಗs ಕೂಡ್ರೋಣು. ನಿನಗೂ, ಮೈಯಾಗ ಆರಾಮ ಇದ್ದಾಂಗಿಲ್ಲಾ' ಎಂದಳು ಉಮಾ ಗಿರಿಜೆಯ ಇಳಿದ ಮೋರೆ ನೋಡುತ್ತ.

'ಛೇ ನನಗೇನೂ ಆಗಿಲ್ಲಾ!'

'ಮತ್ತ ಮುಖಾ ಸಪ್ಪಗಾಗೇದ. ತಲಿ ಬಾಚಿಕೊಂಡಿಲ್ಲಾ, ಪತ್ತಲಾ ಬದಲಾಯಿಸಿಲ್ಲಾ. ನಾವು ಬಂದು ತ್ರಾಸ ಕೊಟ್ಟಾಂಗ ಆತು. ಚಹಾ ಬ್ಯಾಡ ಅಂದರ ನೀ ಕೇಳವೊಲ್ಲಿ. ಸ್ವಲ್ಪ ಮಲಕೋತಿದ್ದಿಯೋ ಏನೋ ?'

'ಎಲ್ಲಿ ಮಲಗೂದವ್ವಾs ಮನೀಯೊಳಗಿನ ಕೆಲಸs ರಗಡ ಅದ. ಸುಮ್ಮನ ಮನಸ್ಸಿಗೆ ಯಾಕೋ ಬ್ಯಾಸರಾತು ಅದಕ್ಕs....'

'ಯಾಕs ಏನಾತು ? ನನ್ನ ಮುಂದೂ ಹೇಳಬಾರದಂಥಾದ್ದೇನು ? ತಾ ಇಲ್ಲೇ ನಾ ಉಳ್ಳಾಗಡ್ಡಿ ಹೆಚ್ಚತೇನಿ, ನೀ ಸ್ಟೋವ್ ಹೊತ್ತಿಸು.'

'ನಿನ್ನ ಮುಂದ ನಾ ಹೇಳಲಾರದ್ದು ಏನದ ? ನನ್ನ ಸುಖ ದುಃಖ ಕೇಳೂವಾಕಿ ಅಂದರ ನೀನs ಒಬ್ಬಾಕಿ. ಆಗಲೇ ವಿಶ್ವಣ್ಣಾ ಅವರು ಎಲ್ಲಿ ಹೋಗ್ಯಾರಾ ಅಂತ ಕೇಳಿದರಲ್ಲಾ ಆಗ ಪೇಚಿನ್ಯಾಗ ಬಿದ್ದಿದ್ದೆ. ಅವರು ಎಲ್ಲಿ ಹೋಗ್ಯಾರ, ಯಾವಾಗ ಬರ್‍ತಾರ ಅನ್ನೂದs ನನಗೆ ಗೊತ್ತಿಲ್ಲಾ ಏನ ಹೇಳ್ಲಿ ಅಂತ'

'ಯಾಕ ಜಗಳಾಡಿ ಮಾತು-ಗೀತು ಬಿಟ್ಟೀರೇನು ?'

'ಹೌದು, ಅದನ್ನ ಹೇಳೂವಾಕಿ ಇದ್ದೆ ಈಗ. ಮೊನ್ನೆ ಹುಣ್ಣಿವಿ ಆತಲ್ಲಾ ಅವತ್ತ .... ಅಲ್ಲs ಸೀರಿ ಹೊಸಾದೇನು ? ಯಾವಾಗ ತೊಗೊಂಡಿ ? ಎಷ್ಟು ಬಿತ್ತು ?'

'ಉಹುಂ ಅದೆಲ್ಲಾ ಇರ್ಲಿ. ಭಾಷಣಕಾರರು ವಿಷಯಾ ಬಿಟ್ಟು ಅಡ್ಡ ಮಾತಿಗೆ ಹೋಗೂ ಹಾಂಗ ಮಾತಾಡಬ್ಯಾಡ. ಇದ್ದ ವಿಷಯಾ ಹೇಳು, ಸೀರಿ ಪುರಾಣ ಆಮ್ಯಾಲೆ ಹೇಳ್ತೀನಿ.'

'ನಮ್ಮನ್ಯಾಗ ಅವರು ಭಾಳ ಒಳ್ಳೆವರು. ಮಂದಿ ಸುದ್ದಾ ಅಂತಾರ ಎಂಥಾ ಸಂಪನ್ನರು ಅಂತ. ಆದರ ಒಂದು ಕೆಟ್ಟ ಗುಣಾ ಅದs ನೋಡು. ನನಗಂತೂ ಅದನ್ನ ಸಹಿಸಲಿಕ್ಕೇ ಆಗೂದಿಲ್ಲ. ಅದರ ಸಲುವಾಗಿ ಅವರಿಗೆ ನನಗ ಯಾವಾಗ್ಲೂ ಜಗಳ.'

'ಏನದು' ?

'ಮತ್ತೇನು ? ನಾನು ಮನ್ಯಾಗ ಇಷ್ಟ ಥರಾ ಅಡಿಗಿ ಮಾಡಿ ನೀಡಿದರೂ ಮನಸ್ಸಿಗೇ ಬರೂದಿಲ್ಲ. ಎಲ್ಲಾದಕೂ ಹೆಸರು ಇಡತಾರ. ಒಂದಕ್ಕೂ ಛೆಲೋ ಆಗೇದ ಅನ್ನೂದಿಲ್ಲ, ಮತ್ತ ಮಂದೀ ಮನ್ಯಾಗಿನ ಅಡಿಗೀ ಹೊಗಳತಾರ. ಅವರು ಎಷ್ಟ ಛೆಲೋ ಮಾಡ್ತಾರ ಹಾಂಗ ಹೀಂಗ ಅಂತ.'

'ಒಬ್ಬೊಬ್ಬ ಗಂಡಸರ ಸ್ವಭಾವ ಇರತದೇಳಾs ಹಾಂಗ'

'ಅದರಾಗ ಇವರದು ವಿಪರೀತ. ನಾ ಏನು ಮಾಡಿದ್ರೂ ಕೆಟ್ಟs, ಮೊದಲ ಮೊದಲ ನನಗೂ ಅಡಿಗೀ ಬರತಿದ್ದಿಲ್ಲಾ, ಕೆಡಸತಿದ್ದೆ. ಅದಕ್ಕs ಅಂತಾರ ಬಿಡು ಅಂತ ಸಹಿಸಿಕೋತಿದ್ದೆ. ಆದ್ರ ಈಗ ಎಲ್ಲಾ ಕಲಿತೇನಿ. ತಿಂಡಿ-ತಿನಿಸು, ಸೀ-ಅಡಿಗೆ, ಸಾರು, ಪಲ್ಲೆ ಎಲ್ಲಾ ನನ್ನ ಮನ್ಯಾಗ ಊಟಾ ಮಾಡಿದ ಇವರ ಗೆಳೆಯರೆಲ್ಲಾ ಹೊಗಳತಾರ. ಆದ್ರ ಇವರೊಬ್ಬರs ಹೊಗಳೂದಿಲ್ಲ.

'ಅಂದ್ರ ನಿನಗ ಹೊಗಳಿಕೆ ಬೇಕಾಗೇದ ಹೌದಲ್ಲೊ !'

'ಹೌದವಾ, ನಾವು ಕಷ್ಟಪಟ್ಟು ಮಾಡಿದ್ದಕ್ಕ ಛೆಲೋ ಆಗೇದ ಅಂತ ಒಂದು ಮಾತು ಅಂದು ತಿಂದರ ನಮ್ಮ ಆಯಾಸ ಎಲ್ಲಾ ಹೋಗ್ತದ. ನಮ್ಮ ಕರ್ಮಕ್ಕ ಪ್ರತಿಫಲ

ಬ್ಯಾಡೇನು?'

'ಪ್ರತಿಫಲ ಇಲ್ಲದs ಕರ್ಮಾ ಮಾಡಲಿಕ್ಕೆ ನಾವೇನು ನಿಷ್ಕಾಮಕರ್ಮಿಗಳೇನು ಅಂತಿಯೇನು ?'

'ನಾವೂ ಮನುಷ್ಯರs ಅಲ್ಲ. ನಮಗೂ ಆಸೇ ಹಿಗ್ಗು ಇರೊದಿಲ್ಲs? ಹೊಗಳಿದರ ಹೊನ್ನಶೂಲ ಆಗೂದಿಲ್ಲ ನಮಗ. ಹೊನ್ನ ಕೊಟ್ಟಷ್ಟು ಸಂತೋಷ ಆಗ್ತದ.'

'ಹೌದು, ನಿನ್ನ ಮಾತು ನನಗೂ ಒಪ್ಪಿಗಿ ಅದ. ಹ್ಯಾಂಗೂ ಈ ಹೊನ್ನು ಸಿಗೂದಿಲ್ಲ. ಈ ಮಾತು ಕೇಳಿದರ ಈ ಗಂಡಸರು ದಿನಾ ನಮ್ಮನ್ನ ಹೊಗಳಿಕೋತ ಕೂತಾರು ಇರಲಿ, ಮುಂದೇನಾತು ?'

'ಹುಂ ಅವತ್ತ ಹುಣ್ಣಿವಿ ಇತ್ತಲ್ಲ. ಪಾಯಸಾ, ಚಪಾತಿ, ಬಟಾಟಿ ಪಲ್ಲೆ, ಹೆಸರುಬೇಳೆ ತೊವ್ವೆ, ಅನ್ನ ಸಾರು ಎಲ್ಲಾ ಮಾಡಿದ್ದೆ. ಊಟಕ್ಕೆ ಕೂತಾಗ ಸಾರಿಗೆ ಹುಳಿ ಭಾಳ ಆಗೇದ. ಪಲ್ಯಕ್ಕೆ ಉಪ್ಪು ಹೆಚ್ಚಾಗೇದ. ಪಾಯಸಕ್ಕೆ ಸೀ ಕಡಿಮಿ ಅಂತ ಯಥಾಪ್ರಕಾರ ಹುಡುಕಿ ಹುಳುಕು ಹೇಳಿದರು. ನನಗೂ ಭಾಳ ಸಿಟ್ಟು ಬಂದಿತ್ತು. ಸುಮ್ಮನ 'ಹುಂ' ಅಂದೆ. ಊಟಾ ಮಾಡಿ ಕಾಲೇಜಿಗೆ ಹೋದರು. ನಾನೂ ಊಟಾ ಮಾಡಿದೆ. ಇವತ್ತ ಇವರಿಗೆ ಬುದ್ಧಿ ಕಲಿಸಬೇಕು ಅಂತ ಮನಸ್ಸಿನೊಳಗs ಮಾಡಿಕೊಂಡೆ. ಕಣಕ ಉಳಿದಿತ್ತು. ಮುಂಜಾನಿ ಬಟಾಟಿ ಪಲ್ಲೆ ಅದರೊಳಗ ಹಾಕಿ ಕರಿದು 'ಸಮೋಸಾ' ಮಾಡಿದೆ. ಮುಂಜಾನೀದ ಹೆಸರುಬೇಳೆ ತೊವ್ವೆಯೊಳಗೆ ಒಂದಿಷ್ಟು ಅಕ್ಕಿ ಹಿಟ್ಟು ಹಾಕಿ 'ಚಕ್ಕಲಿ' ಕರಿದೆ. ಉಳಿದಿದ್ದ ಸಣ್ಣಕ್ಕಿ ಅನ್ನಕ್ಕ ಶೇಂಗಾ, ಲಿಂಬಿ ಹುಳಿ, ಕೋತಂಬರಿ, ಕರಿಬೇವು, ಮಸಾಲಿ ಹಾಕಿ 'ಪುಳಿಯೋಗರೆ' ಮಾಡಿದೆ. ಎಲ್ಲಾ ಮಾಡಿ ಮುಚ್ಚಿ ಇಟ್ಟು ಹೊರಗ ಬಂದೆ.'

'ಮುಂದs ?'

'ದಿನಾ ಬರೂ ಹಾಂಗ ನಾಲ್ಕೂವರಿಗೆ ಬಂದರು. ಚಹಾ ಮಾಡಿ 'ಸಮೋಸಾ, 'ಚಕ್ಕಲಿ' 'ಪುಳಿಯೋಗರಿ' ಎಲ್ಲಾ ಕೊಟ್ಟೆ.'

'ತಿಂದರೇನು ?

'ಹೇಳ್ತೀನಿ ತಡಿ. ನೆರೆಮನಿ ಜಯಲಕ್ಷಮ್ಮ ಮಗನ ಹುಟ್ಟಿದ ಹಬ್ಬಾ ಮಾಡಿದರಂತ. ತಾಟು ಕೊಟ್ಟು ಕಳಿಸ್ಯಾರ. ಅದನ್ನ ನಿಮಗ ಕೊಟ್ಟೆ. ನಾ ಏನೂ ತಿಂಡಿ ಮಾಡ್ಲಿಲ್ಲಾ ಅಂದೆ.'

'ನಂಬಿದರೇನು ?'

'ಅಯ್ಯಾs ನಂಬದ ಏನು ? ಸುಳ್ಳು ಹೇಳಿ ಗಂಡಸರನ್ನ ನಂಬಿಸೋದು ಭಾಳ

ಸುಲಭ. ಪ್ರೀತಿ ಮಾಡಿ 'ನೋಡು ಎಷ್ಟು ಛೆಲೋ ಮಾಡ್ಯಾರ' ಅಂತ ಹೇಳಿ ಎರಡೆರಡು ಸಾರೆ ಹಾಕಿಸಿಕೊಂಡು ತಿಂದರು. ನನಗ ಭಾಳ ನಗೂ ಬಂದಿತ್ತು. ಆದರೂ ತಡಕೊಂಡೆ. ಎಲ್ಲಾ ಮುಗಿಸಿ ಹೊರಗ ಬಂದು ಕೂತು ಸಿಗರೇಟು ಹಚ್ಚಿದರು. ನನಗ ಭಾಳ ಸಂತೋಷ ಆಗಿತ್ತು. ಒಮ್ಮೆ ಆದರೂ ಅವರು ನನ್ನ ಅಡಿಗೀ ಹೊಗಳಿದರಲ್ಲಾಂತ. ಆಗ ಎಲ್ಲಾ ಖರೆ ಇದ್ದದ್ದು ಹೇಳಿಬಿಟ್ಟೆ.....'

'ಅವರು ಏನಂದ್ರು ?'

'ಆಬಬಬ ಭಾಳ ಸಿಟ್ಟು ಬಂದುಬಿಟ್ಟಿತು. ಅವರಿಗೆ, ಮೋಸ ಹೋದ್ರಲ್ಲಾ ಅಂತ. 'ನನಗ ಹೊಟ್ಟೆ ನೋವು ಬರ್‍ತದ, ಆದರೂ ತಂಗಳು ಬಿಸಿ ಮಾಡಿ ತಿನ್ನಿಸಿದಿ ಅಂತ ಒದರಾಡಿದರು. ನನಗೂ ತಡೀಲಿಲ್ಲಾ. 'ನೆರೆಮನಿಯಿಂದ ಬಂದsದ ಅಂದ್ರ ನಿಮ್ಮ ಹೊಟ್ಟಿಗೆ ಏನೂ ಆಗತಿದ್ದಿಲ್ಲಾ. ನಾನs ಮಾಡೀನಿ ಅಂದ ಕೂಡಲೆ ನಿಮಗ ಹೊಟ್ಟೆ ನೋವು ಸುರೂ ಆಗ್ತದೇನು. ಯಾವಾಗಲೂ ನಿಮ್ಮ ಕಡೀಂದ ಅನ್ನಿಸಿಕೊಳ್ಳೂದ ನನ್ನ ಹಣೇಬರಾ ಆತು ! ಅಂತ ಒದರಾಡಿದೆ. 'ನೀವು ಹೆಂಗಸರು ಮೋಸಗಾರರು 'ಅನಕೋತ ಹೊರಗ ಹೋದರು. ಮುಂದ ಸುರುವಾತು ಶೀತಲ ಯುದ್ಧ'

'ಅಂದರ ?'

'ಅಂದರೇನು, ಮೌನಯುದ್ಧ, ಮೂರು ದಿವಸಾತು. ನನ್ನ ಕೂಡ ಮಾತಿಲ್ಲ. ಎಲ್ಲಾ ಕೆಲಸಾನೂ ಮಾತಿಲ್ಲದ ನಡೆದಾವ. ನನಗೂ ಸಹಿಸಿ ಸಾಕಾಗೇದ. ಎಷ್ಟು ದಿವಸ ಅಂತ ಸುಮ್ಮನೆ ಇರೂದು. ತಾವs ತಿಳಿದಾಗ ಮಾತಾಡಲಿ ಅಂತ ನಾನೂ ಸುಮ್ಮನs ಅದೇನಿ?' ಆಯ್ತು ನೋಡು ನನ್ನ ಇತಿಹಾಸ. ಈಗ ಹೇಳು ನಿನ್ನ ಸೀರೀ ಪುರಾಣ, ಉಪ್ಪಿಟ್ಟಿನ ಪಾತ್ರೆಯ ಮೇಲೆ ಹೇರುತ್ತ ನುಡಿದಳು ಗಿರಿಜೆ.

'ನನ್ನ ಸೀರೀದೂ ಒಂದು ಕಥೀನs. ನಿಂದೊಂದು ಥರಾ, ನಂದೊಂದು ಥರಾ. ನಮ್ಮ ಮನ್ಯಾಗ ಅವರ ಸ್ವಭಾವ ಗೊತ್ತ ಆದ ಅಲ್ಲಾ ನಿನಗ. ಯಾವಾಗಲೂ ಮಂದೀನ್ನ ಊಟಕ್ಕ, ಚಹಾಕ್ಕ ಕರಕೊಂಡು ಬರೂದು. ಒಬ್ಬರs ಉಂಡರ ಊಟ ರುಚಿ ಹತ್ತೂದಿಲ್ಲ ಅವರಿಗೆ, ಗೆಳೆಯರು' ವಿದ್ಯಾರ್ಥಿಗಳು, ನೆರೆಮನಿಯವರು, ಯಾರಾದ್ರೂ ಇರಲಿ, ಊಟದ ಹೊತ್ತಿನ್ಯಾಗ ಬಂದರ ಹಾಂಗsಬಿಡೂsದೆ ಇಲ್ಲಾ ಊಟಕ್ಕೆ ಎಬ್ಬಿಸೇ ಬಿಡೂದು.'

'ಮತ್ತೆ ಅಡಿಗಿ ಕಡಿಮಿ ಇದ್ದರ ?'

'ಮೊದಲs ಹೇಳಿದರ ಅಡಿಗೀ ಹೆಚ್ಚಿಗಿ ಮಾಡಿರತೇನಿ. ಇಲ್ಲದಿದ್ದರ, ನಮಗಾಗೂ ವಷ್ಟs ಮಾಡಿರತೇನಿ. ಇಂಥಾ ತುಟ್ಟೀ ದಿನದಾಗ ಹೆಚ್ಚು ಮಾಡಿ ಯಾಕ ಕೆಡಿಸಬೇಕು

ಅಂತ. ಆದರ ಇವರ ಇಂಥಾ ಸ್ವಭಾವಕ್ಕ ನನಗ ಅಡಿಗಿ ಉಳಿಯೂದಿಲ್ಲ. ಎರಡನೇ ಸಾರೆ ಮಾಡಬೇಕಾಗತದ.'

'ಇದೊಳ್ಳೇ ಬ್ಯಾಸರದ ಕೆಲಸವ್ವಾ, ಎರಡೆರಡು ಸಾರೆ ಮಾಡೂದ ಅಂದರ.'

'ಆದರ ಮಾಡಬೇಕೇನು ? ಎಲ್ಲಾ ಛೆಲೋ ಅದಾರ ; ಇದೊಂದs ಕೆಟ್ಟ ಗುಣ ನೋಡು. ಎಷ್ಟೋ ಸಾರೆ ಅನ್ನ ಮಾಡಿಕೊಳ್ಳಲಿಕ್ಕೆ ಬ್ಯಾಸರ ಆಗಿ ಅವಲಕ್ಕಿ ಮೊಸರು ತಿಂದೇನಿ !'

'ಛೇ ಛೇ ಪಾಪ !'

'ಮೊನ್ನೆ ಹುಣ್ಣಿವಿ ದಿನ ಹೋಳಿಗಿ ಮಾಡಿದ್ದೆ. ನಿನಗ ಗೊತ್ತs ಅದ ಅಲ್ಲ. ನನಗ ಸೀ ಭಾಳ ಪ್ರೀತಿ ಅನ್ನೂದು, ಅವತ್ತ ಊರಿಂದ ತಂದ ತುಪ್ಪಾನೂ ಇತ್ತು. ಬಿಸಿ ಬಿಸಿ ಹೋಳಿಗಿ ತುಪ್ಪಾ ತಿನ್ನಬೇಕು ಅನ್ನಿಸ್ತು. ಅವರಿಗೂ ಹೇಳಿದೆ. ಇವತ್ತ ಸುಡು ಹೋಳಿಗಿ ತುಪ್ಪಾ ತಿನ್ನೋಣು. ಅದರ ಕೂಡ ಕೋಸಂಬರಿ, ಪಲ್ಲೆ, ಮಾಡ್ತೇನಿ. ಲಗೂನ ಬರ್ರೀ. ಹೋಳಿಗಿ ಆರತಾವ, ತಡಾ ಮಾಡಬ್ಯಾಡ್ರಿ' ಅಂತ. 'ಹುಂ' ಅಂದು ಹೋದರು. ನಮ್ಮ ನಾಲ್ಕು ಮಂದಿಗೆ ಸಾಕಾಗುವಷ್ಟು ಬೇಳೆ ಹಾಕಿ ಹೋಳಿಗಿ ಮಾಡಿದೆ. ಮಧ್ಯಾಹ್ನ ಹನ್ನೆರಡು ಗಂಟೇಕ್ಕ ರಾಯರು ಪ್ರತ್ಯಕ್ಷ ಆದರು. ಜೋಡಿಗೊಬ್ರು ಗೆಳೆಯರೂ ಇದ್ದರು. 'ತಾಟು ಹಾಕು' ಅಂದರು. ನನಗ ಸಿಟ್ಟು ಭಾಳ ಬಂತು. ಸುಮ್ಮನs ಇಬ್ಬರಿಗೂ ತಾಟು ಹಾಕಿ ಊಟಕ್ಕ ನೀಡಿದೆ. ಎಲ್ಲಾರ ಊಟ ಮುಗಿದಾಗ ನನಗ ಉಳಿದದ್ದು ಹರಕಲು ಮುರಕಲು ಒಂದು ಹೋಳಿಗಿ. ! ರಾತ್ರಿಯ ರೊಟ್ಟಿ, ಪಲ್ಲೆ ನೀಡಿಕೊಂಡು ಊಟಕ್ಕ ಕೂತೆ. ಗೆಳೆಯರನ್ನ ಕಳಿಸಿ ನೀರು ಕುಡೀಲಿಕ್ಕೆ ಒಳಗ ಬಂದರು.'

'ಮುಂದ ?'

'ನನ್ನ ಮುಖ ಸಣ್ಣದಾಗಿತ್ತು. ಕಣ್ಣೊಳಗ ನೀರೂ ಬಂದಿದ್ವು. 'ಯಾಕ' ಅಂದರು. 'ಯಾಕೂ ಇಲ್ಲಾ' ಅಂದೆ. ಆದರೆ ಜೀವ ತಡೀಲಿಲ್ಲ. 'ನಾವು ಹುಟ್ಟಿದ ಮನೀ ಬಿಟ್ಟು ನಿಮ್ಮ ಮನೀಗೆ ಬಂದು ನಿಮ್ಮ, ನಿಮ್ಮ ಮಕ್ಕಳ ಸಲುವಾಗಿ ದುಡೀತೀವಿ, ಜೀವಾ ತೇಯ್ತೇವಿ, ನಿಮ್ಮ ಸುಖ ದುಃಖದೊಳಗ ಭಾಗಿಯಾಗ್ತೇವಿ. ಆದ್ರ ನಾವೂ ಮನುಷ್ಯರು ನಮಗೂ ಆಸೇ ಇರ್ತಾವ ಅನ್ನೂದು ನಿಮ್ಮ ಲಕ್ಷಕ್ಕ ಬರೂದಿಲ್ಲ. ಎಷ್ಟು ದಿವಸದಿಂದ ಸುಡೂ ಹೋಳಿಗಿ ತಿನಬೇಕು ಅಂತ ಆಸೇ ಮಾಡಿದ್ದೆ. ಆದ್ರ ಆಗ್ಲಿಲ್ಲ. ನಮ್ಮ ಹಣೇಬರದಾಗ ಬರೆದದ್ದs ಇಷ್ಟು ಅಂತ ಸುಮ್ಮನಿರಬೇಕು ಅಂದೆ."

'ಖರೇ ಮಾತು, ಅವರೇನಂದರು ಅದಕ್ಕ'

'ಅವರೊಬ್ಬರು ಬಂದು ಊಟಾ ಮಾಡಿದರ ಏನಾತು ? ಮೊದಲs ಹೆಚ್ಚು ಮಾಡಬೇಕು !'

'ಗೆಳೆಯರನ್ನ ಕರಕೊಂಡು ಬರ್ತೀನಿ ಅಂತ ನೀವು ಹೇಳಿದ್ದಿರೇನು ನನಗ' ನನ್ನ ಸಿಟ್ಟು ಏರುತ್ತಿತ್ತು. 'ಆದ್ರ ಸುಡೂ ಹೋಳಿಗಿ ತಿನ್ನೂ ಆಸೆ ಆಗೇದ ಅಂತ ನಾ ನಿಮ್ಮ ಮುಂದ ಬಾಯಿ ಬಿಚ್ಚಿ ಹೇಳಿದ್ದಿಲ್ಲೇನು ? ನನ್ನ ಆಸೇ ಇಲ್ಲಿ ಪೂರ್ಣ ಮಾಡಿಕೊಳ್ಳದ ಇನ್ನ ಎಲ್ಲಿಗೆ ಹೋಗಬೇಕು ನಾವು. ಇವತ್ತ ಒಂದು ದಿವಸಾನೂ ನೀವು ಮಂದಿಯನ್ನು ಕರಿಯೂದು ಬಿಡಲಿಲ್ಲ. ನನ್ನ ಹೆಂಡತಿ ಆಸೆ ಪೂರ್ಣ ಮಾಡಬೇಕು ಅಂತ ವಿಚಾರ ಮಾಡಲಿಲ್ಲ !'

'ಇಷ್ಟು ಸಣ್ಣ ಮಾತು ದೊಡ್ಡದು ಮಾಡತೀಯೇನು ?'

'ನಿಮಗ ಇವೆಲ್ಲಾ ಸಣ್ಣ ಮಾತು. ಆದರ ನಮ್ಮ ಹಾಂಗ ಹುಟ್ಟಿದ ಮನೀ ಬಿಟ್ಟು ಬೇರೆ ಮನೆಗೆ ಬಾಳುವೆ ಮಾಡಲಿಕ್ಕೆ ಹೋಗಿದ್ದರ ನಿಮಗ ಗೊತ್ತಾಗತಿತ್ತು ನಮ್ಮ ಸುಖಾ ದುಃಖಾ, ಇದ್ದ ಆಸೆ ಎಲ್ಲಾ ಅದುಮಿ ಇಟ್ಟು ನೀವು ನಕ್ಕರ ನಕ್ಕು, ನೀವು ಅತ್ತರ ಅತ್ತು, ಜೀವನಾ ಕಳಿಯೂದs ನಮ್ಮ ಕೆಲಸ ಅಲ್ಲಾ' ನನ್ನ ಸಹನೆಯ ಕಟ್ಟೆ ಒಡೆದಿತ್ತು.

'ಅವರೇನಂದರು ?'

'ಅವರು ನನ್ನ ಮಾತು ಕೇಳಿದರು. ಏನೂ ಅನ್ನಲಿಲ್ಲ. ಸುಮ್ಮನs ಮುಖಾದಪ್ಪ ಮಾಡಿಕೊಂಡು ಹೊರಗ ಹೋದರು. ನಾಲ್ಕು ದಿವಸ ಮಾತಾಡಲಿಲ್ಲ. ನನ್ನ ಮಾತು ಖರೇನs ಇತ್ತು. ತಪ್ಪಾತು ಅಂತ ಕ್ಷಮಾ ಕೇಳಲಿಕ್ಕೆ ನನ್ನ ಮನಸ್ಸು ಬರಲಿಲ್ಲ. ನಾನೂ ಸುಮ್ಮನಿದ್ದೆ'

'ಮತ್ತ ಸೀರಿ....'

'ಅದನ್ನs ಹೇಳ್ತೀನಿ ತಡಿ, ಇವತ್ತ ಮುಂಜಾನೆ ಹೊರಗ ಹೋದವರು ಮನೀಗೆ ಬಂದು ಈ ಸೀರಿ ತಂದು ನನ್ನ ಕೈಯಾಗ ಕೊಟ್ಟು 'ಉಮಾ, ನೀ ಅಂದದ್ದು ಖರೇ, ಇಡೀ ಜೀವಮಾನ ನನ್ನ ಸಂಗಾತಿ ನೀನು, ನಿನ್ನ ಆಸೆ ನಾನು ಅಲಕ್ಷ್ಯ ಮಾಡಬಾರದು. ನೋಡು, ನೀ ಭಾಳ ದಿವಸದಿಂದ ಕೇಳ್ತಿದ್ದಿ 'ನೀಲಿ ಬಣ್ಣದ ಸೀರಿ ತಂದೀನಿ, ಉಟ್ಟುಕೋ, ಇವತ್ತ ಶೇಖರನ ಮನೀಗೆ ಹೋಗೂಣು' ಅಂದರು.

ಚಹಾ ಸೋಸುತ್ತ ಗಿರಿಜೆ, 'ಭೆಲೋ ಆತು. ನೀವು ಲಗೂನ ಒಪ್ಪಂದ ಮಾಡಿಕೊಂಡಿರಿ. ಅದಕ್ಕ ಸರಿಯಾಗಿ ಕಾಣಿಕೇನೂ ಸಿಕ್ಕಿತು ನಿನಗ ಆದರ ನಾವು...'

'ಹಲೊ ವಿಶ್ವ, ಯಾವಾಗ ಬಂದೆ' ಹೊರಗೆ ಶೇಖರನ ಧ್ವನಿ ಕೇಳಿಸಿತು. ಕೈಯಲ್ಲಿ

ದೊಡ್ಡ ಪೊಟ್ಟಣ ಹಿಡಿದು ಅಡಿಗೆ ಮನೆಗೆ ಬಂದ ಶೇಖರ ಗಿರಿಜೆಗೆ ಕೊಟ್ಟು, 'ಲಗೂ ತಿಂಡಿ ತಿಂದು ತಯಾರಾಗ್ರಿ, ಎಲ್ಲಾರೂ ಸಿನಿಮಾಕ್ಕ ಹೋಗೂಣು' ಎಂದು ಹೊರಗ ಹೋದ.

ಅವನು ತಂದ ಪೊಟ್ಟಣ ಬಿಚ್ಚಿದಳು ಗಿರಿಜೆ. ಶೇವು, ಜಿಲೇಬಿ, ಶಂಕರಪಾಳೆ, ಸಂಪಿಗಿ ಹೂವು, ಜೊತೆಗೆ ಒಂದು ಟ್ವಿಂಕಲ್ ನೈಲಾನ್ ಬ್ಲೌಜ್ ಪೀಸ್ ಇದ್ದವು.

ಅದನ್ನು ನೋಡಿದ ಉಮ 'ನೀವೂ ಒಪ್ಪಂದ ಮಾಡಿಕೊಂಡಿರಿ. ಕಾಣಿಕೇನೂ ಬಂತು' ಎಂದಳು. 'ಏನೋ ನಿನ್ನ ಕಾಲ್‌ಗುಣ' ಎಂದು ನಸುನಕ್ಕಳು ಗಿರಿಜೆ.

# ಕವಿಯ ಹೆಂಡತಿಯ ಕಣ್ಣಿನಲ್ಲಿ

ನನ್ನ ಸಣ್ಣ ಮಗ ಐದು ವರುಷದ ಕರುಣ ಬಂದು ಕೇಳಿದ 'ಅವ್ವಾ, ಅಪ್ಪಾ ಖೋಲ್ಯಾಗ ಕಣ್ಣುಮುಚ್ಚಿ ಕೂತಾರ. ಕೈ ತಿರಗಿಸತಾರ ನಾ ಮಾತಾಡಿದರ ಮಾತಾಡೂದೇ ಇಲ್ಲಾ ಬಾ ನೋಡ ಬಾ'. ನಾನೂ ಅವನ ಹಿಂದೆ ಕೋಣೆಗೆ ಹೋದೆ. ಇವರು ತಮ್ಮ ಮೇಜಿನೆದುರು ಕುರ್ಚಿಯ ಮೇಲೆ ಕುಳಿತು ಕಣ್ ಮುಚ್ಚಿದ್ದರು. ಎರಡು ಬೆರಳ ಸಂದಿಯಲ್ಲಿ ಪೆನ್ಸಿಲ್ ಇತ್ತು. ಮುಂದೆ ಬಿಳಿ ಹಾಳೆಗಳಿದ್ದವು. ಕಣ್ಣುಮುಚ್ಚಿದರೂ ಕೈ ಹಾಗೆ ಹೀಗೆ ಆಡಿಸುತ್ತಾ ಇದ್ದರು. ನನಗೆ ಕೂಡಲೆ ಗೊತ್ತಾಯಿತು ಇದು ಯಾವ 'ಮೂಡು' ಎನ್ನುವದು. ಸಪ್ಪಳ ಮಾಡದಂತೆ ಮೆಲ್ಲಗೆ ಕರುಣನನ್ನು ಹೊರಗೆ ಕರೆತಂದು ಬಾಗಿಲು ಮುಚ್ಚಿದೆ. ಗದ್ದಲ ಮಾಡಬೇಡಿರೆಂದು ಮಕ್ಕಳಿಗೆ ಹೇಳಿ ಅಡಿಗೆ ಮನೆಗೆ ನಡೆದೆ. ಈಗ ಬಹುಶಃ ನಿಮಗೂ ಅರ್ಥವಾಗಿರಬೇಕಲ್ಲವೇ ? ನಮ್ಮವರು ಕವಿಗಳು. ಅವರಿಗೆ ಬಂದದ್ದು ಕಾವ್ಯಸ್ಫೂರ್ತಿ ಎನ್ನುವದು. ಇದರ ಲಕ್ಷಣಗಳೆಲ್ಲಾ ನನಗೆ ಗೊತ್ತು. ಅದಕ್ಕೇ ಅವರು ಕಲ್ಪನಾ ಲೋಕದಲ್ಲಿ ವಿಹರಿಸಲಿ ಎಂದು ಅವರನ್ನು ಏಕಾಂತಕ್ಕೆ ಬಿಟ್ಟು ಈಚೆಗೆ ಬಂದದ್ದು. ಅದಕ್ಕೆ ತಕ್ಕ ಮದ್ದು ಇದೇ. ಇನ್ನು ಕೆಲವು ಹೊತ್ತು ಬಿಟ್ಟು ಅವರೇ ಕೈಯಲ್ಲಿ ಕಾಗದ ಹಿಡಿದು ನಗುತ್ತ ಕೋಣೆಯಿಂದ ಹೊರಗೆ ಬರುತ್ತಾರೆ. ಆಗ ಅವರು ಆವರೆಗೆ ಅನುಭವಿಸಿ ಇಳಿಸಿದ ರಸಸೃಷ್ಟಿಯನ್ನು ನನಗೆ ಓದಿ ಹೇಳುತ್ತಾರೆ. ಇದು ಸಾಮಾನ್ಯವಾಗಿ ನಮ್ಮ ಮನೆಯಲ್ಲಿ ಕಂಡುಬರುವ ನಡೆಯುವ ಘಟನೆ. ಅದನ್ನೇ ಕುರಿತು ವಿಚಾರ ಮಾಡುತ್ತ ಮಜ್ಜಿಗೆ ಕಡೆಯುತ್ತಿದ್ದೆ. ಕಡೆದ ಕಡೆದ ಹಾಗೆ ಮೊಸರಿನಲ್ಲಿಯ ಸ್ನಿಗ್ಧವೆಲ್ಲಾ ಕೂಡಿಕೊಳ್ಳುತ್ತ ಉಂಡೆ ಬೆಣ್ಣೆಯಾಗಿ ಮೇಲೆ ಬಂತು. ಹೀಗೆಯೇ ಅಲ್ಲವೇ ಅವರ ಕೆಲಸವೂ, ವಿಚಾರ, ಅನುಭವ, ಕಲ್ಪನೆ ಎಲ್ಲವನ್ನೂ ಕೂಡಿಸಿ, ಮಥಿಸಿ ಕವನವನ್ನು ಹೊರತೆಗೆಯಬೇಕು. ನಾನೇನೂ ನಿಶ್ಚಿಂತಳಾಗಿ ಕೆಲಸ ಮಾಡುತ್ತಿದ್ದೆ. ಆದರೆ ಚಿಕ್ಕ ಕರುಣನಿಗೆ ಇದೆಲ್ಲ ಹೇಗೆ ಅರ್ಥವಾಗಬೇಕು ? ಅವನು ಹೋಗಿ ತನ್ನ ಅಣ್ಣನನ್ನು ಕೇಳಿದ, 'ಅಪ್ಪಾಜಿ. ಹಾಂಗ ಯಾಕ ಮಾಡತಾರ' ಎಂದು. ಆನಂದ ಹೈಸ್ಕೂಲದಲ್ಲಿ ಓದುವ ಹುಡುಗ. ತನ್ನ ತಂದೆ ಕವಿ ಎನ್ನುವದು ಅವನಿಗೂ ತಿಳಿದಿದೆ. ಸ್ವಲ್ಪ ಚೇಷ್ಟೆಯ ಹುಡುಗ. 'ನೋಡು, ಕರುಣ,

ಸಾವಿರಾರು ರೂಪಾಯಿ ಖರ್ಚು ಮಾಡಿ ವಿಮಾನದಾಗ ಕೂತು ಜನರು ಲಂಡನಕ್ಕೆ ಅಮೇರಿಕಾಕ್ಕೆ ಹೋಗತಾರ. ಲಕ್ಷಗಟ್ಟಲೆ ರೂಪಾಯಿ ಖರ್ಚು ಮಾಡಿ ಅಮೇರಿಕಾದವರು, ರಶಿಯಾದವರು ಚಂದ್ರಲೋಕಕ್ಕೆ ಹೋಗತೀವಿ ಅಂತಾರ. ಆದರೆ ನಮ್ಮ ಅಪ್ಪಾಜಿ ಭಾಳ ಜಾಣರು. ನೋಡು, ಒಂದು ನಯಾಪೈಸಾನೂ ಖರ್ಚು ಮಾಡದೆ ಸ್ವರ್ಗ, ಮರ್ತ್ಯ, ಪಾತಾಳ ಮೂರೂ ಲೋಕ ತಿರುಗಾಡತಾರ. ಈಗ ಅವರು ಕಲ್ಪನಾ ಲೋಕಕ್ಕೆ ಹೋಗ್ಯಾರ. ಗದ್ದಲ ಮಾಡಬ್ಯಾಡ, ಹಾಂ'- ಎಂದು ನಕ್ಕ. ತಿಳಿಯದಿದ್ದರೂ ವಿಮಾನ, ರಾಕೆಟ್ ಶಬ್ದ ಕೇಳಿ ಕರುಣನೂ ನಕ್ಕ.

ಒಮ್ಮೊಮ್ಮೆ ನಮ್ಮವರ ಮುಖದಲ್ಲಿ ಇದ್ದಕ್ಕಿದ್ದಂತೆ ನಗೆ ಮಿಂಚು ಹಾಯುತ್ತದೆ. ಊಟಕ್ಕೆ ಕುಳಿತಾಗ, ವಾಕಿಂಗ ಹೋಗುವಾಗ, ಸ್ನಾನದ ಮೊದಲು ಮೈಗೆ ಎಣ್ಣೆ ತಿಕ್ಕುವಾಗ, ಶೇವ್ ಮಾಡಿಕೊಳ್ಳುವಾಗ ಬೇಕಾದಾಗ ಹೊಳೆಯುವ ಈ ಮಿಂಚು ನಗೆಯ ಅರ್ಥ ನನಗೆ ಈಗಲೂ ಆಗಿಲ್ಲ, ಅವರು ನಕ್ಕಾಗೊಮ್ಮೆ ಮುಖಕ್ಕೇ ಮಸಿ ಹತ್ತಿದೆಯೋ ಏನೋ ಎಂದು ಸೆರಗಿನಿಂದ ಒರಸುತ್ತೇನೆ. ಆಮೇಲೆ ಅವರನ್ನು ಕೇಳಿದಾಗ "ಏನು ನಾನು ನಕ್ಕೇನೆ. ಯಾವುದೋ ಪುಸ್ತಕದಲ್ಲಿಯ ಒಂದು ಮಾತು ನೆನಪಾಗಿತ್ತು. ನಗು ಬಂದಿತ್ತು." ಎನ್ನುತ್ತಾರೆ. ನಾವಿಬ್ಬರೂ ಸಂಜೆ ವಾಕಿಂಗ ಹೊರಟಾಗ ತಟ್ಟನೆ ನಿಂತುಬಿಡುತ್ತಾರೆ. ನಾನು ಬೆಪ್ಪಾಗಿ ನಿಂತು ಏನಾಯಿತು ಎಂದು ಕೇಳಿದರೆ "ಅಲ್ನೋಡು, ಆ ಹುಲುಗಲ ಎಷ್ಟು ಚಂದಾಗಿ ಚಿಗಿತದ, ಆಕಾಶದೊಳಗಿನ ಬಂಗಾರ ಬಣ್ಣದ ಮೋಡ ಹೇಗೆ ಅರಳ್ತಿದೆ; ನೋಡು" ಎಂದು ಹೇಳುತ್ತಾರೆ.

ಅವರ ಸ್ನೇಹಿತರು ನೂರಾರು ಜನ; ಅವರ ಕಾವ್ಯವನ್ನು ಮೆಚ್ಚಿಕೊಂಡ ಅಪರಿಚಿತರು ಇನ್ನೂ ಅನೇಕ. ಆದರೆ ಅವರ ಮುಖ ಪರಿಚಯವಿದ್ದರೂ ಇವರಿಗೆ ಎಷ್ಟೋ ಸಲ ಅವರ ಹೆಸರೇ ನೆನಪಿಗೆ ಬರುವುದಿಲ್ಲ. ಬಹಳ ಸಲ ಭೆಟ್ಟಿಯಾಗಿ ತೀರ ನಿಕಟ ಪರಿಚಯವಾದವರ ಹೆಸರನ್ನಷ್ಟೇ ಕಷ್ಟಪಟ್ಟು ನೆನಪಿಟ್ಟುಕೊಂಡಿರುತ್ತಾರೆ ಎನ್ನುವದಂತೂ ಸುಳ್ಳಲ್ಲ. ಒಂದು ದಿನ ನಮ್ಮ ಮನೆಗೊಬ್ಬ ಅತಿಥಿಗಳು ಬಂದರು. ಬಹಳ ಆತ್ಮೀಯತೆಯಿಂದ ಇವರೊಡನೆ ಮಾತನಾಡಿದರು. ಯೋಗಕ್ಷೇಮದ ಎಲ್ಲ ಮಾತಾದ ಮೇಲೆ ಅವರು ಈ ಊರಿಗೆ ಇವರ ಭೆಟ್ಟಿಗೆಂದೇ ಬಂದದ್ದು ತಿಳಿಯಿತು, ಸಾಹಿತ್ಯದ ಬಗ್ಗೆ ಮಾತು ನಡೆದವು. ಅಂದು ಅವರ ಸ್ನಾನ ಊಟ ನಮ್ಮಲ್ಲಿಯೇ ಆಯಿತು. ಒಳಗೆ ಬಂದಾಗ ಅತಿಥಿಗಳ ಬಗ್ಗೆ ನಾನು ನಮ್ಮವರನ್ನು ವಿಚಾರಿಸಿದೆ. ಅವರಿಂದ ಬಂದ ಉತ್ತರ ಕೇಳಿ ಮೂಕಳಾದೆ. ಬಂದ ಅತಿಥಿಗಳ ಹೆಸರೇ ಅವರಿಗೆ ನೆನಪಿನಲ್ಲಿಲ್ಲ. ಕಡೆಗೆ ವಿಶ್ರಾಂತಿ,

ಚಯವಾದ ಮೇಲೆ ಬಂದವರು ತಮ್ಮದೊಂದು ಪುಸ್ತಕವನ್ನು ಇವರಿಗೆ ಕಾಣಿಕೆಯಾಗಿ ಕೊಟ್ಟು ಹೋದರು. ಅದರಲ್ಲಿ ಇವರಿಗೆ ಅವರ ಹೆಸರು ಸಿಕ್ಕಿತು. "ಓಹೋ ಇವರೇ" ಎಂದು ಆಮೇಲೆ ಉದ್ಗಾರವೆತ್ತಿದರು.

ಮಾತಾಡಿದ್ದಷ್ಟೇ ಅಲ್ಲ ಕೆಲವೊಂದು ಸಲ ಅವರು ಕೈಯಿಂದ ಕೆಲಸ ಮಾಡಿದ್ದೂ ಮರೆಯುವದುಂಟು. ತಮ್ಮ ಕಾವ್ಯದ ಗುಂಗಿನಲ್ಲಿ ಒಮ್ಮೆ ನಡದದ್ದು ಹೀಗೆ : ಇವರ ಆಪ್ತ ಸ್ನೇಹಿತರ ಸೋದರಳಿಯನಂತೆ. ತನ್ನ ಒಂದು ಕೆಲಸಕ್ಕಾಗಿ ಈ ಊರಿಗೆ ಬಂದಾಗ ನಮ್ಮಲ್ಲೇ ಇಳಿದಿದ್ದ. ಇವರಿಗಿಂತಲೂ ಚಿಕ್ಕವ, ಮ್ಯಾಟ್ರಿಕ್‌ವರೆಗೆ ಓದಿದ್ದರೂ ನಾಚಿಕೆ ಸ್ವಭಾವದವ. ಸಂಕೋಚದಿಂದ ಇವರೊಡನೆ ಹೆಚ್ಚು ಮಾತೇ ಆಡುತ್ತಿರಲಿಲ್ಲ. ಅವನು ಬಂದ ದಿನವೇ ೫೦ ರೂಪಾಯಿ ಇವರ ಕೈಯಲ್ಲಿ ಕೊಟ್ಟಿದ್ದ. ಅವನ್ನು ತಂದು ನನ್ನ ಕೈಯಲ್ಲಿ ಕೊಟ್ಟು "ತೆಗೆದಿಡು. ಆ ಹುಡುಗ ಹೋಗುವಾಗ ಕೊಡುವಿಯಂತೆ" ಅಂದಿದ್ದರು. ಮುಂದೆ ನಾಲ್ಕಾರು ದಿನಗಳಿಗೆ ಅವನ ಕೆಲಸ ಮುಗಿಯಿತು. ಊಟವಾಯಿತು. ಊರಿಗೆ ಹೊರಟು ನಿಂತ. ತನ್ನ ಸಾಮಾನುಗಳನ್ನೆಲ್ಲ ಕೈ ಚೀಲದಲ್ಲಿಟ್ಟು, ಛತ್ರಿ ಹಿಡಿದು ಚಪ್ಪಲಿ ಹಾಕಿ "ಹೋಗಿ ಬರುತ್ತೇನೆ" ಎಂದು ಹೇಳಿದ. "ಆಗಲಿ ಹೋಗಿ ಬಾ. ನಿನ್ನ ಮಾವನಿಗೆ ನಾನು ಕೇಳಿದೆನೆಂದು ಹೇಳು" ಎಂದರು. ಅವನು ಕೈಚೀಲ ತಿರುಗಿಸುತ್ತ ತಲೆಬಾಗಿಸಿ ನೆಲ ಕೆರೆಯುತ್ತ ಮತ್ತೆ ಒಮ್ಮೆ ಹೇಳಿದ. "ಹೋಗಿಬಾ, ದಾರಿಯಲ್ಲಿ ಜೋಪಾನ" ಎಂದರು. ಅವನಿಗೆ ರೂಪಾಯಿ ಬೇಕಾಗಿತ್ತು, ಕೇಳಲು ಸಂಕೋಚ, ಕಷ್ಟಪಟ್ಟು "ರೂಪಾಯಿ ಕೊಟ್ಟಿದ್ದರೆ"..... ಎಂದ. ಪೂರ್ತಿ ಮಾತು ಮುಗಿಸಲೂ ಇಲ್ಲ. ಇವರು ಒಳಗೆ ಹೋಗಿ ಕಿಸೆ ತಡಕಾಡಿ ಬಂದು ಗಾಡಿ ಖರ್ಚಿಗೆ ಬೇಕೆ ? ತಗೋ ಐದು ರೂಪಾಯಿ. ತಿಂಗಳ ಕೊನೆ, ಹೆಚ್ಚಿಗೆ ಇಲ್ಲ ಎಂದರು. ಅವನು ಪೆಚ್ಚಾದ. ಅವರು ಕೊಟ್ಟ ರೂಪಾಯಿ ಹಿಡಿಯದೆ "ಬೇಡ" ಎಂದು ಎರಡು ಹೆಜ್ಜೆ ಮುಂದೆ ಹೋಗಿ ತಿರುಗಿ ಬಂದು "ನಾನು ಕೊಟ್ಟಿದ್ದೆನಲ್ಲ ನಿಮ್ಮ ಕೈಯಲ್ಲಿ ೫೦ ರೂಪಾಯಿ ಅದು.... ಅದು" ಎಂದು ತಡವರಿಸಿದ. ಆಗ ನೆನಪಾಯಿತು ಅವರಿಗೆ "ಹೋ ಹೋ" ಎಂದು ಜೋರಾಗಿ ನಕ್ಕು ನನ್ನನ್ನು ಕರೆದು ರೂಪಾಯಿ ಕೊಡ ಹೇಳಿದರು. ಹೊರಗೆ ಬಂದ ನಾನು ಅವನ ಪೆಚ್ಚಾದ ಮುಖ, ಇವರ ನಗೆ ನೋಡಿ ವಿಷಯ ಊಹಿಸಿಕೊಂಡಿದ್ದೆ. "ತಪ್ಪು ತಿಳಿಯಬಾರದು" ಎಂದು ಅವನಿಗೇ ಹೇಳಿದೆ. ಅವನು "ನನಗೆ ಅವರ ಸ್ವಭಾವ ಗೊತ್ತಿಲ್ಲವೆ ಅಕ್ಕಾ ನಾನು ತಪ್ಪು ತಿಳಿಯೂದಿಲ್ಲ" ಎಂದಾಗ ನನಗೆ ಸಮಾಧಾನ. ಮುಂದೆ ಎಷ್ಟೋ ದಿನ ಈ ಘಟನೆ ನೆನೆದುಕೊಂಡು ತಾವೇ ನಗುತ್ತಿದ್ದರು.

ನಮ್ಮ ಕವಿಗಳಿಗೆ ಬೇರೆ ಬೇರೆ ಊರುಗಳಿಂದ ಭಾಷಣಕ್ಕೆ ಕರೆ ಜಾಸ್ತಿ. ಅವುಗಳಲ್ಲಿ ನೂರಕ್ಕೆ ಎಂಬತ್ತರಷ್ಟನ್ನು ಅವರು ತಪ್ಪಿಸಿಕೊಂಡರೂ ಕೆಲವಕ್ಕಾದರೂ "ಓ" ಕೊಡಲೇ ಬೇಕಾಗುತ್ತದೆ. ಹಾಗೆ ಒಮ್ಮೆ ಕರೆಗೆ "ಓ" ಗೊಟ್ಟು ಹೊರಟಾಗ ಹೀಗೆ ನಡೆಯಿತು. ಹಗರಿಬೊಮ್ಮನಹಳ್ಳಿ ಎನ್ನುವ ಒಂದು ಊರಿನಲ್ಲಿ ಕೆಲವು ಜನ ಸಾಹಿತ್ಯ ಪ್ರೇಮಿಗಳು ಕೂಡಿಕೊಂಡು ಒಂದು ಗೋಷ್ಠಿಯನ್ನು ನಡೆಸಲೆಂದು ಕೆಲವು ಸಾಹಿತಿಗಳನ್ನು ಕರೆದಿದ್ದರು. ಇವರೂ ಒಪ್ಪಿಕೊಂಡು ಬರುವುದಾಗಿ ಅವರಿಗೆ ಕಾಗದ ಬರೆದಿದ್ದರು. ಹೊರಡುವ ಗಾಡಿಯ ವೇಳೆಯನ್ನು ತಿಳಿಯಬೇಕೆಂದು ರೇಲ್ವೇ ಗೈಡ್ ತೆಗೆದರು. ಅದರಲ್ಲಿ ಹಗರಿ ಎಂದಿತ್ತು. ಸರಿ, ಹಗರಿ ಬೊಮ್ಮನಹಳ್ಳಿಯ ಶಾರ್ಟ್ ಫಾರ್ಮ ಹಗರಿ ಎಂದಾಗಿರಬಹುದು ಎಂದು ಅದರ ಬಗ್ಗೆ ಹೆಚ್ಚು ವಿಚಾರಿಸುವ ಗೋಜಿಗೆ ಹೋಗದೆ ಹಗರಿಗೇ ಟಿಕೆಟ್ ತೆಗೆಸಿ ಪ್ರಯಾಣ ಬೆಳೆಸಿದರು. ರಾತ್ರಿ ಸುಖವಾಗಿ ನಿದ್ದೆ ಮಾಡಿ ಎದ್ದು ತಾವು ಇಳಿಯಬೇಕಾಗಿದ್ದ ನಿಲ್ದಾಣಕ್ಕೆ ಇಳಿದು ವಿಚಾರಿಸಿದರೆ ಅಲ್ಲಿ ಯಾವ ಗೋಷ್ಠಿಯೂ ಇಲ್ಲ. ಸಾಹಿತ್ಯ ಪ್ರೇಮಿಗಳೂ ಇಲ್ಲ. ಕವಿಗಳ ತಲೆ ಧಿಮಿಗುಟ್ಟಿತು. ವಿಚಾರಶಕ್ತಿ ನಿಂತು ಹೋಯಿತು. ಮುಂದೆ ಏನು ಎಂಬ ಯೋಚನೆ ಎಲ್ಲ ತಡಕಾಡಿದವು. ಕೆಲ ಹೊತ್ತು ಹಾಗೆ ಕಳೆದು ಸ್ಟೇಶನ್ ಮಾಸ್ತರರ ಹತ್ತಿರ ಹೋಗಿ ವಿಚಾರಿಸಿದರು. ತಮಗೆ ಆಮಂತ್ರಣ ಬಂದದ್ದು ಹಗರಿಬೊಮ್ಮನ ಹಳ್ಳಿಯಿಂದ ಎಂದು ಹೇಳಿದಾಗ ಅವರು ನಕ್ಕರು. ಹೊಸಪೇಟೆಯಿಂದ ಮುಂದೆ ರಾಮನಗರ ಎನ್ನುವ ಊರಿದೆ ಅದರ ಹತ್ತಿರ ಹಗರಿಬೊಮ್ಮನ ಹಳ್ಳಿಯಿದೆ. ಎಂದು ಹೇಳಿ ತಿರುಗಿ ಅಲ್ಲಿಗೆ ಹೋಗುವ ಉಪಾಯವನ್ನು ಹೇಳಿಕೊಟ್ಟರು. ಅದರಂತೆ ಇವರು ತಿರುಗಿ ಬಂದು ಹಗರಿಬೊಮ್ಮನಹಳ್ಳಿಗೆ ಮುಟ್ಟುವಾಗ ಅಂದಿನ ಗೋಷ್ಠಿಯ ಮುಕ್ತಾಯ ಭಾಷಣ ನಡೆದಿತ್ತು. ಇವರ ಭಾಷಣವನ್ನು ಮರುದಿನವಿಟ್ಟುಕೊಂಡಿದ್ದರು. ಅಲ್ಲಿಂದ ಬಂದ ಮೇಲೆ ಎಲ್ಲ ಕತೆ ಮಾಡಿ ಹೇಳಿದರು.

ಪ್ರತಿ ಮಳೆಗಾಲಕ್ಕೂ ಇವರ ಕೈಗೆ ಒಂದು ಹೊಸ ಛತ್ರಿಯೇ ಬೇಕು. ಯಾಕೆಂದರೆ ಯಾರ ಮನೆಗೆ ಹೋಗಲಿ, ಪ್ರವಾಸಕ್ಕೆ ಹೋಗಲಿ, ಅಂಗಡಿಗೆ ಹೋಗಲಿ, ಹೋದಲ್ಲಿ ಕೈಗೆ ಜಡವಾದ ಆ ವಸ್ತುವನ್ನು ಅವರ ಮನಸ್ಸು ಮರೆತೇ ಬಿಡುತ್ತದೆ. ಇವರ ಅಸಡ್ಡೆಯಿಂದ ನೊಂದ ಆ ಛತ್ರಿ ಕನ್ಯೆ ಬೇರೆಯವರ ಕೈ ಹಿಡಿದಿರುತ್ತಾಳೆ. ಈ ವರ್ಷ ಅವರು ಛತ್ರಿ ಕಳೆದದ್ದಂತೂ ಮೋಜಿನ ಕತೆ. ಮಳೆಗಾಲದಲ್ಲಿ ಒಂದು ದಿನ ಇವರು, ನನ್ನ ತಮ್ಮ ಕೂಡಿ ಪೇಟೆಗೆ ಹೋಗಲು ಬಸ್ ಹಿಡಿದರು. ಇಬ್ಬರ ನಡುವೆ ಇವರು ಛತ್ರಿ ಇಟ್ಟರು. ಮುಂದಿನ ಸ್ಟಾಪಿನಲ್ಲಿ ತನ್ನ ಗೆಳೆಯನೊಬ್ಬನನ್ನು ಮಾತನಾಡಿಸಲು ತಮ್ಮ, ಅವರ

ಬದಿಯಲ್ಲಿಂದ ಎದ್ದು ಹೋದ. ಆ ಸ್ಥಳದಲ್ಲಿ ಬೇರಾವನೋ ಬಂದು ಕುಳಿತ. ಎರಡು ಮೂರು ಸ್ಟಾಪ್ ದಾಟಿದ ಮೇಲೆ ಇವರ ಕಣ್ಣು ಮುಂದೆಯೇ ಆ ಅಪರಿಚಿತ ಛತ್ರಿ ಕೈಗೆ ತೆಗೆದುಕೊಂಡು ಇಳಿದೇ ಹೋದ. ಇವರು ನೋಡುತ್ತಲೇ ಇದ್ದರೂ ಅದು ತಮ್ಮದೇ ಎನ್ನುವ ಕಲ್ಪನೆಯೇ ಇವರಿಗೆ ಬರಲಿಲ್ಲ. ಆ ಮೇಲೆ ಇಬ್ಬರೂ ಪೇಟೆಯಲ್ಲಿ ಇಳಿದಾಗ ತಮ್ಮ 'ಛತ್ರಿ ಎಲ್ಲಿ' ಎಂದ. "ನಿನ್ನ ಕೈಯಲ್ಲಿ" ಎಂದರು. 'ನಮ್ಮಿಬ್ಬರ ನಡುವೆ ಇದ್ದಿತಲ್ಲ' ಎಂದನವ. ಆಗ ಗೊತ್ತಾಯಿತು. ಇವರಿಗೆ ತಮ್ಮ ಛತ್ರಿ ತಮ್ಮ ಕಣ್ಣೆದುರೇ ಕಳವಾಯಿತು ಎಂದು.

ಒಂದು ದಿನ ಇಡೀ ಧಾರವಾಡಕ್ಕೆ ಲೈಟು ಹೋಗಿದ್ದವು. ಎಲ್ಲ ಕೆಲಸವು ಮೇಣ ಬತ್ತಿಯ ಬೆಳಕಿನಲ್ಲಿಯೇ ನಡೆದಿತ್ತು. ಇರುವಷ್ಟು ಹೊತ್ತು ಓದುವ ಕೆಲಸವನ್ನೇ ಮಾಡುವ ನಮ್ಮವರು ಏನು ಮಾಡುತ್ತಿದ್ದಾರೆ ಎಂದು ನೋಡಲು ಹೊರಗೆ ಹೋದೆ. ಅವರು ಅಂಗಳದಲ್ಲಿ ಆರಾಮಾಸನ ಹಾಕಿಕೊಂಡು ಆಕಾಶ ನೋಡುತ್ತಿದ್ದರು. "ಕತ್ತಲದಾಗ ಇಲ್ಲಿ ಕೂತು ಏನು ಮಾಡುತ್ತೀರಿ" ಎಂದೆ. 'ದಿನಾಲು ಲೈಟಿನ ಬೆಳಕಿನೊಳಗ ಮನಿಯೊಳಗ ಇರತೀನಿ. ಇವತ್ತ ನೀಲಿ ಆಕಾಶ, ಹೊಳೆಯುವ ನಕ್ಷತ್ರ ಎಷ್ಟು ಛಂದ ಕಾಣತಾವ ನೋಡು, ನೋಡಲಿಕ್ಕೆ ಎರಡು ಕಣ್ಣು ಸಾಲೂದಿಲ್ಲ' ಎಂದು ಮತ್ತೆ ಆಕಾಶವನ್ನೇ ದಿಟ್ಟಿಸಿದರು. ಅಮವಾಸ್ಯೆ ಸಮೀಪಿಸಿತ್ತು. ಹೊಳೆಯುವ ನಕ್ಷತ್ರಗಳಿಂದ ತುಂಬಿದ್ದ ಅಂಥಾ ಆಕಾಶವನ್ನು ನಾನು ನೋಡಿರಲಿಲ್ಲವೆಂದೇನೂ ಅಲ್ಲ. ಆದರೆ ಅವರ ಜೊತೆಯಲ್ಲಿ ನೋಡುತ್ತ ಇದ್ದ ಹಾಗೆ ಮನಸ್ಸಿಗೆ ಒಂದು ತರದ ಶಾಂತಿ ತುಂಬಿ ಬಂತು. ಆದರೆ ಒಳಗೆ ಕೆಲಸ ನನ್ನನ್ನು ಕರೆಯುತ್ತಿತ್ತು. 'ನೀವು ಚಿಕ್ಕೀ ಎಣಿಸಿಕೋತ ಇಲ್ಲೇ ಕೂಡ್ರಿ. ನಾನು ಒಳಗ ಹೋಗಿ ರೊಟ್ಟಿ ಮಾಡತೀನಿ' ಎಂದು ಎದ್ದು ಬಂದೆ.

ಕವಿಜೀವದ ಜೊತೆಗಾತಿಯಾಗಿ ಇಂಥಾ ಹಲವಾರು ಸಂಗತಿಗಳು ನನ್ನ ಅನುಭವಕ್ಕೆ ಬಂದಿವೆ. ಅವುಗಳ ನೆನಪಾದಾಗೆಲ್ಲ ನನ್ನಷ್ಟಕ್ಕೆ ನಾನೇ ನಗುತ್ತೇನೆ. ಅವುಗಳಲ್ಲಿ ಕೆಲವನ್ನು ನಿಮ್ಮ ಕಿವಿಗೂ ಮುಟ್ಟಿಸಿದ್ದೇನೆ. 'ನೆನಹು ಬಾಳಿನ ಬುತ್ತಿ' ಎಂದು ಹೇಳುತ್ತಾರೆ. ಹೀಗೆ ಈ ಬುತ್ತಿಯನ್ನು ನಾವಿಬ್ಬರೂ ಆಗೀಗ ಹಂಚಿಕೊಂಡು ಸವಿದು ಸಂತೋಷಪಡುತ್ತೇವೆ.

# 'ಕೈಲಾಸ ಕಂಡು ಬಂದೆ'

...... ಬರವಣಿಗೆ ನಿಂತಿತು. ಬಗ್ಗಿ ಬಗ್ಗಿ ಬೆನ್ನು ನೋವಾಗಿದ್ದರಿಂದ ಎದೆ ಸೆಟೆಸಿ ಕುರ್ಚಿಯಲ್ಲೊರಗಿದೆ. ಒಂದೇ ಸವನೆ ಬರೆದಿದ್ದರಿಂದ ತಲೆ ಸಿಡಿಯುತ್ತಿತ್ತು. ಬೆರಳು ನೋಯುತ್ತಿದ್ದುವು. ಬೆರಳು ನೆಟಿಕೆ ಮುರಿದು ಹಣೆ ಒಸುಕಿಕೊಂಡೆ. ಎರಡು ಅನಾಸಿನ್, ಕಾಫಿ ತರಲು ಪ್ಯೂನ್‌ಗೆ ಹೇಳಿ ಕಳಿಸಿದೆ. ಮೈಯಲ್ಲಿ ಎಷ್ಟೆಲ್ಲ ಅನಾರೋಗ್ಯವಿದ್ದರೂ ಮನಸ್ಸು ಹಗುರವಾಗಿತ್ತು. ಚಂಡೀಗಡದಲ್ಲಿ ನಡೆಯಲಿರುವ ಲೇಖಕರ ಸಮ್ಮೇಳನಕ್ಕೆ ಹೋಗಲು ಇನ್ನು ಮೂರು ದಿನಗಳ ಅವಧಿಯಷ್ಟೇ ಇತ್ತು. ಅಲ್ಲಿ ನಾನು ಓದಬೇಕಾಗಿದ್ದ ಪ್ರಬಂಧವನ್ನು ಈಗ ತಾನೇ ಬರೆದು ಮುಗಿಸಿದ್ದೆ. ಅದ್ದರಿಂದಲೇ ತಲೆಯ ಮೇಲಿದ್ದ ಭಾರವೊಂದು ಇಳಿದು ಹಾಯಾಗಿ ಉಸಿರುಬಿಡುವಂತಾಗಿತ್ತು.

ಸಮ್ಮೇಳನಕ್ಕೆ ಕರೆ ಬಂದೊಡನೆ ಒಪ್ಪಿಗೆ ಕೊಡಲು ಸ್ವಲ್ಪ ಯೋಚಿಸಬೇಕಾಗಿತ್ತು. ಕಾರಣ ಮನೆಯಲ್ಲಿ ಅವಳು ತುಂಬು ಬಸಿರಿ. ಮೊದಲಿನ ಎರಡೂ ಹೆರಿಗೆ ಕಾಲಕ್ಕೆ ಆರೋಗ್ಯವಾಗಿದ್ದಳು. ಮೂರನೆಯ ಹೆರಿಗೆ ಕಷ್ಟವಾಗಿ ಮಗು ಸತ್ತಿದ್ದರಿಂದ ಅವಳ ಆರೋಗ್ಯ ಮೊದಲಿನಂತೆ ಉಳಿದಿರಲಿಲ್ಲ. ಬೇಕಷ್ಟು ಟಾನಿಕ್, ಇಂಜೆಕ್ಷನ್‌ಗಳಾಗಿದ್ದರೂ ಡಾಕ್ಟರರು ಏನೂ ಚಿಂತೆ ಇಲ್ಲವೆಂದು ಭರವಸೆ ಕೊಟ್ಟಿದ್ದರೂ ನನಗೇ ಅವಳನ್ನು ಬಿಟ್ಟುಹೋಗಲು ಅಳುಕು. ಕರೆ ಬಂದ ವಿಷಯ ತಿಳಿದಾಗ ಅವಳೇ 'ಹೋಗಿ ಬನ್ನಿ' ಎಂದು ನನಗೆ ಧೈರ್ಯ ಹೇಳಿದಳು. 'ತವರು ಮನೆಗೆ ಪತ್ರ ಬರೆದು ಅವ್ವನ್ನ ಕರಸ್ತೀನಿ, ನನ್ನ ಅತ್ತೆ, ನಿಮ್ಮ ಅತ್ತೆ ಇಬ್ಬರಿಗೂ ನನ್ನನ್ನು ಒಪ್ಪಿಸಿ ನೀವು ನಿಶ್ಚಿಂತರಾಗಿ ಹೋಗಿ ಬನ್ನಿ. ಮತ್ತೆ ಇಂಥಾ ಅವಕಾಶ ಸಿಗೋದಿಲ್ಲ' ಎಂದು ಹೇಳಿ ನಕ್ಕಳು. ಮತ್ತೆ 'ನಿಮ್ಮ ಬೆನ್ನು ನೋವಿನದೆ ಹೆದರಿಕೆ ನನಗೆ, ತಿಂಗಳು ತಿಂಗಳಿಗೂ ನೋವು ಹೆಚ್ಚಾಗೇದ ಅಂತ ಮಲಗಿಬಿಡ್ತೀರಿ. ಅಲ್ಲೀ ತಂಪು ಹವಾ ತಡೀತದೋ ಇಲ್ಲೋ ನಿಮಗೆ ಅನ್ನೂದೇ ಚಿಂತೆ' ಎಂದು ಮಾತು ಮುಗಿಸಿದ್ದಳು.

ನನ್ನ ಬೆನ್ನು ನೋವಿನ ಹೆದರಿಕೆ ಅವಳಿಗಿದ್ದಷ್ಟು ನನಗಿರಲಿಲ್ಲ. ಎಷ್ಟೋ ಜನ ಡಾಕ್ಟರರಿಗೆ ತೋರಿಸಿದ್ದರೂ ಔಷಧ ನಡೆಸಿದಾಗ ಅಷ್ಟೇ ಕಡಿಮೆಯಾಗಿ ಮತ್ತೆ ಆಗಾಗ

ಬಂದೇ ಬರುತ್ತಿತ್ತು. ಬಂದಾಗ ನಾನು ರಾತ್ರಿಯೆಲ್ಲಾ ನರಳುತ್ತ ನಿದ್ರೆಯಿಲ್ಲದೆ ಮಲಗುತ್ತಿದ್ದೆ. ಅವಳು ಬಿಸಿ ಕಾಫಿ ಮಾಡಿಕೊಡುವುದು, ನೀಲಗಿರಿ ಎಣ್ಣೆ ತಿಕ್ಕುವುದು, ಬಿಸಿ ನೀರಿನ ಶಾಖ ಕೊಡುವುದು ಮಾಡುತ್ತಿದ್ದಳು. ಚಂಡೀಗಡ ನೋಡಬೇಕು ಅದರಲ್ಲೂ ಹಿಮಾಲಯ ನೋಡಬೇಕು ಎನ್ನುವ ಆಸೆ ಬೆನ್ನುನೋವನ್ನು ಮರೆಸಿಬಿಟ್ಟಿತು. ನನಗೆ ಅದೇನೊ ಹಿಮಾಲಯ ಎಂದರೆ ಬಹಳ ಪವಿತ್ರ ಸ್ಥಾನ ಅನ್ನುವ ಭಾವನೆ. ಅದು ಕಲ್ಲುಬಂಡೆ, ಹಿಮದ ರಾಶಿಯ ಪರ್ವತವಷ್ಟೇ ಅಲ್ಲ ಅಂತ ನನ್ನ ಮನಸ್ಸಿಗೆ ತೋರಿಕೆ. ಇಂದಿನ ಸ್ಪುಟ್ನಿಕ್ ಯುಗದ ಮಕ್ಕಳು, ನನ್ನ ವಿದ್ಯಾರ್ಥಿಗಳಾದವರು ಇದನ್ನು ಕೇಳಿ ನಗಬಹುದು. ಆದರೆ ಅದರಿಂದ ನನಗೇನೂ ಬೇಸರವಿಲ್ಲ. ನಾನು ಬೆಳೆದ ವಾತಾವರಣವೆ ಅಂಥದು. ನನ್ನ ತಂದೆ ಸಂಸ್ಕೃತ ಪಂಡಿತರು. ತಾಯಿ ದೈವಭಕ್ತರು. ಇಬ್ಬರೂ ಆಚಾರವಂತರು, ಮಡಿವಂತರು. ಅಂಥಾ ವಾತಾವರಣದಲ್ಲಿಯೇ ಹುಟ್ಟಿ, ಬೆಳೆದ ನನಗೂ ದೇವರಲ್ಲಿ ಭಕ್ತಿ, ನಂಬಿಕೆ ಜಾಸ್ತಿ. ನಾವು ಎಷ್ಟೇ ಓದಿಕೊಂಡರೂ ಪ್ರಗತಿಪರರು ಅಂತ ಅಂದುಕೊಂಡರೂ ಚಿಕ್ಕಂದಿನಲ್ಲಿ ಮೂಡಿದ ಇಂಥ ಭಾವನೆಗಳು ಪೂರ್ತಿ ಹೋಗುವುದಿಲ್ಲ. ಮನಸ್ಸಿನ ಮೂಲೆಯಲ್ಲಿ ಅವಿತುಕೊಂಡೇ ಇರುತ್ತವೆ ಅಂತ ಈಗಲೂ ನನ್ನ ಸ್ಪಷ್ಟ ಅಭಿಪ್ರಾಯ. ಕಾಲಕ್ರಮೇಣ ಹೊರಗೆ ಕಂಡೂ ಕಾಣಿಸಿಕೊಳ್ಳುತ್ತವೆ. ನೀವು ನನ್ನ ಮಾತಿಗೆ ಒಪ್ಪಿ, ಬಿಡಿ ಅದಕ್ಕೇನೂ ನನ್ನ ಅಭ್ಯಂತರವಿಲ್ಲ. ಆದರೆ ನನ್ನ ಸಂಗತಿ ಹೀಗೇ ಅಂತ ನಿರ್ಧಾರದಿಂದ ಹೇಳ್ತಾ ಇದ್ದೇನೆ. ಓ ಹಿಮಾಲಯದ ವಿಷಯ ಹೇಳ್ತಾ ನಾನು ಏನೋ ಹೇಳಲು ಶುರುಮಾಡಿದೆ. ಹಿಮಾಲಯ ಎಂದರೆ ಶಿವನ ಆವಾಸ ಸ್ಥಾನವಾದ ಕೈಲಾಸವಿರುವ ಸ್ಥಳ. ಅವನು ಅಲ್ಲಿ ಈಗ ನಮಗೆ ಕಾಣಲು ಸಿಗದಿದ್ದರೂ ಅಂಥ ಸುಂದರವಾದ, ಪವಿತ್ರವಾದ ಸ್ಥಳದಲ್ಲಿ ಶಿವನು ಅಗೋಚರನಾಗಿ ಇದ್ದೇ ಇರುತ್ತಾನೆ ಎಂದು ನನ್ನ ತಿಳಿವಳಿಕೆ. ಒಟ್ಟಿನಲ್ಲಿ ನನ್ನ ಆಸೆ, ನನ್ನವಳ ಧೈರ್ಯ ಸಮ್ಮೇಳನದ ಆಮಂತ್ರಣ ಎಲ್ಲ ಸೇರಿ ನಾನು ಪ್ರಬಂಧ ಬರೆದು ಮುಗಿಸುವಂತಾಯಿತು. 'ಮನೆಯಲ್ಲಿ ಮಕ್ಕಳ ಗಲಾಟೆ, ಬಂದು ಹೋಗುವವರ ಗದ್ದಲದಲ್ಲಿ ನಿಮಗೆ ಬರೆಯಲು ಬಿಡುವಾಗಲಿಕ್ಕಿಲ್ಲ. ಕಾಲೇಜಿನ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿಯೇ ಬರೆಯಿರಿ' ಎಂದು ನನ್ನವಳು ಕೊಟ್ಟ ಸಲಹೆ ಸರಿಯಾಗಿತ್ತು. ಅದೇ ರೀತಿ ಮಾಡಿ, ಇಂದು ಪ್ರಬಂಧ ಬರೆದು ಮುಗಿಸಿದ್ದೆ.

ಪ್ಯೂನ್ ಕಾಫಿ ತಂದು ಇರಿಸಿದ. ಎರಡೂ ಗುಳಿಗೆ ನುಂಗಿ ಕಾಫಿ ಕುಡಿದೆ. ಇನ್ನೂ ಕುಳಿತುಕೊಳ್ಳಲು ಬೇಸರವಾಯಿತು. ಈಗ ಹೊರಟರೆ ಬಸ್ಸೂ ಸಿಕ್ಕೀತು ಎಂದು ಕುರ್ಚಿಬಿಟ್ಟು ಎದ್ದೆ. ಬೆನ್ನಿನಲ್ಲಿ ಸಳಕ್ ಎಂದು ಮಿಂಚಿತು. ಮತ್ತೆ ಸಣ್ಣಗೆ ನೋವೂ ಶುರುವಾಯಿತು.

ಮುಂದೆ ಎರಡು ದಿನವೂ ಯಾವಾಗಲಾದರೊಮ್ಮೆ ಸಣ್ಣಗೆ ನೋವು ಬರುತ್ತಿತ್ತು. ಹೆಚ್ಚು ನೋವಿಲ್ಲ, ಇನ್ನು ಮತ್ತೆ ಈ ವಿಷಯ ಮನೆಯಲ್ಲಿ ಎತ್ತಿದರೆ ಪ್ರಯಾಣವನ್ನೇ ಎಲ್ಲಿ ನಿಲ್ಲಿಸಬೇಕಾಗುವುದೋ ಎಂದು ಯೋಚಿಸಿ ಅದನ್ನು ನಿರ್ಲಕ್ಷಿಸಿಬಿಟ್ಟೆ.

ಮುಂಬಯಿಗೆ ಬಂದು ನನ್ನ ಗೆಳೆಯನಲ್ಲಿ ಇಳಿದುಕೊಂಡಿದ್ದೆ. ಆಗ ಒಂದು ಬೆಚ್ಚನೆಯ ಕೋಟು, ಎರಡು ಜೊತೆ ಸಾಕ್ಸ್ ಕೊಂಡುಕೊಂಡೆ. ಉದ್ದ ತೋಳಿನ ಸ್ವೆಟರು, ಏರ್ ರಗ್ಗು, ಉಲನ್ ಸೂಟುಗಳು ಮೊದಲೇ ನನ್ನೊಡನೆ ಇದ್ದುವು. ಚಳಿಯ ದಾಳಿಯನ್ನು ಹಿಮ್ಮೆಟ್ಟಿಸಲು ಸಾಕಷ್ಟು ಶಸ್ತ್ರಾಸ್ತ್ರಗಳೊಡನೆಯೇ ಚಂಡೀಗಡಕ್ಕೆ ಬಂದು ಇಳಿದೆ. ಸಂಚಾಲಕರು ಸ್ವಾಗತಿಸಿ ಕರೆದುಕೊಂಡು ಹೋದರು. ಒಂದು ದೊಡ್ಡ ಕಾಲೇಜು ಹಾಸ್ಟೆಲಿನಲ್ಲಿ ಬಂದ ಅತಿಥಿಗಳನ್ನೆಲ್ಲ ಇಳಿಸಿದ್ದರು. ಎಲ್ಲರಿಗೂ ಸಿಂಗಲ್ ರೂಮು. ನನಗೂ ಇನ್ನೊಬ್ಬರಿಗೂ-(ಅವರು ಉತ್ತರ ಪ್ರದೇಶದವರು) ಕೂಡಿ ಒಂದು ದೊಡ್ಡ ಡಬ್ಬಲ್ ರೂಮು ಸಿಕ್ಕಿತು. ವ್ಯವಸ್ಥೆ ಬಹಳ ಚೆನ್ನಾಗಿತ್ತು. ಶಾಕಾಹಾರ, ಮಾಂಸಾಹಾರ ಎರಡೂ ತರದ ಊಟ ತಿಂಡಿಗಳ ವ್ಯವಸ್ಥೆಯಿತ್ತು. ನಾನಂತೂ ಅಪ್ಪಟ ಶಾಕಾಹಾರಿ. ಅಲ್ಲಿ ನಮ್ಮ ಸಂಖ್ಯೆ ಬಹಳ ಕಡಿಮೆ. ನನ್ನ ಶಾಕಾಹಾರಕ್ಕೆ ಕಂಪನಿ ಕೊಟ್ಟವರೆಂದರೆ ತಮಿಳುನಾಡಿನ ಲೇಖಕರೊಬ್ಬರೇ ಎಂದು ಹೇಳಬೇಕು. ಉಳಿದವರೆಲ್ಲ ಮಾಂಸಾಹಾರಿಗಳು. ಅದರೊಡನೆ ಮದ್ಯಪಾನವೂ ನಡೆಯುತ್ತಿದ್ದುದು ನನಗೆ ತಿಳಿದುಬಂದಿತು. ನಾನು ಚಳಿಯಿಂದ ಬಹಳ ಮಟ್ಟಿಗೆ ನನ್ನನ್ನು ಕಾಪಾಡಿಕೊಂಡಿದ್ದೆ. ಯಾವಾಗಲೂ ಉಲನ್ ಸೂಟಿನಲ್ಲಿದ್ದು ಮೇಲೆ ಓವರ್‌ಕೋಟ್ ತೊಟ್ಟುಕೊಂಡೇಇರುತ್ತಿದ್ದೆ. ಮೊದಲೇ ಎತ್ತರವಾದ ಪ್ರದೇಶ, ಮೇಲೆ ಚಳಿಗಾಲ. ಕೇಳಬೇಕೆ. ಅಲ್ಲಲ್ಲಿ ದೂರದ ಹಿಮಾಲಯದ ಶಿಖರಗಳು ಮಸುಕು ಮಸುಕಾಗಿ ಕಾಣುತ್ತಿದ್ದುವು. ನೋಡಲು ಬಲು ಚೆಂದದ ನೋಟ. ಚಳಿಗೆ ಹೆದರಿದ ನಾನು ಸೃಷ್ಟಿ-ಸೌಂದರ್ಯವನ್ನು ಕೋಣೆಯಲ್ಲಿ ನಿಂತೇ ಗಾಜಿನ ಕಿಟಕಿಯ ಮೂಲಕ ನೋಡುತ್ತಿದ್ದೆ. ಸಮ್ಮೇಳನದ ಎರಡನೆಯ ದಿನ ನನ್ನ ಪ್ರಬಂಧ ಓದಿದೆ. ಕೆಲವು ಜನ ಮೆಚ್ಚಿ ನನ್ನ ಬಳಿ ಬಂದು ಅಭಿನಂದಿಸಿದರು. ಮನಸ್ಸಿಗೆ ಬಹಳ ಸಂತೋಷವಾಯಿತು. ಇಷ್ಟು ದೂರ ಬಂದು ನನ್ನ ಪಾಲಿನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದೆ ಎನ್ನುವ ಆತ್ಮ ಸಂತೋಷವೂ ಮೂಡಿತು. ಅಂದು ಸಂಜೆ ಇಳಿದು ಮನೆಗೆ ಬಂದೊಡನೆ ವಿವರಗಳೊಂದಿಗೆ ಊರಿಗೆ ಒಂದು ಪತ್ರವನ್ನೂ ಬರೆದೆ.

ಕೆಲವು ಜನ ಪರಿಚಿತರೆಲ್ಲ ಸೇರಿಕೊಂಡು ಸ್ವಲ್ಪ ದೂರದವರೆಗೆ ಸುತ್ತ ಮುತ್ತ ತಿರುಗಾಡಿ ಬರಲು ಹೊರಟರು. ನನ್ನನ್ನೂ ಕರೆದರು. ನನ್ನ ಆರೋಗ್ಯದ ಕಡೆಗೆ ಲಕ್ಷ್ಯಕೊಟ್ಟು

ಎರಡು ಮೂರು ದಿನದಿಂದ ಹೊರಗೇ ಹೋಗಿರಲಿಲ್ಲ. ಅಂದು ಮನಸ್ಸು ಉಲ್ಲಾಸದಲ್ಲಿದ್ದುದರಿಂದ ಅವರೊಡನೆ ನಾನೂ ಹೊರಟೆ. ತಮಾಷೆಯಾಗಿ ಮಾತನಾಡುತ್ತ ತಮ್ಮ ತಮ್ಮ ಪ್ರಾಂತಗಳ, ಊರಿನ, ಭಾಷೆಯ ಸಾಹಿತ್ಯದ, ಕೊನೆಗೆ ಊಟ ಉಪಚಾರಗಳ ಬಗ್ಗೆಯೂ ಒಬ್ಬರಿಗೊಬ್ಬರು ಹೇಳುತ್ತಾ ನಡೆಯುತ್ತಾ ಹೋದೆವು. ಅಲ್ಲಿ ಬಂದವರಲ್ಲಿ ಹೆಚ್ಚು ಜನ ಉತ್ತರ ಭಾರತದವರು. ಆದುದರಿಂದ ಅಲ್ಲಿಯ ಚಳಿಯಿಂದ ಅವರಿಗೆ ಅಷ್ಟೇನೂ ತೊಂದರೆ ಇರಲಿಲ್ಲ. ಒಬ್ಬರು ಮಹಾರಾಷ್ಟ್ರದವರು, ಅವರೂ ನಾಲ್ಕೈದು ವರ್ಷ ಕೆನಡಾದಲ್ಲಿದ್ದು ಬಂದವರು. ಅವರಿಗೂ ಚಳಿ ಶರಣಾಗತವಾಗಿತ್ತು. ಅದರ ದಾಳಿ ನನ್ನೊಬ್ಬನ ಮೇಲೆಯೇ ಎನ್ನುವಂತೆ ಸಂಜೆ ಹೆಚ್ಚಾದಂತೆ ಅತೀ ಚಳಿಯಾಗಿ ಮೈ ನಡುಕ ಶುರುವಾಯಿತು. ನನ್ನ ಸೂಚನೆಯಂತೆ ಎಲ್ಲರೂ ತಿರುಗಿ ಹೊರಟೆವು. ಇಳಿದ ಮನೆಯ ಸಮೀಪದಲ್ಲಿಯೇ ಒಂದು ಬಾರ್. ಎಲ್ಲರೂ ಅಲ್ಲಿಗೆ ಹೋಗೋಣ ಎಂದರು. ಆದರೆ ನನಗೆ ಮಾತ್ರ ಮನಸ್ಸು ಬಾರದೆ ಅವರ ಕ್ಷಮೆಕೋರಿ ನೇರವಾಗಿ ನನ್ನ ರೂಮಿಗೆ ಬಂದು ಸೇವಕನಿಗೆ ಸ್ಟ್ರಾಂಗ್ ಕಾಫಿ ತರಲು ಹೇಳಿ ಸುಮ್ಮನೆ ರಗ್ಗು ಹೊದ್ದು ಮಲಗಿದೆ.

ಅವನು ತಂದುಕೊಟ್ಟ ಕಾಫಿ ಕುಡಿದೆ. ಹೊರಗಿನ ನಡುಕ ಕಡಿಮೆಯಾದರೂ ಒಳಗೆ ಎಲುಬುಗಳೆಲ್ಲ ಅಲುಗಾಡುತ್ತಿದ್ದಂತೆ ಅನಿಸುತ್ತಿತ್ತು. ಹಾಗೆಯೇ ಬೆನ್ನು ನೋವು ಶುರುವಾಯಿತು. ಅವಳ ಆರೈಕೆಯ ನೆನಪಾಯಿತು. ಸಾವಿರ ಮೈಲು ದೂರದಲ್ಲಿ ನಾನಿಲ್ಲಿ ನರಳುತ್ತಿದ್ದೇನೆ ಎನ್ನುವ ಕಲ್ಪನೆಯೂ ಅವಳಿಗೆ ಬಾರದು ಎಂದುಕೊಂಡು ನಿರುಪಾಯನಾಗಿ ಬೆನ್ನು ಹಾಸಿಗೆಗೆ ಹಚ್ಚಿ ಸುಮ್ಮನೆ ಕಣ್ಣುಮುಚ್ಚಿ ಮಲಗಿಕೊಂಡೆ. ಬರುಬರುತ್ತ ನೋವು ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಅದರೊಡನೆಯೇ ಸಣ್ಣಗೆ ಎದೆ ನೋವು ಬಂದಿತು. ಧ್ವನಿ ಮಾಡಿ ನರಳಲೂ ಮನಸ್ಸು ಬಾರದೆ ಎರಡನ್ನೂ ಸಹಿಸಿಕೊಂಡಿದ್ದೆ. ಸೇವಕ ಬಂದು ಊಟಕ್ಕೆ ಬರಹೇಳಿದ, 'ನನಗೆ ಊಟವೇ ಬೇಡ, ಒಳ್ಳೆ ಕಾಫಿ ಬೇಕು' ಎಂದು ಹೇಳಿದೆ. ಆದರೆ ಅವನು ತಂದ ಕಾಫಿ ಕುಡಿಯಲು ಶತ ಪ್ರಯತ್ನ ಮಾಡಿದೆ. ಅಷ್ಟು ನೋವಿತ್ತು ಎದೆ ಮತ್ತು ಬೆನ್ನಿನಲ್ಲಿ. ಹೇಗೋ ಕಾಫಿ ಬಾಯಿಗೆ ಬಗ್ಗಿಸಿಕೊಂಡು ಮತ್ತೆ ಮಲಗಿದೆ. ನನ್ನ ರೂಮ್‌ಮೇಟ್ ಬಂದು ಮಲಗಿದರು. ನನ್ನ ನೋವು ಗಳಿಗೆಗಳಿಗೆಗೂ ಹೆಚ್ಚಾಗುತ್ತ ಹೋಯಿತು. ಆಡಲೂ ಬರದೆ ಅನುಭವಿಸುತ್ತಾ ಹೊರಳಾಡು ತ್ತಿದ್ದೆ. ಬರಬರುತ್ತ ಹಾಸಿಗೆಯಲ್ಲಿ ಸರಿಯಲೂ ಕೈಕಾಲು ಆಡಿಸಲೂ ಬಾರದಂತಾಯಿತು, ಅಷ್ಟು ಚಳಿ, ಕೈ ಕಾಲು ಎಲ್ಲ ಮರದಂತೆ ಗಟ್ಟಿಯಾದವು. ನನ್ನ ದೇಹದ ಮೇಲೆ ನನ್ನ ಸ್ವಾಧೀನ ತಪ್ಪಿಹೋಯಿತು. ದೇಹದ ಎಲ್ಲ ಕ್ರಿಯೆಗಳೂ ನಿಂತು ಹೋದ ಹಾಗೆ ನನಗೆ

ಅನುಭವವಾಯಿತು. ಎದೆಯ ನೋವು ಮಾತ್ರ ಹೆಚ್ಚಾಗಿತ್ತು. ಅವಲಕ್ಕಿ ಕುಟ್ಟಿದ ಹಾಗೆ ನನ್ನ ಎದೆಯ ಮೇಲೆ ಯಾರೋ ಕುಟ್ಟುತ್ತಿದ್ದಾರೆ ಎಂದುಕೊಂಡೆ. ಕೊನೆಗೆ ತಡೆದುಕೊಳ್ಳಲಾರದೆ ನನ್ನ ರೂಮ್‌ಮೇಟನ್ನು ಎಬ್ಬಿಸಿದೆ. ಆಗ ರಾತ್ರಿ ಹನ್ನೆರಡೂವರೆ. ಮಾತಾಡಲೂ ಶಕ್ತಿ ಇರಲಿಲ್ಲ ನನಗೆ. ನನ್ನ ಪರಿಸ್ಥಿತಿ ನೋಡಿ ಅವರೇ ಗಾಬರಿಯಾದರು. ಅವರು ಕಾರ್ಯದರ್ಶಿಯನ್ನು ಹುಡುಕಿ ಎಬ್ಬಿಸಿ, ವಿಷಯ ತಿಳಿಸಿ ಅವರು ಹೋಗಿ ನಾಲ್ಕು ಮೈಲು ದೂರದಲ್ಲಿದ್ದ ಡಾಕ್ಟರರನ್ನು ಕರೆತರುವ ಹೊತ್ತಿಗೆ ಮತ್ತೆ ಒಂದು ಗಂಟೆ ಕಳೆದಿತ್ತು. ಆಗ ನಾನು ಇದ್ದುದು ನೋವಿನ ನರಕದಲ್ಲಿ. ಊರು, ಹೆಂಡತಿ, ಮಕ್ಕಳು, ತಾಯಿ ಎಲ್ಲರೂ ಕಣ್ಣಮುಂದೆ ಸುಳಿದುಹೋದರು. ನಾನು ಇಲ್ಲಿ ಸಾಯುತ್ತಾ ಬಿದ್ದಿರುವಾಗ ಇದರ ಕಲ್ಪನೆಯೂ ಇಲ್ಲದೆ ಮನೆಯವರೆಲ್ಲ ನಗುತ್ತ ನಲಿಯುತ್ತ ಇರಬಹುದೆಂದು ಊಹಿಸಿ ದೇವರ ಈ ಲೀಲೆಗೆ ಬೆರಗಾದೆ.

ನಾನು ಸತ್ತ ಸುದ್ದಿ ತಿಳಿದ ಮೇಲೆ ಮನೆಯ ಪರಿಸ್ಥಿತಿ ಏನಾಗಬಹುದು ? ಎನ್ನುವ ಕಲ್ಪನೆ ಮಾಡಿ ನೋಡಿದೆ. ತುಂಬು ಬಸರಿಯಾದ ಅವಳು ಇದನ್ನು ಹೇಗೆ ಸಹಿಸಿಯಾಳು? ಸಣ್ಣ ಮಕ್ಕಳು ಅನಾಥರಾಗುವರು ಎಂದು ವಿಚಾರಮಾಡಿ ಅವರಿಗಾಗಿ ಮರುಗಿದೆ. ಅದರೊಡನೆಯೇ ನೋವನ್ನೂ ನುಂಗುತ್ತಲೇ ಇದ್ದೆ. ಡಾಕ್ಟರರು ಬಂದು ನೋಡಿ ಪರೀಕ್ಷೆ ಮಾಡಿ, ಹಾರ್ಟ್ ಎಟ್ಯಾಕ್ ಎಂದರು. ಬೆಳಗಾಗುವವರೆಗಾದರೂ ಬದುಕುವ ಭರವಸೆ ಕೊಡಲಾರೆ. ಆದರೂ ಔಷಧಿ ಇಂಜೆಕ್ಷನ್ನು ಕೊಡುತ್ತೇನೆ ಎಂದು ಹೇಳಿ ತಮ್ಮ ಕರ್ತವ್ಯ ಪಾಲನೆ ಮಾಡಿ ಹೋದರು. ಅವರು ಮಾತನಾಡಿದ್ದು ಕಿವಿ ಕೇಳಿತ್ತು. ಆದರೆ ನಾನೇ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನಿರ್ಜೀವ ಕೊರಡಿನಂತೆ ಬಿದ್ದಿದ್ದೆ. ನನ್ನ ರೂಮ್‌ಮೇಟ್ ಹೆದರಿದರೇನೊ - ತಾವೂ ಬೇರೊಂದು ಕೋಣೆಗೆ ಹೋಗಿ ಮಲಗಿದರು. ಸರಿ, ಆಗಲೂ ನನ್ನ ಮಿದುಳು ಕೆಲಸ ಮಾಡುತ್ತಿತ್ತು. ನಾನಂತೂ ಇಂದು ಸಾಯುವುದು ನಿಶ್ಚಿತ. ಬರುವಾಗಲೂ ಒಬ್ಬನೇ ಬಂದೆ, ಹೋಗುವಾಗಲೂ ಒಬ್ಬನೇ ಹೋಗುತ್ತಿದ್ದೇನೆ. 'ಆರಿಗಾರೂ ಇಲ್ಲ, ಕೆಟ್ಟವರಿಗೆ ಕೆಳೆಯಿಲ್ಲ. ಜಗದ ನಂಟ ನೀನೇ ಅಯ್ಯ' ಎಂದು ಆ ಭಗವಂತನಿಗೆ ಮೊರೆ ಹೋಗುವುದೇ ಒಳ್ಳೆಯದು ಎಂದು ಚಿಕ್ಕಂದಿನಲ್ಲಿ ಕಲಿತಿದ್ದ ಶಿವತಾಂಡವ ಸ್ತೋತ್ರ ಮನಸ್ಸಿನಲ್ಲಿಯೇ ಹೇಳತೊಡಗಿದೆ. ನುಡಿ ನುಡಿಗೊಮ್ಮೆ 'ಭಜೆ ಪಾರ್ವತೀಶಂ ಮಹಾ ತಾಂಡವೇಶಮ್' ಎನ್ನುವಾಗ ಶಿವ ನನ್ನ ಎದೆಯ ಮೇಲೆಯೇ ತಾಂಡವನೃತ್ಯಗೈಯುತ್ತಿದ್ದಾನೋ ಎನ್ನುವಷ್ಟು ನೋವು ಅನುಭವಿಸುತ್ತಿದ್ದೆ. ಮತ್ತೆ ಮತ್ತೆ ಅದನ್ನೇ ಎನ್ನತೊಡಗಿದ್ದರಿಂದ ತಲೆಯಲ್ಲಿನ ಗೊಂದಲವೆಲ್ಲ ದೂರವಾಗಿ ಏನೋ ಒಂದು

ವಿಧದ ಶಾಂತಿ ಮನಸ್ಸಿನಲ್ಲೂ, ತಲೆಯಲ್ಲೂ ಆವರಿಸಿತು.

ಹಿಮಾಲಯದಂಥ ಪವಿತ್ರ ಸ್ಥಳದಲ್ಲಿ ದೇಹ ಬಿಡುವ ಯೋಗ ಒದಗಿದ್ದಕ್ಕೆ ಮನಸ್ಸು ಪ್ರಸನ್ನವಾಯಿತು. ಹಾಗೆಯೇ ಶಿವಧ್ಯಾನದಲ್ಲಿ ಈ ಲೋಕವನ್ನೇ ಮರೆತು ಎಷ್ಟು ಹೊತ್ತು ಮಲಗಿದ್ದೆನೋ ನನಗೇ ತಿಳಿಯಲಿಲ್ಲ. ಬೆಳಗು ಸಮೀಪಿಸಿದಾಗ ಕೈಕಾಲು ಸರಿದಾಡಿದವು. ನಾನು ಚಂಡೀಗಡ ಹಾಸ್ಪೆಲಿನಲ್ಲಿ ಹಾಸಿಗೆಯ ಮೇಲೆ ಇದ್ದುದೂ ಅನುಭವಕ್ಕೆ ಬಂದಿತು. ಮುಂಜಾನೆ ಸಂಚಾಲಕರು ಬಂದು ನೋಡಿ ನನ್ನ ಅನುಮತಿಯಿಂದ ಆಸ್ಪತ್ರೆಗೆ ದಾಖಲು ಮಾಡಿದರು. ಎದೆ ನೋವು ಇನ್ನೂ ಕಡಿಮೆಯಾಗಿರಲಿಲ್ಲ. ಆದರೂ ಮರದ ಕೊರಡಿನಂತೆ ಇದ್ದ ನಾನು ಮನುಷ್ಯನಾಗಿದ್ದೆ ಅಷ್ಟೆ. ಅಲ್ಲಿ ಡಾಕ್ಟರರು ತಮ್ಮ ಔಷಧಿಗಳನ್ನು ಮುಂದುವರಿಸಿ ಇನ್ನೂ ಎರಡು ವಾರ ನೀವು ಹಾಸಿಗೆ ಬಿಟ್ಟು ಸರಿದಾಡುವ ಹಾಗೇ ಇಲ್ಲ. ನಿಮ್ಮ ಶುಶ್ರೂಷೆಗೆ ಮನೆಯವರು ಯಾರಾದರೂ ಇದ್ದರೆ ಒಳ್ಳೆಯದು ಎಂದಾಗ ಮತ್ತೆ ನಿರ್ಜೀವನಾದೆ. ಮನೆಯಲ್ಲಿ ಚಿಕ್ಕಮಕ್ಕಳು, ಗರ್ಭಿಣಿ ಹೆಂಡತಿ, ತಾಯಿ, ಅತ್ತೆ ಅಷ್ಟೇ ಜನ. ಇಲ್ಲಿಗೆ ಬರುವವರಾದರೂ ಯಾರು ? ಊರಿಗೆ ಈ ವಿಷಯವನ್ನೇ ಬರೆಯಬಾರದು ಎಂದು ನನ್ನ ಇಚ್ಛೆ. ಎದೆ ಒಂದೇ ಸವನೆ ಹಣಿಯುತ್ತಿತ್ತು ನನ್ನನ್ನು, ನನಗೆ ಬಹಳ ದಣಿವನ್ನೂ ಮಾಡಿತ್ತು. ನಾನು ಸಾಯುವುದೇ ನಿಜ. ಊರಿಗೆ ಹೊರಟು ಬಿಡಬೇಕು. ದಾರಿಯಲ್ಲಿ ಸತ್ತರೆ ಊರ ದಾರಿಯಲ್ಲಿದ್ದೇನೆ ಎಂದು ಮನಸ್ಸಿಗೆ ಶಾಂತಿ ಇರುತ್ತದೆ. ಒಂದು ವೇಳೆ ಊರು ಸೇರಿದರಂತೂ ಎಲ್ಲರ ಕಣ್ಣ ಮುಂದೆಯೇ ಸಾಯುತ್ತೇನೆ, ಎಂದು ನಿರ್ಧರಿಸಿದೆ. ಹಿಂದಿನ ರಾತ್ರಿ ಸಾವಿನೊಡನೆ ಸೆಣಸಿದ ಅನುಭವ ನನಗೆ ಧೈರ್ಯವನ್ನೂ ಕೊಟ್ಟಿತ್ತೆಂದು ಕಾಣುತ್ತದೆ. ಡಾಕ್ಟರರು ಮೊದಲು ನನ್ನ ಹೇಳಿಕೆಗೆ ಒಪ್ಪಲಿಲ್ಲ. ಬಹಳ ಒತ್ತಾಯ ಮಾಡಿದ ಮೇಲೆ ಪ್ರವಾಸಕ್ಕೆ ಅನುಮತಿ ಪತ್ರ ಕೊಟ್ಟರು. ಅದರೊಡನೆಯೇ ಇನ್ನೊಂದು ಉಪಕಾರ ಮಾಡಿದರು. ಅವರಲ್ಲಿಯ ರೋಗಿಯನ್ನು ನೋಡಬಂದ ವಿದೇಶಿ ಮಹಿಳೆಯೊಬ್ಬಳು ಮುಂಬಯಿಗೆ ಹೊರಟಿದ್ದಳು. ಅವಳಿಗೆ ನನ್ನ ಪರಿಚಯ ಮಾಡಿಕೊಟ್ಟು, ಪರಿಸ್ಥಿತಿ ವಿವರಿಸಿ ನನ್ನ ಮೇಲೆ ದೃಷ್ಟಿ ಇಟ್ಟಿರಲು ಅವಳಿಗೆ ಹೇಳಿದರು. ಆ ತಾಯಿ ನನಗೆ ಮಾಡಿದ ಉಪಚಾರ, ಉಪಕಾರಗಳನ್ನಂತೂ ವರ್ಣಿಸಿ ಬರೆಯಲು ಸಾಧ್ಯವಿಲ್ಲ. ದಾರಿಯಲ್ಲಿ ನನ್ನಂಥ ರೋಗಿಗೆ ಅವಳು ಅಂತಃಕರಣದಿಂದ ಶುಶ್ರೂಷೆ ಮಾಡಿ ಜೀವದಾನ ಮಾಡಿದ್ದು ದೇವರ ಲೀಲೆ ಎಂದೇ ಹೇಳಬೇಕು.

ಅಂತೂ ಒಮ್ಮೆ ಜೀವಸಹಿತ ಬಂದು ಮುಂಬಯಿಗೆ ಮುಟ್ಟಿದೆ. ಆದರೆ ನನ್ನ ದೇಹವನ್ನು ಮಾತ್ರ ಹೊತ್ತುಕೊಂಡೇ ಟ್ಯಾಕ್ಸಿಗೆ ಒಯ್ಯಬೇಕಾಯಿತು. ನನ್ನ ಗೆಳೆಯ ನನ್ನ

ಸ್ಥಿತಿ ನೋಡಿ ಗಾಬರಿಯಾಗಿ ಒಬ್ಬ ದೊಡ್ಡ ಹಾರ್ಟ್‌ಸ್ಪೆಷಲಿಸ್ಟ್‌ರನ್ನು ಕರೆದುಕೊಂಡು ಬಂದ. ಅವರು ಬಂದಾಗ ನನ್ನ ಎದೆ ನೋವು ಇನ್ನೂ ಕಡಿಮೆಯಾಗಿರಲಿಲ್ಲ, ಪ್ರವಾಸದ ಆಯಾಸ ಎರಡೂ ಕೂಡಿ ನನಗೆ ಎಚ್ಚರವೇ ಇರಲಿಲ್ಲ. ಅವರು ಕೇಳಿದ್ದಕ್ಕೆಲ್ಲಾ ಗೆಳೆಯನೇ ಉತ್ತರ ಕೊಟ್ಟ. ಚಂಡೀಗಡ ಡಾಕ್ಟರರು ಬರೆದುಕೊಟ್ಟ ಔಷಧ, ಇಂಜೆಕ್ಷನ್ನು, ತೆಗೆದ ಎಕ್ಸರೇ ಎಲ್ಲಾ ನೋಡಿ ನನ್ನನ್ನು ಮತ್ತೆ ಮತ್ತೆ ಪರೀಕ್ಷೆ ಮಾಡಿದರು. ಕೊನೆಗೆ ಬ್ಯಾಗಿನಿಂದ ಎರಡು ಗುಳಿಗೆ ತೆಗೆದುಕೊಟ್ಟು, ಇನ್ನು ಎಂಟು ಗಂಟೆಗಳ ಒಳಗೆ ಏನಾದರೂ ಬದಲಾವಣೆಯಾದರೆ ತಮಗೆ ತಿಳಿಸಬೇಕೆಂದು ಹೇಳಿ ಹೋದರು. ಗೆಳೆಯನ ಸಹಾಯದಿಂದ ಗುಳಿಗೆ ನುಂಗಿ ಕಾಫಿ ಕುಡಿದು ಮಲಗಿಕೊಂಡೆ. ನನ್ನ ಅವಸ್ಥೆಯ ಬಗ್ಗೆ ಚಿಂತೆಯೇ ಆಗಲಿ, ಊರ ಕಡೆಯ ಯೋಚನೆಯಾಗಲಿ ಯಾವುದೂ ಆಗ ನನ್ನಿಂದ ಸಾಧ್ಯವಿರಲಿಲ್ಲ. ಶೂನ್ಯ, ಬರಿ ಶೂನ್ಯವೇ ತುಂಬಿಕೊಂಡಿತ್ತು ಮನಸ್ಸಿನ ಆಳದಲ್ಲಿ. ಹಾಗೆಯೇ ಆ ಶೂನ್ಯವೇ ಬೆಳೆದು ಬೆಳೆದು ದೊಡ್ಡದಾಗುತ್ತಾ ಅದರಲ್ಲಿಯೆ ನನ್ನನ್ನು ಮುಳುಗಿಸಿಬಿಟ್ಟಿತು. ಹೀಗೇ ಎಷ್ಟು ಹೊತ್ತು ಕಳೆಯಿತೋ ತಿಳಿಯಲಿಲ್ಲ. ಮೈ ಎಲ್ಲ ಬೆವತು ಎಚ್ಚರಾದಾಗ ನನ್ನ ಕೈ ಎದೆಯ ಮೇಲಿತ್ತು. ಮೊದಲಿನ ಸುತ್ತಿಗೆಯ ಬಡಿತ ಮಾಯವಾಗಿ ಸ್ವಲ್ಪ ಸ್ವಲ್ಪ ಎದೆಯಲ್ಲಿ ಅಳುಕಿದ ಹಾಗಾಗುತ್ತಿತ್ತು. ನನ್ನ ಆಶ್ಚರ್ಯಕ್ಕೆ ಮಿತಿಯಿಲ್ಲ. ಮಗ್ಗಲು ಬದಲಿಸಿ ಮಲಗಿದೆ. ಸಂಜೆ ಡಾಕ್ಟರರ ಹತ್ತಿರ ಹೋದ ಗೆಳೆಯ ಮತ್ತೆ ಅಂಥ ಎರಡು ಗುಳಿಗೆಗಳನ್ನೇ ತಂದ. ಮರುದಿನವಂತೂ ನನಗೆ ಪುನರ್ಜನ್ಮವಾಗಿತ್ತು. ನಾನೇ ಹಾಸಿಗೆ ಬಿಟ್ಟು ಎದ್ದು ಬಚ್ಚಲು ಮನೆಗೆ ಹೋಗಿ ಬಂದೆ. ಅಂಥ ಯಾತನೆಯಲ್ಲಿ ಬೇಯುತ್ತಿದ್ದ ನನ್ನ ಸಂಕಟವನ್ನು ದೂರ ಮಾಡಿದ ಡಾಕ್ಟರರು ನನ್ನ ಪಾಲಿನ ದೇವರಾಗಿದ್ದರು. ಮರುದಿನ ನಾನೇ ಅವರನ್ನು ಭೇಟಿಯಾಗಲು ಹೋದೆ.

"ದಯವಿಟ್ಟು ನೀವು ಕೊಟ್ಟ ಗುಳಿಗೆಯ ಹೆಸರು ಬರೆದುಕೊಡಿ. ನನ್ನ ಎದೆನೋವಿಗೆ ಅದು ಬಹಳ ಪರಿಣಾಮ ಮಾಡಿತು. ಇದರಿಂದಲೇ ನಾನು ಬದುಕಿದೆ" ಎಂದೆ.

ಮೊದಲು ಡಾಕ್ಟರರು ದೊಡ್ಡದಾಗಿ ನಕ್ಕು ನುಡಿದರು-"ಗುಳಿಗೆಯ ಹೆಸರು ಕೇಳಿ ನಿಮಗೆ ಆಶ್ಚರ್ಯ ಆಗಬಹುದು. ಅದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದ ಕೊಡೋಪೆರಿನ್"

ನಾನು ಮೂಕನಾದೆ, ಡಾಕ್ಟರರು ನನ್ನ ಹತ್ತಿರ ತಮಾಷೆ ಮಾಡುತ್ತಿದ್ದಾರೇನೋ ಎಂದು ಭಾವಿಸಿದೆ. "ಇಲ್ಲ ಡಾಕ್ಟರ್, ನೀವು ಮರೆತ ಹಾಗೆ ಕಾಣುತ್ತದೆ ನಾನು ಚಂಡೀಗಡದಲ್ಲಿದ್ದಾಗ ಹಾರ್ಟ್ ಅಟ್ಯಾಕ್ ಆಗಿ ಪ್ರಾಣ ಹೋಗಿಬಂದಿತು. ನಾನಂತೂ

ಜೀವದ ಆಸೆ ಬಿಟ್ಟಿದ್ದೆ. ನಿಮ್ಮ ಗುಳಿಗೆಯಿಂದ ಆರಾಮವಾಯಿತು. ದಯವಿಟ್ಟು ಅದೇ ಗುಳಿಗೆಯ ಹೆಸರು ಬರೆದುಕೊಡಿರಿ. ಇನ್ನೊಮ್ಮೆ ಅಟ್ಯಾಕ್ ಬಂದಾಗ ತೆಗೆದುಕೊಳ್ಳಬೇಕಲ್ಲಾ" ಎಂದೆ.

ಈ ಸಲ ಡಾಕ್ಟರರು ಮೃದುವಾಗಿ ನಕ್ಕು, ವಿಶ್ವಾಸದಿಂದ ನನ್ನ ಬೆನ್ನು ತಟ್ಟಿ ಹೇಳಿದರು. "ಮಿಸ್ಟರ್ ನಿಮ್ಮ ಕಲ್ಪನೆ ತಪ್ಪು. ನಿಮಗೆ ಬಂದಿದ್ದು ಹಾರ್ಟ್ ಅಟ್ಯಾಕ್ ಅಲ್ಲವೇ ಅಲ್ಲ. ನೀವು ಚಿಂತೆ ಮಾಡಬೇಡಿ."

"ಅಲ್ಲಾ ಡಾಕ್ಟರ್, ಈ ಸಹಿಸಲು ಅಸಾಧ್ಯವಾದ ಎದೆನೋವಿನ ಅರ್ಥ ಏನು ? ಈ ಯಾತನೆ ಯಾಕೆ ಬಂತು ? ಕಾರಣ"

"ನಿಮಗೆ ಬೆನ್ನು ನೋವಿದೆ ಅಲ್ಲವೇ ? ಅದು ಅಲ್ಲಿಯ ಚಳಿಯಿಂದ ಅತಿಯಾಗಿ ಹೆಚ್ಚಾಗಿದ್ದಕ್ಕೆ ಎದೆನೋವು ಬಂದಿತು, ಅಷ್ಟೆ. ಆಗ ನಿಮಗೆ ನೋವು ಕಡಿಮೆ ಆಗುವ 'ಕೊಡೋಪೆರಿನ್'ನಂಥ ಗುಳಿಗೆ ಕೊಟ್ಟಿದ್ದರೂ ಎದೆನೋವು ಕಡಿಮೆ ಆಗ್ತಿತ್ತು. ಅದರ ಬದಲು ಹಾರ್ಟ್ ಅಟ್ಯಾಕ್‌ದ ಟ್ರೀಟ್‌ಮೆಂಟ್ ಮಾಡಿದ್ದಕ್ಕೆ ನಿಮ್ಮ ಎದೆನೋವು ಹೆಚ್ಚಾಯಿತು. ಅದಕ್ಕೇ ನಾನು ಆ ಔಷಧಿ ಬಿಡಿಸಿ ಈ ಗುಳಿಗೆ ಕೊಟ್ಟೆ. ಅದರ ಫಲವಾಗಿ ನಿಮಗೆ ಗುಣ ಕಂಡಿತು" ಎಂದರು.

ಅವರ ಮಾತಿನಿಂದ ನನಗೆ ವ್ಯಥೆಯ ಜೊತೆಗೆ ಸಂತೋಷವೂ ಆಗಿತ್ತು. ನನ್ನ ಅನಾರೋಗ್ಯದಿಂದ ಸುಮಾರು ಸಾವಿರ ರೂಪಾಯಿ ನನ್ನ ಕೈ ಬಿಟ್ಟಿದ್ದವು. ಆದರೆ ಈಗ ಎಂಟು ದಿನಗಳಿಂದ ಹೃದಯ ರೋಗಿಯಾಗಿದ್ದ ನಾನು ಈಗ ಅದರಿಂದ ಮುಕ್ತನಾಗಿದ್ದೆ.

ಮರುದಿನವೇ ಊರಿಗೆ ಹಿಂತಿರುಗಿದೆ. ಹೋದೊಡನೆಯೇ ಮನೆಯವರ ಆಕ್ಷೇಪಣೆಗಳ ಸುರಿಮಳೆ. "ಊರಿಗೆ ಹೋದ ಮೇಲೆ ಒಂದೇ ಕಾಗದ ಹಾಕಿದಿರಿ. ಮತ್ತೆ ಬರೀಲೇ ಇಲ್ಲ ನಮ್ಮನ್ನು ಮರೆತೇಬಿಟ್ಟಿದ್ದಿರಾ ? ಹೋಗಲಿ, ಚಂಡಿಗಡ, ಹಿಮಾಲಯ ಚೆನ್ನಾಗಿತ್ತೇ ? ಕೈಲಾಸದ ಸಮೀಪಕ್ಕೆ ಹೋಗಿ ಬಂದಿರಿ ಅಲ್ಲವೇ ?"

"ಓಹೋ ಬಹಳ ಚೆನ್ನಾಗಿತ್ತು. ನಾನು ಕೈಲಾಸ ಕಂಡೇ ಬಂದೆ" ಎಂದೆ.

# ಕಂಡದ್ದನ್ನಾಡಿದರೆ.......

ಒಂದು ಬೇಸಗೆ ಮಧ್ಯಾಹ್ನ, ಹೊರಗೆ ಉರಿಯುವ ಬಿಸಿಲು, ನಾನು ಬಾಣಂತಿ. ಕೂಸಿನ ಜೊತೆಗೆ ಅಡ್ಡಾಗಿದ್ದೆ. ಅವ್ವ, ಅಜ್ಜಿ ಹಪ್ಪಳ ಲಟ್ಟಿಸುತ್ತಾ ಇದ್ದರು. ಅವರ ಬೇಸರ ಕಳೆಯೋದಕ್ಕೆ ನನ್ನ ತಂಗಿ ಯಾವುದೋ ಕತೆ ಓದಿ ಹೇಳ್ತಾ ಇದ್ದಳು. ಸುಮ್ಮನೆ ಕೆಲಸ ಮಾಡಲಿಕ್ಕೆ ನಮ್ಮ ಅಜ್ಜಿಗೆ ಬೇಸರ. ತಾನಾದರೂ ಮಾತಾಡಬೇಕು ಅಥವಾ ಇನ್ನೊಬ್ಬರ ಮಾತು ಕೇಳತಿರಬೇಕು, ಅದು ಅವಳ ಸ್ವಭಾವ.

ಅವಳದಷ್ಟೇ ಅಲ್ಲ, ಎಲ್ಲಾ ವಯಸ್ಸಾದ ಮುದುಕ ಮುದುಕಿಯರ ಸ್ವಭಾವವೇ ಹಾಗೆ. ಕೈ ಕಾಲಿನ ಶಕ್ತಿ ಕಡಮೆಯಾದ ಹಾಗೆ ಬಾಯಿ ಶಕ್ತಿ ಹೆಚ್ಚಾಗ್ತದೆ. ಅದಕ್ಕೆ ಅವ್ವ ತಂಗೀನ್ನ ಕತೆ ಓದಲಿಕ್ಕೆ ಒಪ್ಪಿಸಿದ್ದರು.

ಅಷ್ಟರಲ್ಲೇ ಬಾಗಿಲು ಸಪ್ಪಳವಾಯಿತು. ತಂಗಿ ಬಾಗಿಲು ತೆಗೆದಳು. ನೆರೆಮನೆ ಶಾರದಮ್ಮ ಬಂದು ಅಲ್ಲೇ ಚಾಪೆಯ ಮೇಲೆ ಕುಳಿತರು. ಶಾರದಮ್ಮ ನಮ್ಮ ನೆರೆಮನೆಗೆ ಬಂದು ಒಂದೆರಡು ತಿಂಗಳಾಗಿದ್ದವು. ಎರಡು ಮಕ್ಕಳು, ಗಂಡ, ಹೆಂಡತಿ, ಚಿಕ್ಕ ಸಂಸಾರ, ದಿನಕ್ಕೊಂದು ಚೆಂದದ ಸೀರೆ ಉಟ್ಟು, ಬೇರೆ ಬೇರೆ ಮಾದರಿಯ ಮುಡಿ ಕಟ್ಟಿಕೊಂಡು, ನೋಡುವವರ ಕಣ್ಣಿಗೆ ಚೆಂದವಾಗಿ ಓಡಾಡುತ್ತಿದ್ದರು. ಮಾತು ಬೇಕು, ಆಗಾಗ ಮಾತಿಗೆ ನಮ್ಮ ಮನೆಗೂ ಬಂದು ಕೂಡುತ್ತಿದ್ದರು.

ಅವರನ್ನು ನೋಡಿ ಅಜ್ಜಿಯ ವಾಕ್ಪ್ರವಾಹ ಹರಿಯಿತು. 'ಇವತ್ತು ಏನು ಅಡಿಗಿ ಮಾಡಿದ್ರಿ ?' ಮಕ್ಕಳು ಶಾಲೆಗೆ ಹೋದರೆ ?' 'ಸೀರೆ ಎಲ್ಲಿ ತಗೊಂಡ್ರಿ ? ಎಷ್ಟು ರೊಕ್ಕ ಕೊಟ್ರಿ ?' ಇತ್ಯಾದಿ. ಅವರು ಮಾತು ಆಡ್ತಾ ಸುಮ್ಮನೆ ಕೂತಿದ್ದು ನೋಡಿ ಅಜ್ಜಿ ಸುಮ್ಮನಿರಲಿಲ್ಲ. "ಅಲ್ರೀ ಶಾರದಮ್ಮ, ಸುಮ್ನೇ ಕೂತಿರಲ್ಲ. ಒಂದೆರಡು ಹಪ್ಪಳಾ ಲಟ್ಟಿಸ್ರೀs 'ಕಂಡ ಉಳ್ಳೆ ಬಿಟ್ರೆ ಗಂಡ ಬಿಡ್ತಾನಂತೆ' ಗಾದೆ ಮಾತು ಕೇಳಿಲ್ಲೇನು' ಅಂದಳು. ಶಾರದಮ್ಮ ಜೋರಾಗಿ ನಕ್ಕು, "ಹೋ ಅಜ್ಜೀದೊಂದು ಮಾತೇ. ಗಂಡ ಬಿಡ್ತಾನಂತೆ. ಈಗಿನ ದಿನಗಳಲ್ಲಿ ಅದೆಲ್ಲಾ ಸಾಧ್ಯಾನೇ ಇಲ್ಲಾ. ನಿಮ್ಮ ಕಾಲಕ್ಕಿರಬೇಕು ಹಾಗೆಲ್ಲಾ. ಹಪ್ಪಳಾ ಒತ್ತಿ ನನಗೆ ರೂಢಿ ಇಲ್ಲ. ನನಗೆ ಬರೂದೇ ಇಲ್ರೀ" ಅಂದರು.

ಅಜ್ಜಿಯ ಸ್ವಾಭಿಮಾನ ಮುಕ್ಕಾಯಿತು. "ಹಾಂ, ನೀವು ಅಂಗಡಿಯಿಂದ ಹಪ್ಪಳಾ ತಂದು ತಿನ್ನುವರು ಅಲ್ರೀs ನಾ ಮರೆತಿದ್ದೆ. ಇಂಥಾದಕ್ಕೆಲ್ಲಾ ನಿಮಗೆ ವೇಳೆ ಇರೂದಿಲ್ಲಾ. ತಾಸಿಗೊಂದು ಸೀರೆ ಬದಲಿಸಲಿಕ್ಕೆ, ದಿನಕ್ಕೊಂದು ಮುಡಿ ಕಟ್ಟಲಿಕ್ಕೆ, ವಾರಕ್ಕ ಮೂರು ಸಿನಿಮಾ ನೋಡಲಿಕ್ಕೆ ನಿಮಗೆ ವೇಳೆ ಇರತದ. ಇಂಥಾದರಾಗ ಮನೀ ಕೆಲಸಕ್ಕೆ ವೇಳೆ ಸಿಗೂದಿಲ್ಲ" ಅಂದುಬಿಟ್ಟಳು.

ಶಾರದಮ್ಮನ ಮುಖ ಸುಟ್ಟ ಬದನೀಕಾಯಿ ಆಯಿತು. ಅವರು ಎದ್ದವರೇ "ನಮ್ಮ ಮನೀಯೊಳಗ ನಾವು ಏನಾದರೂ ಮಾಡತೀವಿ, ನೀವ್ಯಾರು ಅದನ್ನ ಕೇಳುವರು ?" ಅಂದು ಬಿರುಗಾಳಿಯ ಹಾಗೆ ಬಿರ್ರನೆ ಹೋಗಿಬಿಟ್ಟರು. ಅವ್ವನ ಮುಖ ಸಪ್ಪಗಾಯಿತು. "ಅತ್ತೆವ್ವ, ನೀವು ಹಾಂಗ ಅನ್ನಬಾರದಾಗಿತ್ತು. ಮಂದೀ ಮನೀ ಮಾತು ನಮಗ್ಯಾಕ ? ಮನೀಗೆ ಬಂದವರ ಕೂಡ ಚೆಂದಾಗಿ ನಾಲ್ಕು ಮಾತಾಡಿ ಕಳಿಸ್ಬೇಕು" ಅಂದಳು. "ಇರಲಿ ಬಿಡs ಇಂಥಾವರನ್ನ ಬಹಾಳ ಮಂದೀನ್ನ ಕಂಡೇನಿ ಕಂಡದ್ದನ್ನ ಆಡಿದರೆ ಕೆಂಡದಂಥಾ ಸಿಟ್ಟಂತ" ಅಂದಳು ಅಜ್ಜಿ.

"ಏನಜ್ಜೀ, ಮಾತಿಗೊಂದು ಗಾದೆ ಹೇಳ್ತೀಯಲ್ಲ" ಅಂದೆ.

"ಇದೊಂದs ಏನು ? 'ಇದ್ದದ್ದು ಹೇಳಿದರ ಹದ್ದಿನಂಥ ಮೋರೆಯಾಯ್ತು' ಅಂತಾರ ಮತ್ತೆs"

"ಅಷ್ಟು ಚೆಂದನ್ನ ಶಾರದಮ್ಮನ ಮುಖಕ್ಕ ಹದ್ದೂ ಅಂತೀಯಲ್ಲ ಅಜ್ಜೀss" ನನ್ನ ತಂಗಿ ಬಿದ್ದು ಬಿದ್ದು ನಕ್ಕಳು.

ಹೌದು, ಅಜ್ಜಿ ಹೇಳಿದ ಮಾತು ನಿಜ-'ಕಂಡದ್ದನ್ನ ಆಡಿದರೆ ಕೆಂಡದಂಥಾ ಸಿಟ್ಟು' ಆಡಿಸಿಕೊಂಡವರು ಸುಮ್ಮನಿರೂದೆ ಇಲ್ಲ. ತಿರುಗಿ ಕೆಂಡದ ಹಾಗೆ ನಿಮಗೆ ಚುರುಕು ಮುಟ್ಟಿಸೇ ಬಿಡ್ತಾರೆ. ಆಡಿದವರು ನೀವೇ ಪೆಚ್ಚು ಮುಖ ಹಾಕಿಕೊಂಡು ಬರಬೇಕು. 'ಬುದ್ದೀ ಹೇಳಿದವರ ಕೂಡ ಗುದ್ಯಾಡಲಿಕ್ಕೆ ಬಂದರು' ಅಂತಾರಲ್ಲ ಹಾಗೆ.

ತಮ್ಮ ತಪ್ಪು ತಮಗೆ ಕಾಣುವುದೇ ಇಲ್ಲ. ಎರಡನೆಯವರು ಕಾಣಿಸಿಕೊಟ್ಟರೂ ಅದು ತಪ್ಪೇ ಅಲ್ಲ ಅಂತ ಸಾಧಿಸತಾರ. ಅವರು ಹಾಂಗ ಮಾಡ್ತಾರ ಅಂತ ಹೇಳಿ ಅವರು ತಪ್ಪು ಮಾಡೋದನ್ನ ನೋಡ್ತಾ ಸುಮ್ಮನೆ ಕೂಡ್ರಲಿಕ್ಕೆ ಆಗೂದಿಲ್ಲ. ಆದರೂ ಕಂಡದ್ದನ್ನ ಆಡಲಿಕ್ಕೆ ನಮ್ಮ ಅಜ್ಜೀ ಹಾಂಗ ಭಂಡ ಧೈರ್ಯಬೇಕು. ಕಂಡದ್ದನ್ನ ಆಡೂದು ಕಂಡ ಕಂಡವರ ಮುಂದೆ ಎಲ್ಲಾ ಅಲ್ಲ. ಅದನ್ನ ಎಲ್ಲಾ ಹೆಂಗಸರೂ ಮಾಡ್ತಾರ. ಆ ವಿಷಯಕ್ಕೆ ಸಂಬಂಧಪಟ್ಟವರ ಎದುರೇ ಆಡಬೇಕು. ಅವರಿಂದ

ಎದುರು ಬಾಣ ಬಂದರೆ ಸಿದ್ಧ ಆಗಿರಬೇಕು. ಮುಖ್ಯ ಆಡುವವರ ಎದೆಗುಂಡಿಗೆ ಗಟ್ಟಿಯಾಗಿರಬೇಕು.

'ನಿಜ ಆಡಿದರೆ ನಿಷ್ಠೂರ' ಅಂತ. ನಮಗ್ಯಾಕ ಬೇಕು ಉಳಿದವರ ಉಸಾಬರಿ ? ಏನಾದರೂ ಮಾಡಿಕೊಳ್ಳವೊಲ್ಲರು ಅಂತ ಸುಮ್ಮನಿರುವ ಸಜ್ಜನರೇ ಬಹಳ ಈಗಿನ ದಿನದೊಳಗ. ಯಾಕೆಂದರೆ ದಿನಾಲು ಬೆಳಗಾದರೆ ಉಳ್ಳಾಗಡ್ಡಿ, ಉಪ್ಪು, ಎಣ್ಣಿ ಈಗ ಯಾರ ಮನ್ಯಾಗೂ ಸಿಗಲಾರದ ಸಕ್ಕರಿ ಇಂಥಾ ಸಾಮಾನುಗಳಿಗೆ ಕಡ ತರಲಿಕ್ಕೆ ಹೋಗಬೇಕಾಗತದ. ಅವರಿಗೆ ಬೇಕಾದಾಗ ನಾವು, ನಮಗೆ ಬೇಕಾದಾಗ ಅವರು ಕೊಡಬೇಕಾಗತದ. ಅವರ ನಿಷ್ಠೂರ ಕಟ್ಟಿಕೊಂಡರೆ ಇದಕ್ಕೆಲ್ಲಾ ಸೊನ್ನೆ. ಅವರ ಜೊತೆಗೆ ಸವಿಸವಿಯಾಗಿ ಗಿಲೀಟಿನ ಮಾತು ಮಾತಾಡ್ತಾ ಇದ್ದರ ಸಿನಿಮಾಕ್ಕ ಹೋದಾಗ ಹಾಲು ತೊಗೋತಾರ, ಬೇಡಿದಾಗ ಕಡ ಕೊಡ್ತಾರ, ಊರಿಗೆ ಹೋದಾಗ ನಮ್ಮ ಮನೆ ಕಡೆಗೆ "ನೆದರು" ಇಟ್ಟಿರ್ತಾರ. ಅವರಿಂದ ಇಂಥಾ ಉಪಕಾರಗಳೆಲ್ಲಾ ಆಗಬೇಕಾಗಿರೋವಾಗ ಅವರ ದೋಷಗಳನ್ನು ನಾವು ಎಣಿಸೋದೂ ತಪ್ಪು. ಅವರಿಗೆ ಹೇಳೋದು ಇನ್ನೂ ತಪ್ಪು.

ನಮ್ಮ ಯಜಮಾನರಿಗೆ ಒಂದೂರಿಗೆ ವರ್ಗ ಆಗಿತ್ತು. ಬಹಳ ದಿನ ಕಷ್ಟಪಟ್ಟ ಮೇಲೆ ಒಂದು ಒಳ್ಳೆ ಮನೆ ಸಿಕ್ಕಿತ್ತು. ಮನೆ ನೋಡಿದಾಗ ನಮಗೆ ಬಹಳ ಸಂತೋಷ ಆಯಿತು. ಮನೆ ಹಿಂದೆ. ಮುಂದೆ ಸ್ವಲ್ಪ ಜಾಗವಿತ್ತು. ನಮ್ಮವರಿಗೆ ತೋಟ ಮಾಡುವುದೊಂದು ಹಾಬಿ. ಮುಂದಿನ ಭಾಗದೊಳಗೆ ಒಳ್ಳೊಳ್ಳೆಯ ಹೂವಿನ ಗಿಡಗಳನ್ನು ಕೊಂಡು ತಂದು ಹಚ್ಚಿದರು. ದಿನಾಲು ಮಡಿ ಮಾಡುವುದು, ಕಸ ತೆಗೆಯೂದು, ಗೊಬ್ಬರ ಹಾಕುವುದು, ಇದರಲ್ಲಿಯೇ ವೇಳೆ ಕಳೆಯುತ್ತಾ ಇದ್ದರು. ಅವರ ಅಂಟುಜಾಡ್ಯ ನನಗೂ ಸ್ವಲ್ಪ ತಾಗಿ ನಾನೂ ಹಿತ್ತಿಲದೊಳಗೆ ಕಾಯಿಪಲ್ಲೆ ಬೆಳೆದಿದ್ದೆ.

ನಮ್ಮ ನೆರೆಮನೆಯೊಳಗೆ ಮನೆ ಮಾಲೀಕರು ಇರುತ್ತಿದ್ದರು. ಅವರದು ದೊಡ್ಡ ಸಂಸಾರ. ಆರು ಜನ ಹುಡುಗರು, ಗಂಡ, ಹೆಂಡತಿ. ಇಬ್ಬರ ಮನೆಗೂ ಕೂಡಿ ಒಂದೇ ಗೇಟಿನಿಂದ ಪ್ರವೇಶ. ತೋಟದೊಳಗೆ ನಮಗಿದ್ದ ಆಸಕ್ತಿ ಅವರಿಗೆ ಇರಲಿಲ್ಲ. ಮನೆ ಮುಂದಿನ ಜಾಗ ಸ್ವಚ್ಛವಾಗಿಯೂ ಇಡುತ್ತಿರಲಿಲ್ಲ. ಮನೆ ಗುಡಿಸಿದ ಮೇಲೆ ಕಸವನ್ನು ಹಾಗೆ ತಂದು ಕಾಂಪೌಂಡಿನ ಒಂದು ಮೂಲೆಯಲ್ಲಿ ಸುರಿದು ಹೋಗುತ್ತಿದ್ದರು. ಗಾಳಿ ಜೋರಾಗಿ ಬೀಸಿದಾಗ ಅದು ಎಲ್ಲಾ ಕಡೆಗೂ ಹರಡಿ ನಮ್ಮ ಅಂಗಳವನ್ನೂ ಅಲಂಕರಿಸುತ್ತಿತ್ತು.

ಇವರಿಗೆ ಇದೆಲ್ಲಾ ಅಸಹ್ಯ. ನಾನೇ ಗುಡಿಸಿ ಚೆಲ್ಲುತ್ತಿದೆ. ಕೊನೆಗೆ ಒಂದು ದಿನ ಅವರಲ್ಲಿಗೆ ಹೋಗಿ, ಅವರು ಗುಡಿಸಿದ ಕಸವನ್ನು ಗೇಟಿನ ಹೊರಗೆ ಹೋಗಿ ತಿಪ್ಪೆಗೆ ಹಾಕಬರಲು ಹೇಳಿದೆ. ಮನೆ ಮುಂದೆ ಕಸ ಇಟ್ಟುಕೊಂಡರೆ ನಿಮಗಾದರೂ ಚಂದವೇ ಎಂದು ಕೇಳಿದೆ. ಅಬ್ಬಾ! ಎಷ್ಟು ಸಿಟ್ಟು ಬಂತು ಅವರಿಗೆ. ಒಮ್ಮೆಲೆ ಕೆರಳಿ ಕೆಂಡವಾದರು. ಕೆಂಡ ಏನು, ಬೆಂಕಿನೇs. "ಏನ್ರೀ ನಮ್ಮ ಮನೀಗೆ ಬಂದು ನಮಗೇ ಬುದ್ಧಿ ಹೇಳತೀರೇನು? ನಮ್ಮ ಮನಸ್ಸಿಗೆ ಬಂದಾಂಗ ನಾವು ಮಾಡತೇವಿ. ನೀವ್ಯಾರು ಕೇಳಲಿಕ್ಕೆ ? ಹಗಲು ಹನ್ನೆರಡು ತಾಸು ಗುದ್ದಲಿ ಕುರಪಿ ಹಿಡಿದು ತೋಟಾ ಮಾಡಲಿಕ್ಕೆ ನಮಗೇನು ಮನೀಯೊಳಗೆ ಕೆಲಸ ಇಲ್ಲೇನು ?" ಎಂದು ಗರ್ಜಿಸಿದರು. ನಾನೇ ನಾಚಿ ನೀರಾಗಿ ಮನೆಗೆ ಬಂದೆ.

ಆಯಿತು, ಅವರ ಸಿಟ್ಟು ಮುಗೀಲಿಲ್ಲ. ದಿನಾಲು ಹೋಗುವಾಗ ಬರೂವಾಗ ಹುಡುಗರೆಲ್ಲಾ ಗೇಟು ತೆಗೆದಿಟ್ಟು ಹೋಗುತ್ತಿದ್ದರು. ನಾನು ಒಳಗಿನ ಕೆಲಸ ಬಿಟ್ಟು ಧಾವಿಸುತ್ತಿದ್ದೆ ಗೇಟು ಮುಚ್ಚಲಿಕ್ಕೆ. ನಮ್ಮ ತೋಟ ದನಗಳ ಬಾಯಿಗೆ ತುತ್ತಾಗಬಾರದು ಎಂದು ಆಸೆ ನನಗೆ. ಎಷ್ಟು ಸಲ ಹೇಳಿದರೂ ಅವರೇನು ತಮ್ಮ ಕೆಲಸ ಬಿಡಲಿಲ್ಲ. ಒಂದು ದಿನ ಅವರು ಆಫೀಸಿಗೆ ಹೋಗಿದ್ದಾಗ ನಾನು ಗೆಳತಿಯ ಮನೆಗೆ ಹೋಗಿದ್ದೆ. ತಿರುಗಿ ಬಂದು ನೋಡುವುದರಲ್ಲಿ ನಮ್ಮ ಹೂವಿನ ತೋಟ, ಕಾಯಿಪಲ್ಲೆ ತೋಟ ಎಲ್ಲಾ ಹನುಮ ಹೊಕ್ಕ ಅಶೋಕ ವನ ಆಗಿತ್ತು. ಅದರ ಅವಸ್ಥಾ ನೋಡಿ ನಮಗ ಬಹಳ ಕೆಟ್ಟ ಅನ್ನಿಸ್ತು. ಮುಂದ ಹದಿನೈದೇ ದಿನದೊಳಗ ನಮ್ಮವರು ಬೇರೆ ಮನೆ ಹುಡುಕಿದರು. 'ಇದ್ದ ಮಾತು ಇದ್ದ ಹಾಗೆ ಹೇಳಿದರೆ ಸಿದ್ದೇದೇವರಿಗೆ ಸಿಡಿಲು ಬಡಿಯಿತು' ಅಂತಾರಲ್ಲ ಹಾಗಾಯ್ತು.

ನಮ್ಮ ಮನೆಯಲ್ಲೊಂದು ದಿನ ಕೆಲವು ಜನ ಮುತ್ತೈದೆಯರಿಗೆ ಅರಿಶಿಣ ಕುಂಕುಮಕ್ಕೆ ಕರೆದಿದ್ದೆ. ಹೊರಡುವಾಗ ಎಲ್ಲರಿಗೂ ಎಲೆ-ಅಡಿಕೆ, ಕುಂಕುಮ ಕೊಡುತ್ತಾ ಇಂದಿರಾಬಾಯಿ ಹತ್ತಿರ ಬಂದೆ. ಅವರ ಮಗಳು ಮಂಜುಳಾ ನನ್ನ ನಾದಿನಿಯ ಗೆಳತಿ, ಬಹಾಳ ಸುಂದರ, ಸುಶಿಕ್ಷಿತ, ಸುಸ್ವಭಾವಿ ಹುಡುಗಿ. ಅವಳ ಲಗ್ನದ ಮಾತು ನಡೆದಿತ್ತು. "ಇಂದಿರಾಬಾಯೀs ನಿಮ್ಮ ಮಂಜುಳಾನ್ನ ದೇಸಾಯರ ಮಗ ನೋಡಿ ಒಪ್ಪಿದ್ದರಂತ. ಮುಂದೇನಾಯಿತು ?" ಅಂದೆ.

ಅದಕ್ಕೆ ಅವರು "ಇಲ್ರೀ, ದೇಸಾಯರ ಶ್ರೀಮಂತಿಕೆಗೆ ಏನೂ ಕಡಮೆ ಇಲ್ಲದಿದ್ದರೂ ವಿದ್ಯಾ ಕಡಿಮಿ ಅಂತ ನಮ್ಮ ಮಂಜುಳಾನs ಒಲ್ಲೆ...." ಅವರ ಮಾತು ಇನ್ನೂ ಮುಗಿದಿರಲಿಲ್ಲ. ಹತ್ತಿರದಲ್ಲಿದ್ದ ನಾಗಮ್ಮ ಆರ್ಭಟಿಸಿದರು. "ಹೂಂ ಒಲ್ಲೆ ಅಂದಳಂತ

ಮಗಳು, ಬಡಿವಾರದ ಮಾತು ಹೇಳತಾರ. ನಮ್ಮ ಅಣ್ಣನ ಮಗನಿಗೆ ಏನು ಕಡಿಮಿ ? ಜಾತಕ ಕೂಡಲಿಲ್ಲ ಅಂತ ನಾವs ಕನ್ಯಾ ಬಿಟ್ಟೇವಿ. ಮಂದಿ ಮನೀತನಕಾ ದೀಡ ನಮಸ್ಕಾರ ಹಾಕ್ಕೋತ ಬಂದು ಕನ್ಯಾ ಕೊಡತಾರ." ನಾನು ಪೆಚ್ಚಾಗಿ ಇಂದಿರಾಬಾಯಿ ಕಡೆ ಹೊರಳಿದೆ. ಅವರು ಆಗಲೇ ಹೊರಬಾಗಿಲು ದಾಟಿದ್ದರು.

ಇದು ಮತ್ತೊಂದು ತರದ ಅನುಭವ. ಸರಸ್ವತಿ ನನ್ನ ಗೆಳತಿ. ಬಿ.ಎಸ್‌ಸಿ. ಆದ ಮೆಲೆ ಮದುವೆಯಾಗದೆ ಆಫೀಸಿನೊಳಗೆ ನೌಕರಿ ಮಾಡುತ್ತಿದ್ದಳು. ನಾನೂ ಅವಳೂ ಕೂಡಿ ಒಂದು ದಿನಾ ಮ್ಯಾಟಿನಿಗೆ ಹೋಗಿ ನಮ್ಮ ಮನೆಗೆ ಬರುತ್ತಿದ್ದೆವು. ದಾರಿಯೊಳಗ ಸರಸೂ ಒಂದ ಮನೀ ಮುಂದ ಆಡುವ ಹುಡುಗನ್ನ ನೋಡಿದಳು. ನಾನೂ ನೋಡಿದೆ. ಮೊಂಡ ಮೂಗು, ಮೂಗಿನಲ್ಲಿ ಸಿಂಬಳ, ಒಣಗಿದ ಕೂದಲು, ಉಬ್ಬಿದ ಹೊಟ್ಟೆ, ಹೊಲಸಾದ ಅಂಗಿ, ಕೈಕಾಲುಗಳಿಗೆಲ್ಲಾ ಮಣ್ಣು ಮೆತ್ತಿತ್ತು.

"ಬಾರs ಇಲ್ಲೇ" ಅಂದವಳೇ ಹೋಗಿ ಆ ಹುಡುಗನನ್ನು ಎತ್ತಿಕೊಂಡು ಮನೆಯ ಬಾಗಿಲು ತಟ್ಟಿದಳು. ಬಾಗಿಲು ತೆರೆದ ಹೆಣ್ಣು ಮಗಳನ್ನು ನೋಡಿ "ನೋಡ್ರಿss ನಿಮ್ಮ ಮಗನ್ನ. ಹ್ಯಾಂಗಿದ್ದಾನ ಬಾಲಕೃಷ್ಣ, ಮುದ್ದುಕೃಷ್ಣ, ಹೊರಗ ಆಟ ಆಡ್ತಿದ್ದ. ನಮ್ಮ ಮನಿಯೊಳಗಿನ ಕ್ಯಾಲೆಂಡರಿನಾಗ ಅಂಥಾ ಮುದ್ದು ಕೃಷ್ಣ ಇದ್ದಾನ" ಎಂದು ಆ ಹುಡುಗನನ್ನು ಕೈಯ ಮೇಲೆ ಕುಣಿಸಿದಳು.

ನಾನು ಬೆರಗಾಗಿ ಅವಳನ್ನೇ ನೋಡುತ್ತಿದೆ. ಹುಡುಗನ ತಾಯಿಯ ಮುಖ ಹೂವಿನ ಹಾಗೆ ಅರಳಿತು. "ಬರ್ರೀ ಸರಸ್ವತಿ, ಕೂಡ್ರ ಬರ್ರಿ. ಚಹಾ ತೊಗೊಂಡು ಹೋಗೀರಂತ ಬರ್ರಿ. ಇವರ್‍ಯಾರು ?" ಅಂದಳು ನನ್ನ ಕಡೆಗೆ ನೋಡಿ. "ಇವಳು ನನ್ನ ಗೆಳತಿ ನಾವು ಸಿನಿಮಾಕ್ಕ ಹೋಗಿದ್ವಿ. ಈಗ ಚಹಾ ಬ್ಯಾಡ್ರಿ. ಮತ್ತೊಮ್ಮೆ ಬರತೇನೆ" ಎಂದು ನನ್ನೊಡನೆ ಮತ್ತೆ ನಡೆದಳು.

ಸ್ವಲ್ಪ ದೂರ ಬಂದ ಮೆಲೆ "ಏನೇ ಇದು ನಿನ್ನ ಅಭಿನಯ ! ಅಂಥಾ ಹುಡುಗನ್ನ ಬಾಲಕೃಷ್ಣ, ಮುದ್ದುಕೃಷ್ಣ ಅಂತ ಹೊಗಳಿದೆಯಲ್ಲs. ಹರಿಶ್ಚಂದ್ರನ ಮಗಳು ನೀನು" ಅಂದೆ ಸಿಟ್ಟಿನಿಂದ. "ಅಯ್ಯs ಹುಚ್ಚೀ ಅವರ್‍ಯಾರು ಗೊತ್ತೇನು ? ನಮ್ಮ ಆಫೀಸಿನ ಹೆಡ್ ಗುಮಾಸ್ತೆಯ ಮನೆಯವರು. ನಮ್ಮ ಕಾಗದ ಪತ್ರಗಳೆಲ್ಲಾ ಅವರ ಕೈಯಲ್ಲೇ ಇರತಾವ. ಮುಂದಿನ ತಿಂಗಳು ನನಗ ಇನಕ್ರಿಮೆಂಟು ಸಿಗೂವದ. ಸ್ವಲ್ಪ ನಾಟಕಾ ಮಾಡಿಕೋತ ಇರಬೇಕು" ಅಂದಳು. ಮುಂದಿನ ತಿಂಗಳು ಬಂದು ತನಗೆ ಇನ್‌ಕ್ರಿಮೆಂಟು ಸಿಕ್ಕಿದ್ದಕ್ಕೆ ಪೇಢೆ ತಿನ್ನಿಸಿ ಹೋದಳು. ಆಗ ಅವಳು ಹೇಳಿದ ಮಾತು ನಾನು ಇನ್ನೂ

ಮರೆತಿಲ್ಲ. "ನಿನ್ನ ಆದರ್ಶದ ಮಾತು ನನಗೂ ಗೊತ್ತವ. ಆದರೆ ಈಗಿನ ದಿನದೊಳಗ ಹಾಗೆ ನಡೆಯೋದು ಕಷ್ಟ. ಕಂಡದ್ದನ್ನ ಆಡಿ ನೀನು ಈಗ ಎಷ್ಟು ಜನರ ದ್ವೇಷ ಕಟ್ಟಿಕೊಂಡಿದ್ದೀ ಅನ್ನೂದು ನನಗೂ ತಿಳಿದsದ. ಸರ್ವಜ್ಞನ ವಚನಾ ಕೇಳಿಯೋ ಇಲ್ಲೋ:

*ಕಂಡುದನು ಆಡೆ ಭೂಮಂಡಲವು ಮುನಿಯುವದು*
*ಕೊಂಡಾಡುತಿಚ್ಛೆ ನುಡಿದರೆ ಜಗವೆಲ್ಲ*
*ಮುಂಡಾಡುತಿಹುದು ಸರ್ವಜ್ಞ*

– ಹಾಗೇ ನಮ್ಮ ಮನಸ್ಸು ಇಲ್ಲದಿದ್ದರೂ ಒಮ್ಮೊಮ್ಮೆ ಹೊಗಳಿ ಕೆಲಸ ಮಾಡಿಸಿಕೋಬೇಕಾಗ್ತದ"

ಸರಸ್ವತಿ ಹೇಳಿದ ಮಾತು ನಿಜ. ಆದರೂ ಇಷ್ಟು ದಿನಗಳ ಅನುಭವದಿಂದ ನಾನೊಂದು ಬೇರೆ ದಾರಿಯನ್ನೇ ಕಂಡಿದ್ದೇನೆ. ಅಜ್ಜಿಯ ಹಾಗೆ ಕಂಡದ್ದನ್ನ ಅವರ ಮುಂದೆಯೇ ಆಡಿ ಅವರ ದ್ವೇಷ ಕಟ್ಟಿಕೊಳ್ಳಬಾರದು. ತಮ್ಮ ಕೆಲಸ ಸಾಧಿಸಿಕೊಳ್ಳಬಾರದು. ತಮ್ಮ ಕೆಲಸ ಸಾಧಿಸಿಕೊಳ್ಳೋವಕ್ಕೆ ಸರಸ್ವತಿಯ ಹಾಗೆ ಸುಮ್ಮನೆ ಹೊಗಳಬಾರದು. ತಮಗೆ ತಿಳಿದ ಹಾಗೆ ಮಾಡಿಕೊಳ್ಳಲೊಲ್ಲರು ಎಂದು ಸುಮ್ಮನಿರಬೇಕು. ಒಂದು ವೇಳೆ ಹೇಳಲೇಬೇಕಾದ ಪ್ರಸಂಗ ಬಂದರೆ, ಕಹಿ ಗುಳಿಗೆಗಳಿಗೆ ಸಕ್ಕರೆಯ ಕವಚ ಇರುವ ಹಾಗೆ ಹೇಳುವ ಮಾತನ್ನು ಸವಿ ಸವಿಯಾದ ಮಾತಿನಲ್ಲಿ ಹೇಳಬೇಕು ಎಂದುಕೊಂಡಿದ್ದೇನೆ. ಬಹುಶಃ ಈ ಸುವರ್ಣ ಮಾಧ್ಯಮ ನಿಮಗೂ ಹಿಡಿಸಬಹುದಲ್ಲವೇ ?

# ಅವರ ಬೆನ್ನು ಹತ್ತಿದಾಗ........

ನೆರೆಮನೆಯ ನಿರ್ಮಲಾ, ಪಕ್ಕದ ಮನೆಯ ಪ್ರೇಮಾ, ಮಹಡಿ ಮನೆಯ ಮಾಲತಿ, ಕೆಳಗಿನ ಮನೆಯ ಕಾವೇರಿ ಎಲ್ಲರೂ ಮಧ್ಯಾಹ್ನದ ಹೊತ್ತು ಕೂಡಿದಾಗ ಮಾತು, ಚರ್ಚೆ ಬಹಳ ಸ್ವಾರಸ್ಯವಾಗಿರುತ್ತದೆ. ಬಾಯಿ ಮಾತನಾಡ್ತಿದ್ದರೂ ಒಬ್ಬೊಬ್ಬರ ಕೈಯಲ್ಲಿಯೂ ನಿಟ್ಟಿಂಗ್, ಕಸೂತಿ, ಹೊಲಿಗೆ ಅಂಗಿಗೆ ಗುಂಡಿ ಹಚ್ಚುವದು ಹೀಗೆ ಏನಾದರೂ ಕೆಲಸವಿದ್ದೇ ಇರುತ್ತದೆ. ಅಂಥ ಒಂದು ಮಧ್ಯಾಹ್ನ ಮಹಡಿ ಮನೆಯ ಮಾಲತಿಯ ಅನುಭವಕ್ಕೆ ನಾವೆಲ್ಲ ಕಿವಿಗೊಟ್ಟೆವು.

"ನಾನು ಬಹಳ ದಿನಗಳಿಂದ ಅವರಿಗೆ ಬೆನ್ನು ಹತ್ತಿದ್ದೆ ಇಬ್ಬರೂ ಕೂಡಿ ಸಿನಿಮಾಕ್ಕೆ ಹೋಗೋಣ ಎಂದು. ಯಾವ ಕೆಲಸವಾಗಬೇಕಾದರೂ ಅವರಿಗೆ ಬೆನ್ನು ಹತ್ತದಿದ್ದರೆ ಆಗುವುದೇ ಇಲ್ಲ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದೆ. ಇತಿಹಾಸದ ಪ್ರೊಫೆಸರರಾಗಿ, ಪ್ರಾಚೀನ ಗ್ರಂಥರಾಶಿಗಳಲ್ಲಿ ಮುಳುಗಿ ತಾಮ್ರ ಶಾಸನಗಳನ್ನು ದಿಟ್ಟಿಸುತ್ತ ಕುಳಿತರೆ ಅವರಿಗೆ ತಾವು ಇದ್ದದ್ದು ಇಪ್ಪತ್ತನೆಯ ಶತಮಾನ ಎನ್ನುವುದೂ ಮರೆತುಹೋಗುತ್ತದೆ. ಹಾಗೆ ಅವರು ಮರೆತದ್ದರಿಂದಲೇ ಪಿಎಚ್.ಡಿ. ಪದವಿ ಸಂಪಾದಿಸಿ, ಗಣ್ಯ ಸಂಶೋಧಕರೆಂದು ಹೆಸರಾಗಿದ್ದು, ಉಳಿದವರಿಗೆ ಮಾರ್ಗದರ್ಶನ ಮಾಡಲು ಸಾಧ್ಯವಾಗಿದೆ. ನಾನು ನನ್ನ ಮಕ್ಕಳಾದ ಹರ್ಷ, ಪುಲಿಕೇಶಿ, ಶಾಂತಲಾ, ಪದ್ಮಿನಿ, ಅಶೋಕ ಎಲ್ಲರೂ ಕೂಡಿ ಪ್ರಯತ್ನಿಸಿದಾಗ ಅವರನ್ನು ಆಗಾಗ ಈ ಆಟಂ ಯುಗಕ್ಕೆ ಎಳೆದು ತರುವದು ಸಾಧ್ಯವಾಗುತ್ತದೆ. ಅದಕ್ಕೇ ಅವರಿಂದ ಆಗಬೇಕಾದ ಕೆಲಸಕ್ಕೆ ದಿನಗಳಷ್ಟೆ ಏಕೆ ಒಮ್ಮೊಮ್ಮೆ ತಿಂಗಳುಗಳವರೆಗೆ ಬೆನ್ನು ಹತ್ತಬೇಕು. ಮೊದಲು ವಿನಂತಿ ಮಾಡಿಕೊಳ್ಳಬೇಕು, ಆಮೇಲೆ ಮತ್ತೆ ಮತ್ತೆ ನೆನಪು ಮಾಡಿಕೊಡಬೇಕು. ಮುಂದೆ ಒತ್ತಾಯ ಮಾಡಬೇಕು. ಕೊನೆಯ ಅಸ್ತ್ರವೆಂದರೆ ಕೋಪಿಸಿಕೊಳ್ಳಬೇಕು. ಇವುಗಳನ್ನೆಲ್ಲ ಕ್ರಮವಾಗಿ ಮಾಡಿಯೂ ಸಫಲಳಾಗದಿದ್ದರೆ ಕೊನೆಗೆ ಅಡಿಗೆ ಮನೆಗೆ ಹೋಗುವುದನ್ನೇ ನಿಲ್ಲಿಸಿ ಮೌನ ಯುದ್ಧ ಹೂಡಬೇಕು. ಒಲೆಯಲ್ಲಿ ಬೆಕ್ಕನ್ನು ಮಲಗಿಸಿದರೆ ಮಕ್ಕಳ ಗತಿಯೇನು ಎನ್ನುವಿರಾ ? ಅದಕ್ಕೂ ಉಪಾಯವಿದೆ. ಮಕ್ಕಳನ್ನು ಹಿಂದಿನ ದಿನವೇ ಊರಲ್ಲಿಯೇ ಇರುವ ತಂಗಿಯ

ಮನೆಗೆ ಕಳಿಸಿರುತ್ತೇನೆ. ಆಗ ಅವರು ತಮ್ಮ ಕವತಗಳಿಂದ ಹೊರಬಿದ್ದು, ಮೈಕೊಡವಿ ತಲೆ ಎತ್ತಿ, ಕೈ ಚಾಚಿ ನನ್ನ ಬೆನ್ನು ಸವರಿ 'ಕೋಪ ಬಂತೇ ನನ್ನ ರಾಣಿಗೆ ? ನಿಮ್ಮ ಇಚ್ಛೆ ಏನು ಆಜ್ಞೆ ಮಾಡಬೇಕು' ಎಂದಾಗ ನನ್ನ ಕೋಪ ಮಟಾಮಾಯವಾಗಿರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಒಂದೊಂದು ಸಲ ಅವರನ್ನು ಇಷ್ಟು ರಮಿಸಿ, ಸಮಜಾಯಿಷಿ, ತಿಳಿಹೇಳಿ, ಬುದ್ಧಿ ಕಲಿಸಿ ದಾರಿಗೆ ತರುವ ವೇಳೆಗೆ ನಾನು ಅವರೊಡನೆ ನೋಡಬೇಕೆಂದಿರುವ ಸಿನಿಮಾ ನಮ್ಮೂರು ಬಿಟ್ಟು ಹೋಗಿ ವಾರಗಳು ಕಳೆದಿರುತ್ತವೆ. ಅದಕ್ಕೆ ಈಗ ಮತ್ತೊಂದು ಉಪಾಯ ಹುಡುಕಿದ್ದೇನೆ. ಸಿನಿಮಾ ಬರುತ್ತದೆ ಎಂದು ಬೋರ್ಡು ಹಾಕಿದಾಗಿನಿಂದಲೇ ಇವರಿಗೆ ಬೆನ್ನು ಹತ್ತುತ್ತೇನೆ. ಅಂದರೆ ಅದು ಪ್ರಾರಂಭವಾಗಿ ಒಂದೆರಡು ವಾರ ಕಳೆದು, ನೆರೆಹೊರೆಯವರೆಲ್ಲ ನೋಡಿ ಮುಗಿದ ಮೇಲಾದರೂ ನಮಗೂ ನೋಡುವ ಪುಣ್ಯ ಲಭಿಸುತ್ತದೆ. ಐತಿಹಾಸಿಕ ಸಿನಿಮಾಗಳಿಗೆ ಇವರನ್ನು ಕರೆದುಕೊಂಡು ಹೋದರೆ ಸರಿ, ಕಥಾಲೇಖಕ, ದಿಗ್ದರ್ಶಕ, ನಟ, ನಟಿಯರಿಂದ ಹಿಡಿದು ನನ್ನವರೆಗೆ ಎಲ್ಲರನ್ನೂ ಉದ್ಧಾರ ಮಾಡುತ್ತಾರೆ. ಸ್ಟಂಟ್ ಸಿನಿಮಾಗಳಿಗೆ ಹೋದರೆ ಅದರಲ್ಲಿಯ ಹೀರೋನಿಗಿಂತ ಹೆಚ್ಚು ಸ್ಟಂಟ್ ಮಾಡಿಯಾರು, ಮನೆಗೆ ಬಂದ ಮೇಲೆ ಎಂದು ನನಗೇ ಹೆದರಿಕೆ. ಸಂಗೀತ ಪ್ರಧಾನ, ಪ್ರಣಯಪೂರಿತ, ಮಹಾನ್ ಕೌಟುಂಬಿಕ ಚಿತ್ರಗಳಿಗೆ ಹೋದರೆ ಜೊತೆಗೆ ಏರ್ ರಗ್ಗನ್ನು ತೆಗೆದುಕೊಂಡೇ ಹೋಗಬೇಕು. ಆಕಳಿಸಿ, ತೂಕಡಿಸುವ ಇವರನ್ನು 'The end' ಆದ ಮೇಲೆ ನಾನೇ ಎಬ್ಬಿಸಿ ಕರೆದುಕೊಂಡು ಬರಬೇಕು. ಆದ್ದರಿಂದ ಇವರೊಡನೆ ಸಿನಿಮಾ ನೋಡುವ ಸಾಹಸ ಮಾಡಬೇಕಾದರೆ ಅದು ಆ ವರ್ಷದ ಅತ್ಯುತ್ತಮ ಚಿತ್ರವೆನ್ನಿಸಿಕೊಂಡು ಸ್ವರ್ಣಪದಕ ಪಡೆದಿರಬೇಕು. ಇಂಥ ಸಿನಿಮಾ ಒಂದು ಬರಲಿದೆ ಎಂದು ಹಾಕಿದ್ದ ಬೋರ್ಡು ನೋಡಿಯೇ ನಾನು ಇವರಿಗೆ ಬೆನ್ನುಹತ್ತಿದ್ದೆ. ಕಡೆಗೂ ಒಂದು ಭಾನುವಾರ ಹೋಗೋಣವೆಂದು ಒಪ್ಪಿಕೊಂಡರು. ಅಂದು ಎಲ್ಲಿಲ್ಲದ ಸಂಭ್ರಮ ನನಗೆ. ಮದುವೆ ಮನೆಯಲ್ಲಿ ಓಡಾಡುವವರಂತೆ ಓಡಾಡಿ ಬೇಗ ಬೇಗ ಕೆಲಸ ಮುಗಿಸಿ, ಮಕ್ಕಳನ್ನು ತಂಗಿಯ ಮನೆಗೆ ಕಳುಹಿಸಿ, ಮ್ಯಾಟಿನಿಗೆ ಹೋಗಲು ತಯಾರಾಗುತ್ತಿದ್ದೆ. ನಮ್ಮ ಮನೆಯ ಹತ್ತಿರದ ಬಸ್ ಸ್ಟಾಪಿನಲ್ಲಿ ಸೀಟು ಸಿಗುವ ಭರವಸೆ ಇಲ್ಲದ್ದರಿಂದ ನಾವು ಮೇನ್ ಸ್ಟಾಪಿಗೆ ಹೋಗಬೇಕಾಗಿತ್ತು, ಚೆನ್ನಾಗಿ ಬಾಚಿ ಕೂದಲು ಕಟ್ಟಿ ಅವರ ಪ್ರೀತಿಯ ತಿಳಿ ನೀಲಿಯ ಸೀರೆ ಉಟ್ಟು ತಯಾರಾಗಿ ಅವರ ಕೋಣೆಗೆ ಹೋದೆ. ನನ್ನ ಮುಡಿ ನೋಡಿ 'ಇದಾವ ಮಾದರಿ ಹೆರಳು. ಅಜಂತಾದ್ದೋ ಬೇಲೂರಿನದೋ' ಎಂದು ನಕ್ಕರು. 'ಅದರ ಸಂಶೋಧನೆ ಆಮೇಲೆ ಮಾಡುವಿರಂತೆ. ಈಗ ಬೇಗ ತಯಾರಾಗಿರಿ'

ಎಂದು ಅವರ ಸೂಟು ತೆಗೆದಿಟ್ಟೆ. ಅವರು ಮುಖ ತೊಳೆದು ಬರುವದರಲ್ಲೇ ಯಾರೋ ಬೆಲ್ ಮಾಡಿದರು. ನಾನೇ ಹೋಗಿ ಬಾಗಿಲು ತೆರೆದೆ. ಒಳ್ಳೇ ಲಕ್ಷಣವಾಗಿದ್ದ ಹುಡುಗಿ-ಹುಡುಗಿಯಲ್ಲ-ಯುವತಿಯೇ -ಕೈಯಲ್ಲಿ ಛತ್ರಿ, ಪರ್ಸು ಹಿಡಿದು ನಿಂತಿದ್ದಳು. 'ಪ್ರೊ..... ಅವರ ಮನೆ ಇದೇ ಅಲ್ಲವೇ' ಎಂದಳು. "ಹೌದು" ಅಂದೆ. "ನಾನು ಮಿಸ್..... ಇಂದು ಮಧ್ಯಾಹ್ನ ಭೇಟಿಯಾಗೋಣ ಎಂದು ವಿಳಾಸ ಕೊಟ್ಟಿದ್ದರು. ಮನೆ ನೋಡಿರಲಿಲ್ಲ ಅದಕ್ಕೇ ಕೇಳಿದೆ ಕ್ಷಮಿಸಿ" ಎಂದಳು.

ಅವಳನ್ನು ಒಳಗೆ ಕೂಡಿಸಿ "ನಾನು ಮಿಸೆಸ್..... ಅವರಿಗೆ ಹೇಳ್ತೇನೆ. ಕೂಡ್ರಿ" ಎಂದೆ ಉಪಚಾರಕ್ಕೆ. ಒಳಗೆ ಸಿಟ್ಟು ಉಕ್ಕುತ್ತಿತ್ತು. ಅವರಿಗೆ ಮಾತಿನಿಂದ ಸಂದರ್ಭ ತಿಳಿದಿತ್ತು. ನನ್ನ ಹತ್ತಿರ ಬಂದು "ಸಾರಿ ಮಾಲೂ ಅವಳು ಪಿಎಚ್.ಡಿ. ಮಾಡ್ತಾಳಂತೆ ನನ್ನ ಹತ್ತಿರ. ವಿಷಯದ ಬಗ್ಗೆ ಚರ್ಚೆ ಮಾಡೋಣ ಮನೆಗೆ ಬರ್ರಿ ಎಂದಿದ್ದೆ. ಮರೆತೇಬಿಟ್ಟೆ. ಸೋ ಸಾರಿ; ಪಾಪ, ಬಿಸಿಲಿನಲ್ಲಿ ಬಹಳ ದೂರದಿಂದ ಬಂದಿದ್ದಾಳೆ. ಅವಳನ್ನ ಹೇಗೆ ತಿರುಗಿ ಕಳಿಸೋದು ಇವತ್ತು ಪ್ರೋಗ್ರಾಂ ಕ್ಯಾನ್ಸಲ್ ಮಾಡೋಣವೇ" ಎಂದರು. ನನಗೇನೋ, ಒಳಗೆ ಬಹಳ ನಿರಾಶೆ. ಹೊರಗೆ ಬಂದವಳ ಮುಂದೆ ಸಣ್ಣತನ ತೋರಿಸಬಾರದು ಎನ್ನುವುದಕ್ಕೆ 'ಆಗಲಿ, ಮುಂದಿನ ಭಾನುವಾರ ತಪ್ಪದೇ ಹೋಗೋಣ. ಈಗ ಚಹಾ ಮಾಡಲೇನು?' ಎಂದೆ. "ಆಗಲಿ ಮಾಡು. ಸಿಟ್ಟಾಗಬೇಡ ಹಾ. ಬಹಳ ಜಾಣೆ ನೀನು" ಎಂದು ಕೆನ್ನೆ ತಟ್ಟಿ ಹೊರಗೆ ಹೋಗಿ ವಿದ್ಯಾರ್ಥಿನಿ ಜೊತೆಗೆ ಚರ್ಚೆಯಲ್ಲಿ ತಲ್ಲೀನರಾದರು.

ಮುಂದಿನ ಭಾನುವಾರ ಲೈಟು ಇರಲಿಲ್ಲ, ಅವತ್ತೂ ಸಿನಿಮಾಬಂದ್. ಅದರ ಮುಂದಿನ ಭಾನುವಾರ ಚಿಕ್ಕ ಅಶೋಕನಿಗೆ 'ಫ್ಲೂ'. ಹೀಗಾಗಿ ತನ್ನ ಕಣ್ಣಿಗೆ ಬೀಳದೇ ಆ ಸಿನಿಮಾ ಹೊರಟುಹೋಯಿತು. ಇದರಿಂದ ನನ್ನ ಮನಸ್ಸಿಗೆ ನಿರಾಸೆ. ಆದರೂ ಇಷ್ಟೊತ್ತಿಗೆ ಮತ್ತೊಂದು ಚಿಂತೆ ನನ್ನನ್ನು ಅಂಟಿಕೊಂಡಿತ್ತು. ಮೊದಲು ಪಾಠ ಪ್ರವಚನಗಳಿದ್ದಾಗ ಮಾತ್ರ ಕಾಲೇಜಿಗೆ ಹೋಗಿ ಸಂಜೆ ಲೈಬ್ರರಿಯಲ್ಲಿದ್ದು ಮನೆಗೆ ಬರುತ್ತಿದ್ದ ಇವರು ಈಗ ಕೇವಲ ಊಟ ಮತ್ತು ಚಹಾಕ್ಕೆ ಅಷ್ಟೇ ಮನೆಗೆ ಬರತೊಡಗಿದ್ದರು. ಕಾಲೇಜಿಗೆ ನಮ್ಮ ಮನೆಯಿಂದ ಹೋಗಿ ಬರಲು ಐದು, ಹತ್ತು ನಿಮಿಷ ಸಾಕು. ಮುಂಜಾನೆ ಎದ್ದು ಚಹಾ ಮುಗಿಸಿ, ಸ್ನಾನ ಮಾಡಿ, ಹಾಲು ಕುಡಿದು ಹೊರಗೆ ಹೋದವರು ಮಧ್ಯಾಹ್ನ ಊಟಕ್ಕೆ ಬರುತ್ತಿದ್ದರು. ಊಟ ಮುಗಿಸಿ ಹೋದವರು ಮತ್ತೆ ತಿರುಗಿ ಬರುವದು ರಾತ್ರಿ ಒಂಬತ್ತು ಗಂಟೆಗೆ. ಬಂದವರೇ ಊಟ ಮುಗಿಸಿ ತಮ್ಮ ಕೋಣೆಯ ಬಾಗಿಲು ಹಾಕಿ ಕುಳಿತವರ

ದರ್ಶನ ಮನೆಯ ಮಂದಿಗೆಲ್ಲ ಮರುದಿನವೇ. ಇದೇ ರೀತಿ ಹದಿನೈದು ಇಪ್ಪತ್ತು ದಿನ ಕಳೆದಿತ್ತು. ನನ್ನ ಮನಸ್ಸಿನಲ್ಲಿ ಇವರು ಹೀಗೇಕೆ ಮಾಡುತ್ತಿದ್ದಾರೆ ಎನ್ನುವ ಭಯ, ಚಿಂತೆಗಳು ಹೆಚ್ಚಾಗುತ್ತ ನಡೆದಿದ್ದವು. ಹೀಗೇಕೆಂದು ಎರಡು ಮೂರು ಸಲ ಕೇಳಿದೆ. ಕೆಲಸ ಬಹಳವಿದೆ ಎಂದರು. ಎಂದೂ ಕೆಲಸ ಇದ್ದೇ ಇದೆ. ಈಗ ಮನೆಯ ನೆನಪೂ ಮರೆಯುವಷ್ಟು ಕೆಲಸದ ಆಳಕ್ಕೆ ಇಳಿದರೇ ಇವರು ಎಂದು ಯೋಚಿಸಿದೆ. ಆಗ ಹೊಳೆದ ವಿಚಾರದಿಂದ ನಾನೇ ಪಾತಾಳಕ್ಕೆ ಇಳಿದೆ. ನನ್ನ ತಾಯಿ ಯಾವಾಗಲೂ ಮಾತಿಗೆ ಮಾತು ಬಂದಾಗ ಒಂದು ಗಾದೆ ಹೇಳುತ್ತಿದ್ದರು. 'ಹಾವು ಸಣ್ಣದನಬಾರದು, ಗಂಡಸು ನನ್ನವ ಅನಬಾರದು' ಎಂದು. ಯಾವಾಗಲೂ ಗಂಡನ ಮನಸ್ಸಿನ ಜಾಡು ಹಿಡಿದೇ ನಡೀಬೇಕು. ಏನೋ ಬಿಡು ಎಂದು ತಾತ್ಸಾರ ಮಾಡಬಾರದು. ಯಾವ ಹೊತ್ತಿನಲ್ಲಿ ಅವರ ಮನಸ್ಸು ಎತ್ತ ಕಡೆಗೆ ಹೊರಳುತ್ತದೆ ಅನ್ನುವುದು ಹೇಳಲು ಬರೋದಿಲ್ಲ. ನಮ್ಮ ಎಚ್ಚರಿಕೆಯಲ್ಲಿ ನಾವು ಇರಬೇಕು ಎನ್ನುವದು ತಾಯಿಯ ಅಭಿಪ್ರಾಯ. ನಾನು ಗ್ರ್ಯಾಜುಯೇಟು. ಅವರೊಡನೆ ಹದಿನಾಲ್ಕು ವರ್ಷ ಸಂಸಾರ ಮಾಡಿದ್ದೇನೆ. ಆದ್ದರಿಂದ ಕೂಡಲೇ ತಾಯಿಯ ಅಭಿಪ್ರಾಯಕ್ಕೆ ಮನಸ್ಸು ಒಪ್ಪಲಿಲ್ಲ. ಆದರೆ ತಾಯಿ ಅನುಭವಿಕಳು ಪ್ರಪಂಚದಲ್ಲಿ ನನಗಿಂತ ಹೆಚ್ಚು ಕಾಲ ಸಂಸಾರ ಮಾಡಿ ಕಷ್ಟ ಸುಖ ತಿಳಿದವಳು. ಅಂದ ಮೇಲೆ ಅವಳ ಮಾತನ್ನು ಪೂರ್ತಿ ಬಿಟ್ಟುಬಿಡಲೂ ಮನಸ್ಸು ಬರಲಿಲ್ಲ. ಕಡೆಗೆ ಹೇಗಿದ್ದರೂ ಇತಿಹಾಸ ತಜ್ಞರ ಹೆಂಡತಿ, ಈ ವಿಷಯದ ತಳ, ಬುಡ ಎಲ್ಲಾ ನಾನೇ ಸಂಶೋಧನೆ ಮಾಡಬೇಕು ಎಂದು ನಿರ್ಧಾರ ಮಾಡಿ ಅವರು ಮನೇಲಿ ಇದ್ದಷ್ಟು ಹೊತ್ತು ಅವರ ಮೇಲೇ ಕಣ್ಣಿಟ್ಟೆ. ಯಾವಾಗಲೂ ಹಣೆಗೆ ಯೋಚನೆಯ ಗಂಟು ಹಾಕಿಕೊಂಡು ಗಬ ಗಬ ಎರಡು ತುತ್ತು ಊಟ ಮಾಡಿದವರೇ ಕೋಟು ಹಾಕಿಕೊಂಡು ಹೊರಟೇ ಹೋಗುತ್ತಿದ್ದರು, ರಾತ್ರಿ ಹಾಲು ಕೊಡುವ ನೆಪಮಾಡಿಕೊಂಡು ಅವರ ಕೋಣೆ ಬಾಗಿಲು ತೆಗೆಸಿ ಒಳಗೆ ಹೋದೆ, ನನ್ನ ಬರುವಿಕೆಯಿಂದ ಅವರ ವಿಚಾರ ಧಾರೆ ಕಡಿದಿತ್ತು. ಮುಖದ ಮೇಲೆ ಬೇಸರವಿತ್ತು. "ನನಗೆ ಊಟ ಬಹಳವಾಗಿದೆ, ಹಾಲು ಬೇಡ" ಎಂದರು. "ಆರೋಗ್ಯದ ಮೇಲೆ ಲಕ್ಷ್ಯವಿಲ್ಲದೆ ಕೆಲಸ ಮಾಡುತ್ತೀರಿ. ಹಾಲು ಕುಡಿಲೇಬೇಕು ನೀವು" ಎಂದು ಒತ್ತಾಯ ಮಾಡಿದೆ. "ಇಂದು ತಂದಿದ್ದಕ್ಕೆ ಕುಡೀತೇನೆ. ನಾಳೆಯಿಂದ ಹಾಲು ತರಬೇಡ. ರಾತ್ರಿ ಇನ್ನೂ ನಿದ್ದೆಗೆಟ್ಟು ಕೆಲಸ ಮಾಡಬೇಕು. ಇನ್ನು ನೀನು ಹೋಗು, ನಾನು ಬರೆಯಬೇಕು" ಎಂದರು. ನನಗೆ ಮುಖಕ್ಕೆ ಹೊಡೆದಂತಾಗಿ ಸುಮ್ಮನೆ ಹೊರಗೆ ಬಂದೆ. ಒಂದು ದಿನ ಅವರ ಕಿಸೆಯಲ್ಲಿ ಸಿಕ್ಕ ಮಲ್ಲಿಗೆ ಹೂ, ಅವರ ಹತ್ತಿರ ಸುಳಿದಾಗ ಮೂಸಿದ ಪರಿಮಳ ನನ್ನ ಬುದ್ಧಿಯನ್ನೇ ಕೆಡಿಸಿದವು. ಅವರನ್ನೇ

ಕೇಳಿದೆ. "ಪ್ರೊ. ರಾವ್ ಅವರ ಮಗನ ಹುಟ್ಟು ಹಬ್ಬಕ್ಕೆ ಒತ್ತಾಯ ಮಾಡಿ ಕರೆದುಕೊಂಡು ಹೋಗಿದ್ದರು. ಅಲ್ಲಿಯ ಹೂ, ಗಂಧ ಇವು" ಎಂದರು. ಆಗಿನ ಮಟ್ಟಿಗೆ ಅವರ ಮುಂದೆ 'ಒಳ್ಳೆಯದು' ಎಂದರೂ ನನ್ನ ಮನಸ್ಸು ಇದು ನಿಜವೇ ಎಂದು ಚಿಂತಿಸುತ್ತಿತ್ತು. ನನಗಿಂತಲೂ ಅವರ ವಿದ್ಯಾರ್ಥಿನಿಯೇ ಪ್ರಿಯಳಾದಳೇ ಎಂದು ಸಂಕಟಪಡುತ್ತಿದ್ದೆ. ಊಟ ಸೇರದೆ, ನಿದ್ದೆ ಬಾರದೇ ಸೊರಗಿದೆ.

ಕೊನೆಗೆ ಒಂದು ದಿನ ಮನಸು ಗಟ್ಟಿ ಮಾಡಿಕೊಂಡೆ. ಸಂಜೆ ಆರಾಗಿತ್ತು. ಮಕ್ಕಳೆಲ್ಲರೂ ಶಾಲೆಯಿಂದ ಬಂದು ತಿಂಡಿ ತಿಂದು ಆಡಲು ಹೋಗಿದ್ದರು, ಚಿಕ್ಕ ಅಶೋಕನನ್ನು ಕೆಲಸದ ಹುಡುಗಿಯ ಕೈಯಲ್ಲಿ ಕೊಟ್ಟು ಹೊರಗೆ ತಿರುಗಾಡಿ ಬರಲು ಕಳಿಸಿದೆ. ಇವರು ಆ ದಿನ ಮಧ್ಯಾಹ್ನ ಚಹಾಕ್ಕೂ ಮನೆಗೆ ಬಂದಿದ್ದಿಲ್ಲ. ಮನಸ್ಸು ತಳಮಳಿಸುತ್ತಿತ್ತು. ಶ್ರದ್ಧೆಯಿಂದ ಚೆನ್ನಾಗಿ ಶೃಂಗಾರ ಮಾಡಿಕೊಂಡು ಚಹಾ, ತಿನಿಸು ತೆಗೆದುಕೊಂಡು ಅವರಿಗೆ ಕೊಡುವ ನೆವದಲ್ಲಿ ನಾನೇ ಕಾಲೇಜಿಗೆ ಹೊರಟೆ. ಒಂದೆರಡು ಸಲ ಅವರ ಡಿಪಾರ್ಟ್‌ಮೆಂಟು ನೋಡಿದ್ದೆ. ಈ ಸಲ ಅವರಿಗೆ ತಿಳಿಯದಂತೆ ಹೋಗಿ ಚಕ್ಕಂದವಾಡುತ್ತ ಕುಳಿತ ಅವರಿಬ್ಬರನ್ನೂ ಕಣ್ಣಾರೆ ನಾನೇ ಹಿಡಿಯಬೇಕು ಎಂದುಕೊಂಡು ತಲೆ ತಗ್ಗಿಸಿ ಬಿರಬಿರನೆ ಸಾಗಿದೆ. ದಾರಿಯಲ್ಲಿ ಯಾರು ಭೇಟಿಯಾದರೋ ಯಾರು ನಕ್ಕರೋ ಯಾವದನ್ನೂ ನೋಡಲಿಲ್ಲ. ಸಂಜೆಯಾಗಿದ್ದರಿಂದ ಕಾಲೇಜು ಬಹುಮಟ್ಟಿಗೆ ನಿರ್ಜನವಾಗಿತ್ತು. ಇವರ ಡಿಪಾರ್ಟ್‌ಮೆಂಟೂ ನಿಶ್ಶಬ್ದವಾಗಿತ್ತು. ಇವರಾದರೂ ಇದ್ದಾರೋ ಇಲ್ಲವೋ ಎಂದು ಹೆದರುತ್ತ ತೆರೆದ ಬಾಗಿಲಿನ ಒಳಗೆ ಕಾಲಿಟ್ಟೆ. ಒಂದು ಕಡೆಗೆ ಅವರಷ್ಟೇ ಎತ್ತರದ ಹಳೆಯ ಕಡತಗಳು. ಮತ್ತೊಂದು ಬದಿಗೆ ತಾಮ್ರದ ಶಾಸನಗಳು. ಮೇಜು ತಿಣುಕಾಡುವಷ್ಟು ತಾಡವಾಲೆ ಗ್ರಂಥಗಳು. ಕೆಂಪು, ಕರಿ ಪೆನ್ಸಿಲ್‌ಗಳು, ಬಿಳಿ ಹಾಳೆಗಳು. ಇವುಗಳ ನಡುವೆ ಹಣೆ ಹಿಸುಕಿಕೊಳ್ಳುತ್ತ ಕುಳಿತಿದ್ದರು ಇವರು. ಹೆಜ್ಜೆ ಸಪ್ಪಳ ಕೇಳಿ "ಜಾಫರ್ ಚಹಾ ತಗೊಂಡು ಬಾ. ಯಾಕೋ ತಲೆನೋವು" ಎಂದು ಮುಖ ಕಿವುಚಿದರು. ಕುದಿಯುವ ಜ್ವಾಲಾ ಮುಖಿಯಾಗಿ ಬಂದಿದ್ದ ನಾನು ಕೂಡಲೆ ಮಂಜುಗಡ್ಡೆಯಾದೆ. ಮಬ್ಬುಗತ್ತಲೆಯಲ್ಲಿಯೇ ಅವರ ಮುಂದೆ, ಚಹಾ, ತಿಂಡಿ ಇಟ್ಟು ಸ್ವಿಚ್ ಹಾಕಿ ಬೆಳಕು ಮಾಡಿದೆ. ಕಣ್ಣೆತ್ತಿ ನನ್ನನ್ನು ನೋಡಿ ಬೆಚ್ಚಿದರು. "ನೀನು ಯಾವಾಗ ಬಂದೆ ?"

"ಇದೇ ಈಗ, ಚಹಾ ತೊಗೊಳ್ರಿ ತಲೆನೋವು ಅಂತಿದ್ರಲಾ."

"ಹೂಂ, ಇವುಗಳನ್ನೆಲ್ಲಾ ಓದಿ ಓದಿ ಕೀಸರಿಟ್ಟಿತು. ತಲೆನೋವೂ ಬಂತು, ಇನ್ನೂ ನೋಟು ಮಾಡಿಕೋಬೇಕು, ಯಾವಾಗ ಆಗುವುದೋ ಈ ಕೆಲಸ."

"ನಿಮ್ಮ ಪಿಎಚ್.ಡಿ. ಸ್ಟೂಡೆಂಟು ಸಹಾಯ ಮಾಡುವುದಿಲ್ಲವೇನು ?"

"ಯಾರು ಅವಳೇ ? ಅವಳು ವಿಷಯದ ಬಗ್ಗೆ ಚರ್ಚೆ ಮಾಡಿದ ಮೇಲೆ ಊರಿಗೆ ಹೋದವಳು ಇನ್ನೂ ಬಂದೇ ಇಲ್ಲ."

ಅವರ ನೋವಿನ ಮುಖನೋಡಿ ಕರುಣೆ ಉಕ್ಕಿತು.

"ನೀವು ಹೇಳುತ್ತ ಹೋಗಿ, ನಾನು ಬರೀತೀನಿ" ಎಂದು ಪೆನ್ನು ಕೈಗೆತ್ತಿಕೊಂಡೆ.....

*

ಹೊರಗೆ ನಮ್ಮವರ ದನಿ ಕೇಳಿಸಿತು. ಮಧ್ಯಾಹ್ನ ಚಹಕ್ಕೆ ಬಂದಿದ್ದರು. ಮಹಿಳೆಯರೆಲ್ಲ ನಸುನಗುತ್ತ ಒಬ್ಬೊಬ್ಬರೇ ಜಾರಿದರು.

# ಎವೆ ತೆರೆದಿಕ್ಕುವ ಹೊತ್ತಿನ ಒಳಗೆ

ಭೂಗರ್ಭದಲ್ಲಿ ಆಗ ತಾನೇ ಹುಟ್ಟಿದ ಬೆಂಕಿ - ಹೆಬ್ಬಾವು ತನ್ನ ಕೆಂಬಣ್ಣದ ನಾಲಗೆಗಳನ್ನು ಮುಂಚಾಚಿ 'ಹಸಿವು' 'ದಾಹ' ಎಂದು ಗುಡುಗುಟ್ಟಿತು. ತಾವು ಸಿಕ್ಕಲ್ಲೆಲ್ಲ ತನ್ನ ಮೈಚಾಚಿ ಭೋರ್ಗರೆಯುತ್ತ, ಹರಿಯುತ್ತ ಆಹಾರ ಹುಡುಕಲು ಹೊರಟಿತು. ಓಹ್ ! ಕಂಪು ಮೂಗಿಗೆ ಅಡರುತ್ತಿದೆ. ನಾಲಿಗೆಯಲ್ಲಿ ನೀರೂರಿಸುತ್ತಿದೆ, ಇದೊಂದು 'ಹೊಸ ನಾತ' 'ಹೊಸನಾತ'ವೆಂದು ಆಹಾರ ಸಿಕ್ಕ ಹಿಗ್ಗಿಗೆ ಹೊಡಮರಳಿತು, ಹೆಡೆ ಬಡಿಯಿತು, ಕುಣಿದು ಕುಪ್ಪಳಿಸಿತು ! ! ! ಆಗ –

"ಅಯ್ಯs ಇದೇನು ಕೈಕಾಲು ಥರಾ ಥರಾ ನಡಗಲಿಕ್ಕೆ ಹತ್ಯಾವ, ವಯಸ್ಸಾಯಿತು ನನಗೂ. ಕಣ್ಣು ಮಂಜು ಆಗ್ಯಾವ, ಕಿವಿ ಕೇಳಿಸದಂಗ ಆಗೇದ. ಅಡ್ಯಾಡಿದರ ಕೈಕಾಲು ನಡಗತಾವ. ಆದರ ರಾತ್ರಿ ಹೊತ್ತು ಹಾಸಿಗೆ ಮ್ಯಾಲೆ ಮಲಗಿದಾಗ ಯಾಕ ಹೀಂಗ ನಡಗತಾವ ಕೈಕಾಲು. ಎದ್ದು ಕೂತರ ನುಗಿಸಿದ್ಹಾಂಗ ತಲಿ ಗಿಮಿಗಿಮಿ ಅಂತsದ. ಇದೇನವಾ ಇದು.... ಇದೆಂಥಾ ರೋಗ ಬಡೀತು ನನಗ. ಅರ್ಧಾಂಗಿ ಅಂತಾರಲ್ಲಾ ಅಂಥಾದೇನರೇ ಆತೇನು ನನಗ. ಶಿವಶಿವಾ ನಮ್ಮಪ್ಪಾ ನಮ್ಮ ಸೋದರತ್ತೀಗೆ ಆ ಜಡ್ಡು ಆದಾಗ ನಾ ನೋಡೀನಿ. ಎಂದೂ ಯಾರಿಗೂ ಅಂಥಾ ಪಡಿಪಾಟಲು ಬರಬಾರದು. ನನಗ ಯಾಕ ಹಿಂಗ ಆಯಿತು ? ಇದರಾಗ ಸಾಯ್ತೀನೋ ಏನೋ ಕಣ್ಣು ಮುಚ್ಚೂದರಾಗ ಒಮ್ಮೆ ಕಾಶಿ ತೋರಸಪಾ ಅಂತ ಎಷ್ಟಸಾರೆ ಹೇಳಿದೆ ನಮ್ಮ ಶಿವಣ್ಣಾಗ. ತನ್ನ ಆಫೀಸು, ಕೆಲಸಾ, ಮನೀ, ಹೆಂಡತಿ ಮಕ್ಕಳು ಇದರಾಗ ಕೂಡಲೆ ಇಲ್ಲ ಅವಗ. ವಿಶ್ವೇಶ್ವರಾ ನಾ ನಿನ್ನ ನೋಡದs ಸಾಯತೀನಪ್ಪಾ, ಕೈಲೆ ಕಾಲು ಘಟ್ಟ್ಯಾಗಿ ಹಿಡಿದರೂ ಇನ್ನೂ ಅದರತಾವ. ನಾ ಏನು ಪಾಪಾ ಮಾಡೇನಿ ಅಂಥಾದ್ದು. ಶಿವಶಿವಾss. ಮೊನ್ನೆ ಏನೋ ಮಾತಾಡೂ ಮುಂದೆ ಶೇಕವ್ವ ನನ್ನ ಕೂಡ ವಾದಸ್ಯಾಡಿದಳು. ನನಗ ಭಾಳ ಸಿಟ್ಟು ಬಂತು. ಮುಸುಕು ಹಾಕಿ ಮಲಗೇಬಿಟ್ಟೆ. ಸೊಸಿ ಆದಾಕಿ ಅತ್ತೆಗೆ ತಿರುಗಿ ಮಾತಾಡಬೇಕs ? ಶಿವಣ್ಣಾ ಬಂದು ಯಾಕಂತ ಕೇಳಿದಾ, ಇದs ಹೊತ್ತು ಅಂತ ಒಂದಕ್ಕೆರಡು ಮಾಡಿ ಹೇಳಿಬಿಟ್ಟೆ. ಅಂs ನಮ್ಮ ಅವ್ವಗ ಹೀಂಗ ಅನ್ನತೀಯಾ ಅಂತ ಹೆಂಡತೀನ್ನ ಹೊಡೆದ. ಆಕೀ ಅಳಕೋತ

ಉಪವಾಸ ಮಲಗಿದ್ನು; ಆಕೀ ಮಾತs ಖರೇ ಇತ್ತು. ಆದ್ರೂ ನಾನs ಸುಳ್ಳು ಹೇಳಿ ಹೊಡೆಸಿದಾಂಗ ಆಯಿತು. ಹಾಂ ಮತ್ತೊಂದು ಮಾತು ನೆನಪಾತು. ಮೊನ್ನೆ ಶೇಕವ್ವ ಎಲ್ಲೋ ಹೊರಗ ಹೋದಾಗ ಸಣ್ಣ ಅಶೋಕಗ ಅಂತ ತಂದಿಟ್ಟದ್ದು ನಾಲ್ಕು ಬಿಸ್ಕೀಟು ತಿಂದಿದ್ದೆ, ಬಾಯಿ ಚಪಲ ತೀರಿಸ್ಕೊಂಡೆ. ನಮ್ಮಪ್ಪಾ ಸುಳ್ಳು ಹೇಳಿದೆ, ತುಡುಗು ಮಾಡಿದೆ. ಹೊಟ್ಯಾಗ ಹಾಕಿಕೋ. ನನ್ನ ಕಾಯಪ್ಪಾ ತಂದೇ ನೀನs ಗತಿಯಪಾ" ಪಾರಮ್ಮ ಹಾಸಿಗೆಯನ್ನೇ ಅವಚಿಕೊಂಡು ಮುದ್ದೆಯಾಗಿ ಮಲಗಿದಳು.

"ಯಾರವರು ? ನನ್ನ ಮಂಚಾ ಅಲುಗಾಡಿಸಿದವರು ? ಮುಂಜಾನಿಂದ ಸಂಜೀತನಕಾ ಆಫೀಸಿನ್ಯಾಗ, ಕೂತು ಕೂತು ಸಾಕಾಕಿರತದ. ರಾತ್ರಿ ಕಣ್ತುಂಬ ನಿದ್ದೀ ಮಾಡಬೇಕಾದರ ಇದೇನು ಚ್ಯಾಷ್ಟಿ ನಡೆಸೀರಿ ? ಆಂs ಯಾರೂ ಇಲ್ಲ ? ಆದ್ರೂ ನನ್ನ ಮಂಚ ಒಂದs ಸವನs ಅದರತದ. ಕಿಡಿಕಿ ಬಾಗಿಲಾ ಎಲ್ಲಾ ಅಲುಗಾಡತಾವ. ಏನಾತು ? ಹಾಂ ಲೈಟ ಅರೆ ಅದs ಅಲ್ಲಾ. ಈಗ ಇನ್ನೂ ನಾಲ್ಕೂವರಿಯಾಗೇದ. ಎದ್ದು ನಿಂತರ ಕಾಲು ಥರ ಥರ ಅಂತಾವ, ಭೂಮಿ ಕೆಳಗ ಗಡಗಡ ಅಂತದ. ಭೂಕಂಪ ಆಗ್ತದೇನು ಮತ್ತ ? ಇಲ್ಲೇ ನಮ್ಮ ಮನೀ ಕೆಳಗ ಭೂಮಿ ನಡಗಿದರ ಮನೀ ಹ್ಯಾಂಗ ನಿಂತೀತು. ಕಡಕೊಂಡು ಬಿದ್ದುಬಿಡ್ತದ. ದೇವರs ಇದೇನು ನಿನ್ನ ಆಟಾ. ನಮ್ಮನ್ನ ಮಲಗಿದಲ್ಲೇ ಹೀಂಗs ಕೊಂದುಬಿಡಬೇಕಂತ ನಿನ್ನ ಮನಸೇನು ? ನಾನೇನು ಮಾಡೇನಿ ಅಂಥಾ ಪಾಪ ! ಈಗ ಇನ್ನೂ ನನಗ ನಾಲ್ವತ್ತೈದು ವರ್ಷ, ಇಷ್ಟು ಲಗೂ ಸಾಯಬೇಕೇನು ನಾನು. ಹಾಂಗ ನೋಡಿದರ ನನಗ ನಡೆಯೂದು ನಾಲ್ವತ್ತೆಂಟು ವರುಷ. ಆದರ ರಿಜಿಸ್ಟರ್‌ದೊಳಗ ಮೂರು ವರ್ಷ ಕಡಿಮಿ ಹಚ್ಚಿಸೇನಿ, ಇದೇನು ಅಂಥಾ ದೊಡ್ಡ ತಪ್ಪಲ್ಲಾ. ಎಲ್ಲಾರೂ ಮಾಡೂದs. ಮತ್ತ ಮೊನ್ನೆ ಒಬ್ಬರ ಕೆಲಸಾ ಆಗಬೇಕಾಗಿತ್ತು. ಸ್ವಲ್ಪ ಎಡತಾಕಿಸಿದೆ. 300 ರೂ. ತಂದು ನನ್ನ ಕೈಯಾಗಿಟ್ಟರು. ಮಾತಿಲ್ಲದ ಮರು ದಿನಾನs ಅವರ ಕೆಲಸ ಮಾಡಿಕೊಟ್ಟೆ. ಆ ರೂಪಾಯಿಲೆ ಆಕೀ ಕೊಳ್ಳಾಗ ಒಂದು ಸರಾ ಮಾಡಿಸಿದೆ. ಭಾಳ ದಿವಸದಿಂದ ಸರಾ ಬೇಕೂ ಅಂತ ಕೇಳತಿದ್ದಳು. ಅವಳ ಆಸೆ ಪೂರ್ಣ ಮಾಡಿದೆ. ಇದೂ ನನ್ನ ಕಣ್ಣಾಗ ದೊಡ್ಡ ತಪ್ಪು ಆಗಲಿಕ್ಕಿಲ್ಲಾ. ಇರಲಿ ಏನs ತಪ್ಪು ಮಾಡಿದರೂ ಮರೆತು ಬಿಡು. ನಮ್ಮನ್ನ ಕಾಯೂದು ಬಿಡೂದು ನಿನ್ನ ಕೈಯಾಗs ಅದ," ಶಿವಣ್ಣ ಮಂಚವನ್ನೇ ಗಟ್ಟಿಯಾಗಿ ಹಿಡಿದು 'ಶಿವಶಿವಾ' ಎಂದರು.

"ಈಗ ಏಳ್ತೀನಿ, ತಡೀಯವಾ. ರಾತ್ರಿ ಹೊತ್ತಾಗಿ ಮಲಗೀನಿ. ಪರೀಕ್ಷೆ ಇನ್ನೂ ಎರಡು ತಿಂಗಳಿಗೆ ಅದ. ನನ್ನ ಕಣ್ಣಾಗ ನಿದ್ದಿ ಅದ. ನೀ ಹೋಗು. ನಾನು ಏಳ್ತೀನಿ.

ಆಂss ಯಾರೂ ನನ್ನ ಎಬ್ಬಸೇ ಇಲ್ಲ, ಆದರೂ ನನ್ನ ಹಾಸಿಗಿ, ಕುರ್ಚಿ, ಟೇಬಲ್ಲು, ಪುಸ್ತಕ, ಲ್ಯಾಂಪು ಎಲ್ಲಾ ಅದರತಾವ. ಏನಿದೂ ಯಾsಕ ಹಿಂಗಾಗ್ತದ. ನಿಂತರ ಹೆಜ್ಜಿ ನಡಗತಾವ. ಹಾಂ ಭೂಮೀನೆ ಅದರತದ. ಭೂಕಂಪ ಆಗಲಿಕ್ಕೆ ಹತ್ತೇದ. ನಮ್ಮ ಮಾಸ್ತರರು ದಕ್ಷಿಣ ಭಾರತದೊಳಗ ಭೂಕಂಪ ಆಗೂದು ಕಡಿಮೆ ಅಂದಿದ್ದರು. ನಮ್ಮ ಊರಿಗೆ ಭೂಕಂಪ ಯಾಕಾಯಿತು ? ಈ ರೀತಿ ಒಂದs ಸವನs ಭೂಮಿ ನಡುಗಿದರ ಅಟ್ಟದ ಮ್ಯಾಲಿನ ಮನಿ ಕಡಕೊಂಡು ನಮ್ಮ ಮ್ಯಾಲೆ ಬೀಳತದ ನಮ್ಮದು ಜೀವಂತ ಸಮಾಧಿ ಆಗ್ತದ. ಈಗಿನ್ನೂ ಕಾಲೇಜು ಕಟ್ಟೆ ಹತ್ತೀನಿ. ಬಿ.ಇ. ಆಗಿ ಪರದೇಶಕ್ಕೆ ಹೋಗಿ, ಕಲಿತು ಬಂದು, ದೊಡ್ಡ ಪಗಾರದ ಕೆಲಸ ಹಿಡಿಬೇಕು, ಕಾರಿನೊಳಗ ಅಡ್ಡ್ಯಾಡಬೇಕು ಅನ್ನೂ ನನ್ನ ಆಸೆಗಳಿಗೂ ಇಲ್ಲೇ ಸಮಾಧಿ. ಹೀಂಗ ಯಾಕ ಆಯಿತು ? ನಾ ಏನು ತಪ್ಪು ಮಾಡೇನಿ ? ಹುಂ. ನನ್ನ ಅಂತರಾತ್ಮ ಕೆದಕಿದರ ಏನೇನೋ ಅಪಸ್ವರ ಹೊರಡತಾವ ಅಲ್ಲೆ. ಮೊನ್ನೆ ಆರುತಿಂಗಳ ಪರೀಕ್ಷಾದಾಗ ಸುಪರ್‌ವೈಜರ ಕಣ್ಣು ತಪ್ಪಿಸಿ ಕಾಪಿ ಮಾಡಿ ಪಾಸಾಗೇನಿ. ಕಾಲೇಜದೊಳಗಿನ ಫಂಡಿಗೆ ಅಂತ ಅಪ್ಪನ ಕಡೆಯಿಂದ ರೂಪಾಯಿ ಇಸಿದುಕೊಂಡು ಗೆಳೆಯರ ಜೋಡಿ ಹೋಟೆಲ್ ಸಿನಿಮಾ ಅಂತ ಚೈನೀಮಾಡೇನಿ. ಇಬ್ಬರಿಗೂ ಮೋಸ ಮಾಡೇನಿ. ನಮ್ಮ ಕ್ಲಾಸಿನ ಹುಡುಗಿ ಬಗ್ಗೆ ಬೋರ್ಡ್ ಮ್ಯಾಲೆ ಹೊಲಸು ಶಬ್ದಾ ಬರೆದು ಅವಳ ಅಪಮಾನ ಮಾಡೇನಿ. ದೇವರs ಮನುಷ್ಯಾ ಅಂದ ಮ್ಯಾಲೆ ತಪ್ಪು ಮಾಡೂದs To err is human and to forgive is Divine ಅಂತ ಇಂಗ್ಲಿಷಿನೊಳಗಿನ ಗಾದೆ ಮಾತು ನೆನಪಾಗ್ತದ. ಇದೊಂದು ಸಾರೆ ಕ್ಷಮಿಸಿಬಿಡಪ್ಪಾ ನಮ್ಮನ್ನ ಕಾಯಪಾ" ರಗ್ಗಿನಿಂದ ಬಿಗಿಯಾಗಿ ಮುಸುಕೆಳೆದನು ಸತೀಶ.

"ಹೂಂನ್ರೀ ಏಳ್ತೀನಿ, ಆಗಲೇ ಎಚ್ಚರಾಗಿ ಹೋಯ್ತೇನು ನಿಮಗ. ನಿಮಗಂತೂ ಕೋಳಿ ನಿದ್ದೆ. ಒಮ್ಮೆ ಎಚ್ಚರಾಯಿತು ಅಂದರ ತಿರುಗಿ ನಿದ್ದಿ ಬರೂದಿಲ್ಲ. ಮುಂಜಾನಿಂದ ಸಂಜೀತನಕಾ ದುಡದು ದೇಹ ದಣಿದಿರ್ತದ. ಇನ್ನೂ ಸ್ವಲ್ಪ ಹೊತ್ತು ಮಲಗ್ತೇನಿ. ಯಾಕ ಹಾಸಿಗೆ ಅಲುಗಾಡಿಸ್ತೀರಿ ? ಆಂs ಯಾರೂ ಇಲ್ಲದಿದ್ರೂ ನನ್ನ ಹಿಡಿದು ನುಗಿಸಿದಾಂಗ ಆತಲ್ಲ. ಇದೇನಿದು ? ಎದ್ದು ಕೂತರೂ ಮೈ ನಡಗತದ. ನಿಂತರಂತೂ ಕಾಲು ಅದರತಾವ. ಛೇ ವಾತ ಮೈ ಹೊತ್ತು ನಿಲ್ಲಲಿಕ್ಕೂ ಆಗೂದಿಲ್ಲ. ಕೂತs ಬಿಡ್ತೇನಿ. ತಲೆ ಗಿಮಿ ಗಿಮಿ ತಿರುಗಿದಾಂಗ ಆಗ್ತದ. ಕೋಣೇನೆ ಕುಣೀಲಿಕ್ಕೆ ಹತ್ತೇದ, ಕೂಡ್ರಲಿಕ್ಕೂ ಆಗೂದಿಲ್ಲ. ಹಾಸಿಗಿ ಮ್ಯಾಲೆ ಮಲಗ್ತೀನಿ. ಅಂದರೂ ಅದರೂದು ನಿಂತಿಲ್ಲಾ. ಹಿಂಗ ಯಾಕ ಆಯಿತು? ಯಾರರೆ ಮಾಟಾ ಮಾಡಿಸಿದರೋ ಏನೋ ನಮ್ಮ ಮನೀಗೆ, ನಮ್ಮನ್ನ ಕಂಡರೆ ಆಗದ

ದಾಯಾದಿಗಳು ಇದ್ದಾರಲ್ಲಾ ಊರೊಳಗ. ಅವರದೇ ಕೆಲಸ ಇದು, ಹಿಂಗ ಇಡೀ ಮನೀನ ನಡಗಿದರ ನಮ್ಮ ತಲೀಮ್ಯಾಲೆ ಕಡಕೊಂಡ ಬೀಳೂದು ಖಾತ್ರಿ. ರಾತ್ರಿ ಕಳೆದು ಬೆಳಗು ಆಗೂವರೊಳಗ ಮನೀ ಮಂದಿ ಎಲ್ಲಾ ಖಲಾಸ್. ಅವರಿಗೆ ಅದರಿಂದ ಸಂತೋಷ ಆಗ್ತದ. ಅದೆಂಥಾ ಮಾಂತ್ರಿಕನ್ನ ಹಿಡಿದಿದ್ದಾರಪ್ಪಾ ಅವರು, ಶಿವ ಶಿವಾ ನಮ್ಮಪ್ಪಾ. ಇಂಥಾ ಹೊತ್ತಿನ್ಯಾಗ ನೀನು ಕಾಯಬೇಕಪ್ಪಾ ನಮ್ಮನ್ನ. ಕಾಯೂ ದೇವರ ಮುಂದ ಕಾಡು ದೇವರು ದೊಡ್ಡದಲ್ಲಾ ಅಂತ ಹೇಳತಿದ್ದರು ನಮ್ಮ ಅಪ್ಪ. ನಾವೇನು ಪಾಪ ಮಾಡೇವಿ ಅಂಥಾದ್ದು. ಹುಡುಕಿ ನೋಡಿದರ ಎಲ್ಲೊ ಅಲ್ಲೊಂದು ಇಲ್ಲೊಂದು ತಪ್ಪು ಸಿಕ್ಯಾವು. ಕೆಲಸದಾಕಿಗೆ ದುಡಿಸಿಕೊಂಡೂ ರೊಕ್ಕಾ ಕಡಿಮಿಕೊಟ್ಟೇನಿ. ಓದು ಬರೀಲಿಕ್ಕೆ ಬರಲಾರದ ಹಾಲಿನವಗೂ ಎಷ್ಟೋ ಸಾರೆ ಲೆಕ್ಕ ಆದದ್ದಕ್ಕಿಂತಾ ಕಡಿಮಿ ರೊಕ್ಕಾ ಕೋಟ್ಟೇನಿ. ಅಂದ್ಹಾಂಗ ಪಗಾರದಾಗಿನ ರೂಪಾಯಿ ಉಳಿಸಿ ಉಳಿಸಿ ಇವರಿಗೆ ಗೊತ್ತಾಗದಾಂಗ ಊಡಿಸಿ 50 ರೂ. ಮಾಡಿ ಇಟ್ಟಿದ್ದೆ. ಮೊನ್ನೆ ಬಂದಿದ್ದ ತಮ್ಮನ ಕೈಯ್ಯಾಗ ಆ ರೂಪಾಯಿ ತವರ್ಮನಿಗೆ ಕೊಟ್ಟು, ಕಳಿಸಿಬಿಟ್ಟೆ. ಇವರಿಗೆ ಹೇಳಲಾರದ ತಿಳೀಲಾರದು, ಮಾಡಿದ ತಪ್ಪು ಮರೆತು ಬಿಡಪ್ಪಾ ಈ ಸಂಕಟದಾಗಿಂದ ಇದೊಂದು ಸಾರೆ ಪಾರುಮಾಡು ನಮ್ಮನ್ನ. ಶಿವ ಶಿವಾ ನೀನು ಗತಿಯಪಾ" ಗಟ್ಟಿಯಾಗಿ ಕಣ್ಣು ಮುಚ್ಚಿ ಶಿವನಾಮ ಜಪಿಸಿದಳು ಶೇಕವ್ವ.

ಅವಳ ಮಗ್ಗುಲ ಹಾಸಿಗೆಯಲ್ಲಿದ್ದ ನಾಲ್ಕು ವರುಷದ ಅಶೋಕನ ಮುಖದ ಮೇಲೆ ಮುಗುಳ್ನಗೆ ಅರಳಿತ್ತು. ಯಾವ ಪಾಪವನ್ನೂ ಅರಿಯದ ಆ ಮುಗ್ಧ ಜೀವ ಮುಂಬರುವ ಜೀವನದ ಕನಸು ಕಾಣುತ್ತಿತ್ತೋ ಏನೋ ಪ್ರಶಾಂತವಾದ ಭಾವ ಆ ಮುಖಬಿಂಬದಲ್ಲಿ ಮೂಡಿತ್ತು,

ಹೊರಳುತ್ತಿದ್ದ ಬೆಂಕಿ - ಹೆಬ್ಬಾವು ಮತ್ತೆ ಮೊದಲಿನಂತೆ ಸುರುಳಿ ಸುತ್ತಿಕೊಂಡಿತು. ಭೂಮಿ ಕಂಪಿಸಿತ್ತೇ ? ಹೌದು - ಇಲ್ಲ. ಎಲ್ಲರ ಎದೆ ಮಾತ್ರ ಕಂಪಿಸಿದ್ದವು.

# ಸಭಾಭೂಷಿತೆ

ಹೊರಗೆ ಮಧ್ಯಾಹ್ನದ ಉರಿಬಿಸಿಲು. ಮಕ್ಕಳಿಬ್ಬರೂ ಶಾಲೆಗೆ, ಇವರು ಊರಿಗೆ ಹೋಗಿದ್ದರು. ಮನೆಯಲ್ಲಿ ತಂಪಾಗಿ ಕುಳಿತು ಸುಮ್ಮನೆ ವೇಳೆ ಕಳೆಯಬಾರದೆಂದು ಸ್ವೆಟರ್ ಹೆಣೆಯುತ್ತಾ ನಮ್ಮ ಕೆಲಸದವಳ ಮಗನಿಗೆ ಪಾಠ ಹೇಳುತ್ತಿದ್ದೆ. ಹೈಸ್ಕೂಲಿನಲ್ಲಿ ಓದುವ ಹುಡುಗನವ. ತನಗೇನಾದರೂ ತಿಳಿಯದೇ ಇದ್ದಾಗಲೆಲ್ಲ ಬಂದು ಹೇಳಿಸಿಕೊಳ್ಳುತ್ತಿದ್ದ.

ಮೀರಾ ಮುಖ ಕೆಂಪಗೆ ಮಾಡಿಕೊಂಡು, ಬೆವರೊರಸಿಕೊಳ್ಳುತ್ತ ಒಳಗೆ ಬಂದಳು. "ಏನ ಎಂಥಾ ಬಿಸಿಲಾಗ ನಡಿತಾ ಬಂದಿ ? ಛತ್ರಿ ಆದ್ರೂ ತರಬೇಕಾ ಗಿತ್ತು" ಅಂದೆ.

"ಹೌದ, ಅಂಥಾ ಅರ್ಜೆಂಟ್ ಕೆಲಸ ಇತ್ತು ಅದಕ್ಕೆ ಬಂದೆ. ಮೊನ್ನೆ 'ಸಮಾಜ'ದಾಗ ನನ್ನ ಛತ್ರಿ ಕಳದದ. ಇನ್ನೊಂದು ತೊಗೊಳ್ಳೂದು ಇನ್ನೂ ಆಗಿಲ್ಲ. ಅವ್ವ ಅಂದಳು ಬಿಸಿಲು ತಗ್ಗಿದ ಮ್ಯಾಲೇ ಹೋಗೂ ಅಂತ, ಅದರ ಸಂಜಿಗೆ ಮತ್ತ ಪ್ರೆಸ್ಸಿಗೆ ಹೋಗೂ ಕೆಲಸ ಅದ. ಈಗ ನೀನೂ ನನ್ನ ಕೂಡ ಬರಬೇಕು ಹೊರಗೆ."

"ಏನು ? ನಾನ ?"

"ಹೂಂ ಯಾಕೆ ? ಬಿಸಿಲಿಗೆ ಹೆದರತಿಯೇನು ? ಕರಗಲಿಕ್ಕೆ ನೀ ಏನು ಮೇಣದ ಗೊಂಬಿ ಅಲ್ಲ. ಬಾರಲ್ಲ. ಆರಾಮ ಮನಿಯೊಳಗ ಕೂತು ಏನು ಮಾಡತಿ ?"

"ನಿನ್ನ ಕೆಲಸ ಏನು ಹೇಳಲ್ಲ ಮೊದಲು ಎಲ್ಲಿ ಹೋಗಬೇಕು ?"

"ನಮ್ಮ 'ಸಮಾಜ'ದೊಳಗೆ ನೆಹರೂ ಜಯಂತಿ ಆಚರಿಸುವವರಿದ್ದೇವಿ. ಅದಕ ಅಧ್ಯಕ್ಷರಾಗಲಿಕ್ಕೆ ನಮ್ಮ 'ಬಾಸ್' ಇದ್ದಾರಲ್ಲಾ........ ಅವರ ಹೆಂಡತಿ ವಿಶಾಲಮ್ಮ ಅವರನ್ನ ಕರೀಲಿಕ್ಕೆ ಹೋಗಬೇಕಾಗೇದ. ಬಹಾಳ ದೂರ ಇಲ್ಲ ಅವರ ಮನಿ. ಬೇಕಾದರ ಬಸ್ಸಿಗೆ ಹೋಗೂಣಂತ. ನಾ ಒಬ್ಬಳೇ ಹೋಗಲಾರದಕ ಇಲ್ಲೀ ತನಕಾ ಬಂದಿನೀ. ನೀ ಏನೂ ಕುಂಟುನೆಪಾ ಹೇಳಬೇಡ. ಏಳು ತಯಾರಾಗಿನ್ನು" ಅವಸರ ಮಾಡಿವಳು ಮೀರಾ,

ಮೀರಾ ನನ್ನ ಪ್ರೀತಿಯ ಗೆಳತಿ. ಚಿಕ್ಕಂದಿನಿಂದಲೂ ಇಬ್ಬರೂ ಒಂದೇ ಅಂಗಳದಲ್ಲಿ ಆಡಿ, ಜಗಳವಾಡಿ, ಒಂದೇ ಶಾಲೆಗೆ ಹೋಗಿ, ಒಂದೇ ಕಾಲೇಜಿನಲ್ಲಿ ಓದು ಮುಗಿಸಿದ್ದೆವು. ಆದರೆ ಈಗ ಇಬ್ಬರ ದಾರಿ ಬೇರೆ ಬೇರೆ. ನಾನು ಮದುವೆ ಮಾಡಿಕೊಂಡು ಎರಡು ಮಕ್ಕಳ ತಾಯಿಯಾಗಿ ಒಂದು ಮನೆಯ ಒಡತಿಯಾದವಳು. ಅವಳು ಇನ್ನೂ ಕುಮಾರಿ. ವಾರಕ್ಕೊಂದು, ತಿಂಗಳಿಗೆ ಎರಡರಂತೆ ಈಗ ಹುಟ್ಟುತ್ತಿರುವ ನಯಾ ನಯಾ ಡಿಪಾರ್ಟಮೆಂಟುಗಳಲ್ಲಿನ ಒಂದರಲ್ಲಿ ಕಾರಕೂನಳು. ಉಳಿದ ವೇಳೆಯಲ್ಲಿ 'ಸಮಾಜ'ದ ಕಾರ್ಯದರ್ಶಿನಿ. ಈಗ ಅವಳು ಬಂದದ್ದು ಅದೇ 'ಸಮಾಜ'ದ ಕೆಲಸಕ್ಕೆ. ನನಗೂ ಈ ಸಮಾಜಗಳ ಸೇವೆಗೂ ಸ್ವಲ್ಪ ಹಾಗೆ ಹಾಗೇ. ಯಾವಾಗಲಾದರೂ ಮೀರಾಳ ಒತ್ತಾಯಕ್ಕೆ ಕಟ್ಟುಬಿದ್ದು 'ಸಮಾಜ'ಕ್ಕೆ ಹೋಗುತ್ತಿದ್ದೆ. ಹನುಮನಿಗೆ ಮರುದಿನ ಬರಲು ಹೇಳಿ, ಪತ್ತಲ ಬದಲಿಸಿ ಎರಡು ಗ್ಲಾಸು ಶರಬತ್ತು ಮಾಡಿ ತಂದೆ.

"ಮೀರಾ ನೀನು ಈಗ ಅಧ್ಯಕ್ಷರನ್ನು ಆರಿಸಿದ್ದೀಯಲ್ಲಾ ಆ ವಿಶಾಲಮ್ಮ ಬಹಾಳ ಓದಿದ್ದಾರೇನು ? ನೆಹರೂ ಅವರ ಬಗ್ಗೆ ಚೆನ್ನಾಗಿ ತಿಳಕೊಂಡವರು ಇರಬೇಕು. ಅವರ ತತ್ವದ ಮ್ಯಾಲೆ ಬಹಾಳ ನಿಷ್ಠಾ ಅದ ಏನು ಅವರಿಗೆ ?"

"ಏ ಸುಧಾ, ನೀನು ಈಗ ಪ್ರಶ್ನೆ ಕೇಳಿದಿಯಲ್ಲ. ಅದಕ್ಕೆ ಉತ್ತರ ನನಗೆ ಗೊತ್ತಿಲ್ಲ. ಅವರು ನಮ್ಮ ಬಾಸ್‌ನ ಹೆಂಡತಿ ಅನ್ನೂದಷ್ಟೆ ಗೊತ್ತದ, ಒಂದು ಸಾರೆ ಪಾರ್ಟಿಯೊಳಗ ಅವರನ್ನ ನೋಡಿ ಗುರುತು ಮಾಡಿಕೊಂಡೇನಿ. ಹೆಸರಿಗೆ ತಕ್ಕ ವಿಶಾಲಮ್ಮ - ಆಕಾರದೊಳಗ ಹಾಂ ಮತ್ತ ! ಅವರ ಡ್ರೆಸ್ಸು. ವಾಚು, ಪರ್ಸು, ಠೀವಿ ನೋಡಿದರೆ ಗ್ರಾಜುಯೇಟು ಇರಬೇಕು ಅಂತ ಅನಸ್ತದ. ನಮ್ಮ ಬಾಸ್ ಒಮ್ಮೆ ನನ್ನ ಕರೆಸಿ ಅಂದಿದ್ರು. 'ನನ್ನ ವೈಫಿಗೆ ಸೋಸಿಯಲ್ ವರ್ಕ್ ಅಂದ್ರ ಬಹಾಳ ಆಸಕ್ತಿ, ನಿಮ್ಮ 'ಸಮಾಜ'ಕ್ಕೆ ಒಮ್ಮೆ ಕರೆಸಿಕೊಳ್ರಿ ಅವರನ್ನ' ಅಂತ. ಈಗ ಎಲ್ಲಾರೂ ಬಿಝಿ. ಅದಕ್ಕೆ ಅವರನ್ನೇ ಕೇಳಬೇಕು ಅಂತ ಬಂದೆ."

"ಆಯಿತು. ನೋಡೋಣ ನಡೆ ನಿನ್ನ ಬಾಸಮ್ಮನ್ನ" ಎಂದು ನಗುತ್ತ ಮನೆಗೆ ಬೀಗ ಹಾಕಿದೆ.

ನಮ್ಮ ಪುಣ್ಯಕ್ಕೆ ಬಸ್ಸು ಸಿಕ್ಕಿತು. ಬಾಗಿಲಲ್ಲಿ ಆಳು ಇದ್ದ. ಅವನಿಂದ ಒಳಗೆ ಅಮ್ಮಾವರಿಗೆ ಸುದ್ದಿ ಹೋಯಿತು. "ಈಗ ಬರ್ತಾರ ನೀವು ಕೂಡ್ರಿ" ಎಂದು ನಮ್ಮನ್ನು ಡ್ರಾಯಿಂಗ್ ರೂಮಿನಲ್ಲಿ ಕೂಡ್ರಿಸಿದ. ಹತ್ತು ನಿಮಿಷ ಕಳೆದರೂ ಅಮ್ಮಾ ಅವರ ದರ್ಶನವಿಲ್ಲ. ರೂಮಿನ ಅಲಂಕಾರವನ್ನೆಲ್ಲ ಮತ್ತೆ ಮತ್ತೆ ನೋಡಿದೆವು. ಟೀಪಾಯ್

ಮೇಲಿನ ಪತ್ರಿಕೆಗಳನ್ನ ತಿರುವಿ ಮತ್ತೆ ಜೋಡಿಸಿ ಇಟ್ಟೆವು. ರೇಡಿಯೋ ಟ್ಯೂನ್ ಮಾಡುವ ಮನಸ್ಸಾಯಿತು - ಹಾಯಾಗಿ ವಿವಿಧ ಭಾರತಿ ಕೇಳೋಣ ಅಂತ - ಆದರೆ ಧೈರ್ಯ ಬರಲಿಲ್ಲ. ಕುಳಿತ ಆಸನ ಬದಲಿಸಿದೆವು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಕೊನೆಗೆ ಪ್ರತ್ಯಕ್ಷರಾದರು ವಿಶಾಲಮ್ಮನವರು. ದೊಡ್ಡ ಅಂಚು, ದೊಡ್ಡ ಸೆರಗಿನ ಸಿಲ್ಕು ಸೀರೆ, ಸೆರಗಿಗೆ ಸಣ್ಣ ಬೆಳ್ಳಿಗೆಜ್ಜೆಯ ಕುಸುರಿನ ಗೊಂಡೆ, ಅದಕ್ಕೆ ಒಪ್ಪುವ ರವಿಕೆ, ಮುಖಕ್ಕೆ ಸ್ನೋ, ಪೌಡರ್, ರೂಜ, ಕಾಡಿಗೆ, ಮಿಂಚುವ ಕುಂಕುಮದ ಅಲಂಕಾರ. ಜಡೆ ಹಾಕಿ ಚಕ್ಕರ (ಮೈಸೂರಿನ ಚಕ್ಕರ ಅಲ್ಲ ಮತ್ತೆ!) ಕಟ್ಟಿ, ಮೇಲೊಂದು ತಲೆಗೂ ಎತ್ತರವಾಗುವಂಥ ಹೂವಿನ ಮಾಲೆ ಸುತ್ತಿ ಕಣ್ಣು ಕೋರೈಸುತ್ತಿದ್ದರು. ಓ!! ಇದಕ್ಕೇ ನಮ್ಮ ಅಮೂಲ್ಯ ಇಪ್ಪತ್ತು ನಿಮಿಷಗಳು ಕಳೆದುಹೋದದ್ದು ಎಂದುಕೊಂಡೆ. ಅಮ್ಮಾ ಅವರು ತಮ್ಮ ಆಕಾರಕ್ಕೆ ತಕ್ಕಂತೆ ದೊಡ್ಡ ಸೋಫಾ ಅಲಂಕರಿಸಿದರು. ಆ ಮೇಲೆ ಮೀರಾಳ ಕಡೆ ತಿರುಗಿ "ಏನು ಬಂದದ್ದು ?" ಎಂದರು.

ಅವಳು ನಕ್ಕು ಮೊದಲು ನನ್ನ ಕಡೆಗೆ ಕೈ ಮಾಡಿ "ಇವಳು ನನ್ನ ಗೆಳತಿ ಸುಧಾ, ಇವಳ ಯಜಮಾನರು ಡಾಕ್ಟರರು" ಎಂದಾಗ ವಿಶಾಲಮ್ಮ ಕಷ್ಟಪಟ್ಟು, ಕುತ್ತಿಗೆ ಹೊರಳಿಸಿ ತುಟಿ ಕೊಂಕಿಸಿ, ಓರೆ ನೋಟ ಬೀರಿದರು. ನಾನು "ನಮಸ್ಕಾರ" ಎಂದೆ. ಅದಕ್ಕೆ ಹುಸಿನಕ್ಕು ಹುಬ್ಬೇರಿಸಿ, ತಲೆದೂಗಿದರು. 'ಓಹೋ ! ಇದು ಗಜಠೀವಿ' ಎಂದುಕೊಂಡೆ ಮನಸ್ಸಿನಲ್ಲೇ "ಇವಳೂ ಗ್ರ್ಯಾಜುಯೇಟು" ಎಂದು ಮೀರಾ ಪರಿಚಯ ಮುಗಿಸಿದಾಗ ಮುಖದ ಬಣ್ಣ ಬದಲಾಗಿ ಸ್ವಲ್ಪ ಮುಗುಳ್ನಗೆ ಮೂಡಿತು. ಮೀರಾ ಬಂದಿದ್ದ ಕೆಲಸ ಹೇಳಿದಳು. ವಿಶಾಲಮ್ಮನ ಮುಖ ಮೊರದಗಲ ಅರಳಿತು. 'ನಿಮ್ಮನ್ನ ನೋಡಿ ಭಾಳ ಸಂತೋಷ ಆಯ್ತು. ನಿಮ್ಮ 'ಸಮಾಜ'ಕ್ಕೆ ಸಂತೋಷದಿಂದ ಬರ್ತೀನಿ. ಜಾಣರು ನೀವು, ಮನುಷ್ಯರ ಯೋಗ್ಯತೆ ಚೆನ್ನಾಗಿ ಕಂಡುಹಿಡಿತೀರಿ. ನನಗೂ ಸಮಾಜ ಸೇವೆ ಮಾಡಬೇಕೆನ್ನುವ ಇಚ್ಛೆ ಬಹಳ. ಹೊಲಿಗೆ, ಹೆಣಿಕೆ, ಕಸೂತಿ, ಗೊಂಬೆ ಅಲಂಕಾರ, ಮನೆ ಅಲಂಕಾರ, ತೋಟಗಾರಿಕೆ ಎಲ್ಲಾದರಲ್ಲೂ ನನಗೆ ಆಸಕ್ತಿ. ನಮ್ಮಂಥವರಿಂದ ಸಮಾಜ ಸೇವೆ ಆಗದೆ ಇನ್ನಾರಿಂದ ಆದೀತು ? ನಮ್ಮಿಂದ ಕಲಿತುಕೊಳ್ಳೋದು ಬೇಕಾದಷ್ಟು ಇರ್ತದೆ. ನಾನು ಸಭೆ - ಸಮಾರಂಭಗಳಿಗೆ ಹೋಗುವದೇ ಹಾಗೆ - ಒಂದು : ವೇದಿಕೆಯ ಮೇಲಿರಬೇಕು ; ಅಥವಾ ಮೊದಲನೆಯ ಸಾಲಿನ ಕುರ್ಚಿಯಲ್ಲಿರ ಬೇಕು. ಇಲ್ಲವಾದರೆ ಅಂಥಿಂಥ ಕಡೆಗಳಿಗೆಲ್ಲಾ ಹೋಗುವ ರೂಢಿಯನ್ನೇ ಇಟ್ಟು ಕೊಂಡಿಲ್ಲ ನಾನು."

"ಹೌದು, ನಾನೂ ಎಷ್ಟೋ ಕಡೆಗೆ ಮುಂದುಗಡೆ ಸಾಲಿನಲ್ಲೇ ನೋಡಿದ್ದೀನಿ ನಿಮ್ಮನ್ನ" ಮೀರಾ ತನ್ನದೂ ಒಂದು ಅಕ್ಕೀಕಾಳು ಸೇರಿಸಿದಳು.

"ಹಾಂ, ಮೊನ್ನೆ ಏನಾಯ್ತು ಅಂತೀರಿ. ಆ ಹೊಸದಾಗಿ ಕಟ್ಟಿದ್ದಾರಲ್ಲ 'ಅಖಿಲ ಭಾರತೀಯ ಮಹಿಳಾ ಕ್ಲಬ್ಬು' ಅಂತ. ಅಲ್ಲಿಯ ಸಭೆಗೆ ಹೋದರೆ ಯಾರಿಗೂ ಲಕ್ಷ್ಯವೇ ಇಲ್ಲ. ಮೊದಲನೆ ಸಾಲಿನ ಕುರ್ಚಿಯಲ್ಲಿ ಕೂಡೋದಕ್ಕೆ ಹೋದರೆ ಯಾವಳೋ ವ್ಯವಸ್ಥಾಪಕಿ ಬಂದು 'ಇವನ್ನೆಲ್ಲ ಬೇರೆ ಪ್ರಾಂತದ ಮಹಿಳೆಯರಿಗೆ ಕಾಯ್ದಿರಿಸಿದ್ದೇವೆ. ದಯವಿಟ್ಟು ನೀವು ಹಿಂದಿನ ಸಾಲಿನಲ್ಲಿ ಕೂತ್ಕೊಳ್ಳಿ' ಅನ್ನಬೇಕೆ, ಮುಖಕ್ಕೆ ಹೊಡೆದ ಹಾಗೆ ? ನನಗೂ ಬಹಳ ಸಿಟ್ಟು ಬಂದಿತು. ಇಲ್ಲಿ ನನ್ನ ಯೋಗ್ಯತೆ ಯಾರಿಗೂ ಗೊತ್ತಿಲ್ಲ ಅಂತ ಥಟ್ಟಾಂತ ಸಭೆ ಬಿಟ್ಟು ಮನೆಗೆ ಬಂದ್ಬಿಟ್ಟೆ."

ವಿಶಾಲಮ್ಮನ ಮಾತಿನ ಸರ ಬೆಳೆಯಿತು ಹೀಗೆ. ಮೀರಾ ಮೃದುವಾಗಿ ನನ್ನ ಕಾಲ್ಬೆರಳು ಅದುಮಿದಳು. ನಾನು ನಗು ತಡಿಯೋದಿಕ್ಕೆ ಮುಖ ತಿರುಗಿಸಿ ಗೋಡೆ ಮೇಲಿನ ಫೋಟೋ ನೋಡಿದೆ.

ಕುಳಿತಲ್ಲೇ ಆಳನ್ನು ಕೂಗಿ ಚಹಾ ಮಾಡಲು ಹೇಳಿದಳು. "ನೀವು ಅಲ್ಲಿಂದ ಇಲ್ಲೀವರೆಗೆ ಬಂದಿದೀರಿ. ನಿಮಗೆ ನಿರಾಸೆ ಮಾಡುವುದಿಲ್ಲ ನಾನು. 'ಸಮಾಜ'ಕ್ಕೆ ಬರ್ತೇನೆ, ಅವತ್ತು ಭಾಷಣಾ ಗೀಷಣಾ ಏನರೇ...." ತಡವರಿಸಿದರು ವಿಶಾಲಮ್ಮ.

"ಹೌದು. ಭಾಷಣಕ್ಕೊ ಡಾ|| ಮಾಲಿನಿಬಾಯಿ ಅಂತ ಅದಾರ. ಪಿಎಚ್.ಡಿ. ಆಗ್ಯಾರ, ಅವರನ್ನ ಕರದೇವಿ. ವಿವಿಧ ವಿನೋದಾವಳಿ ಕಾರ್ಯಕ್ರಮಾನೂ ಮಾಡ್ತಾರ ಮಕ್ಕಳು. ನೀವು ಅಧ್ಯಕ್ಷತೆ ವಹಿಸಿ ಮಾಲಿನಿಬಾಯಿ ಭಾಷಣದ ಮ್ಯಾಲೆ ಕನ್‌ಕ್ಲ್ಯೂಡಿಂಗ್ ಸ್ಪೀಚ್ ಮಾಡಿಬಿಡಿರಿ ಆಯಿತು."

ಚಹಾದ ಕಪ್ಪು ಕೈಗೆತ್ತಿಕೊಂಡ ವಿಶಾಲಮ್ಮ ಗಾಬರಿಯಾದರು : "ಆ ಅಂ ಏನಂದ್ರಿ?" ಕೊನೆಗೆ ಮೀರಾ ಆಡಿದ್ದ ಇಂಗ್ಲೀಷ್ ಮಾತು ಅವರನ್ನು ತಳಮಳಕ್ಕೀಡು ಮಾಡಿದ್ದವು.

ಬಿಸ್ಕತ್ತು ಚಹಾದಲ್ಲದ್ದಿ ಬಾಯಿಗಿಡುತ್ತ ಮೀರಾ ಮತ್ತೆ ಅದನ್ನೇ ಕನ್ನಡದಲ್ಲಿ ಹೇಳಿದಳು. ಕೊನೆಗೆ ಭಾಷಣ ಬರೆದು ತಂದು ಓದಲು ಒಪ್ಪಿದರು, ವಿಶಾಲಮ್ಮ ಮೀರಾಳ ಮೇಲೆ ಉಪಕಾರ ಮಾಡುವವರಂತೆ. ನನಗೂ ಸ್ವಲ್ಪ ಕೀಟಲೆ ಮಾಡಬೇಕೆನ್ನಿಸಿತು. "ನಿಮ್ಮ ಪೂರ್ತಿ ಹೆಸರು, ಡಿಗ್ರಿ ಹೇಳಿ ಬಿಡ್ರಿ. ಬಿ.ಎ. ನೋ, ಎಂ.ಎ. ನೋ - ಆಮಂತ್ರಣ ಪತ್ರಿಕೆಯಲ್ಲಿ ಅಚ್ಚು ಮಾಡಬೇಕಲ್ಲ" ಎಂದೆ.

"ಅಯ್ಯೋ ಅದೆಲ್ಲ ಯಾಕೆ ಬಿಡಿರಿ. ನಾನು ಡಿಗ್ರಿಗೆಲ್ಲ ಮಹತ್ವ ಕೊಡುವವಳಲ್ಲ. ಮುಖ್ಯ ಚುರುಕು ಬುದ್ಧಿ, ದಕ್ಷತೆ ಇರಬೇಕು. ಈಗೇನು ಡಿಗ್ರಿ ಕಾಸಿಗೊಂದು ಕೊಸರಿಗೆರಡು ಆಗಿವೆ. ನನ್ನ ಹೆಸರಿನ ಮುಂದೆ ಯಾವ ಡಿಗ್ರೀನೂ ಬೇಡ " ಎಂದರು ಮುಖ ಸಿಂಡರಿಸಿಕೊಂಡು.

ಈಗ ಬಂಡವಾಳ ಹೊರಬಿತ್ತು. 'ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಅನ್ನೋ ಜಟ್ಟಿ ಠೀವಿ ಇದು ಅಂದುಕೊಂಡೆ. ಬಂದ ಕೆಲಸ ಮುಗಿದ ಮೇಲೆ ವಿಶಾಲಮ್ಮನ ಕುಸುರಿ ಕೈಗಾರಿಕೆ ಕೆಲಸಗಳ, ಹೆಣಿಕೆಯ, ಕೆಟ್ಟ ಕೆಟ್ಟ ಸೊಟ್ಟ ಸೊಟ್ಟ ಮುಖದ ಗೊಂಬೆಗಳ ಪ್ರದರ್ಶನವಾಯಿತು. "ಆ ವಾಯರ್ ಚೀಲ ನಾನೇ ಹೆಣೆದಿದ್ದು. ಜಗ್ಗಿ ಜಗ್ಗೀ ಎರಡು ದಿನ ಕೈ ಎತ್ತಲಿಕ್ಕೆ, ಊಟ ಮಾಡಲಿಕ್ಕೆ ಕೂಡ ಬರಲಿಲ್ಲ. ನೋಡ್ರಿ, ಇಷ್ಟೆಲ್ಲ ಕುಸುರಿ ಕೆಲಸ ಮಾಡಿ ಮಾಡಿ ಕಣ್ಣು ನೋವು ಬಂತು, ಈಗ ಬಿಟ್ಟು ಬಿಟ್ಟೆ" ಎಂದು ಉಸಿರುಬಿಟ್ಟರು. ಮನೆಯ ಮುಂದಿನ ತೋಟ ಎಲ್ಲ ಅಡ್ಡಾಡಿ ತೋರಿಸಿದರು. "ಹೂವಿನ ತೋಟ ಅಂದರೆ ನನಗೆ ಬಹಳ ಪ್ರೀತಿ, ಗಿಡಗಳನ್ನೆಲ್ಲ ನನ್ನ ಮಕ್ಕಳ ಹಾಗೇ ನೋಡ್ಕೋತಿನಿ" ಎಂದರು. ನಾವಿಬ್ಬರೂ ಗೋಣುಹಾಕಿದವು. ತೋಟದಲ್ಲಿ ಇಬ್ಬರು ಆಳುಗಳು ಕೆಲಸ ಮಾಡುತ್ತಿದ್ದರು. ಅಮ್ಮಾ ಅವರನ್ನು ನೋಡುತ್ತಲೇ ಎದ್ದು ಕೈ ಮುಗಿದರು. ವಿಶಾಲಮ್ಮ ಅವರಿಗೆ ಕೆಲಸದ ಬಗ್ಗೆ ಬೇರೆ ಬೇರೆ ಹೊಸ ಆಜ್ಞೆಗಳನ್ನಿತ್ತರು. ಅಷ್ಟರಲ್ಲಿ ಅವರಲ್ಲೊಬ್ಬ ಸಣ್ಣ ದನಿಯಿಂದ "ಅವ್ವಾ ಅವರೇ, ಗೇಟಿನ ಹತ್ತಿರ ಇದ್ದ ಸಂಪಿಗೆ ಅಗಿ ದನಾ ತಿಂದದರಿ. ಗಿಡಾ ಸತ್ತು ಹೋತ್ರಿ" ಎಂದ. ಸಿಟ್ಟಿನಿಂದ ಅಮ್ಮಾ ಅವರ ಕಣ್ಣು ಕೆಂಪಗಾಯಿತು. "ದನಾ ಒಳಗೆ ಬಂದು ತಿನ್ನೋವಾಗ ನೀನೇನು ಮಾಡ್ತಿದ್ದೆ - ಕತ್ತೆ - ಗಿತ್ತೆ ಕಾಯ್ತಿದ್ದಿಯೇನು ? ಬೇರೆ ಇನ್ನೊಂದು ಅಗಿ ತಂದು ಅದೇ ಜಾಗದಲ್ಲಿ ನೆಡು. ನಾಳೇನೇ ನೆಡಬೇಕು" ಎಂದರು. 'ಸಂಪಿಗೆ ಅಗಿಗೆ ಮೂರು ರೂಪಾಯಿ ಕೇಳ್ತಾರ್ರಿ" ಎಂದ ನಡಗುತ್ತ, ನಾವಿಬ್ಬರೂ ಮೂಕರಾಗಿ ನಿಂತಿದ್ದೆವು. "ಕೇಳಿದರೆ ನಿನ್ನ ಸಂಬಳದಲ್ಲಿ ಮೂರು ರೂಪಾಯಿ ಕೊಟ್ಟು ತಕ್ಕೊಂಡು ಬಾ. ಆದರೆ ನಾಳೆ ತಂದು ಹಚ್ಚಲೇಬೇಕು ನೀನು " ಎಂದು ಗುಡುಗಿದರು. "ಸೋಮಾರಿಗಳು ಬಹಳ ಸೊಕ್ಕು ಇವರಿಗೆ. ತಮ್ಮ ಕೆಲಸ ತಾವು ಸರಿಯಾಗಿ ಮಾಡಲಿಕ್ಕೂ ಆಗುವುದಿಲ್ಲ ಇವರಿಂದ. ಶಿಕ್ಷೆ ಆದರ ಬುದ್ಧಿ ಬರೋದು ಇವರಿಗೆ" ಎಂದು ಗೇಟಿನವರೆಗೆ ಬಂದು ನಮ್ಮನ್ನು ಬೀಳ್ಕೊಟ್ಟರು.

ದಾರಿಯಲ್ಲಿ ಮೀರಾ ಏನೋ ಯೋಚಿಸುತ್ತಿದ್ದಂತೆ ಕಂಡಿತು. "ಏನು ಮೀರಾ ?" ಎಂದೆ. "ತೋಟದಲ್ಲಿ ಕೆಲಸಾ ಮಾಡ್ತಾ ಇದ್ದವರಿಬ್ಬರೂ ನಮ್ಮ ಆಫೀಸಿನ ಆಳುಗಳು.

ಅವರಿಗೆ ಪಗಾರ ಕೊಡುವುದು ಸರಕಾರ. ಇವರ ಮನೆಯಲ್ಲಿ ಕತ್ತೆ ಹಾಗೆ ದುಡಿತ. ಈ ತಿಂಗಳು ಆ ಬಡಪಾಯಿ ಪಗಾರದಲ್ಲಿ ಮೂರು ರೂಪಾಯಿಗೆ ಖೋತಾ. ಯಾರ ತಪ್ಪಿಗೆ ಯಾರಿಗೋ ಶಿಕ್ಷೆ!" ಎಂದು ನಿಟ್ಟುಸಿರುಬಿಟ್ಟಳು.

ಅವಳ ಬಿಸಿ ಉಸಿರು ನನ್ನ ಮನಸ್ಸಿಗೂ ತಟ್ಟಿತು, ಅದಕ್ಕೆ "ಹೂಂ ಇವರು ನಿಮ್ಮ 'ಸಮಾಜ'ದಲ್ಲಿ ಆಚರಿಸೋ ಜಯಂತಿಗೆ ಅಧ್ಯಕ್ಷರು!" ಎಂದೆ ಕಟುವಾಗಿ.

"ಸುಧಾ, ಗಂಡ, ಮಕ್ಕಳು, ಮನೆಯನ್ನೇ ಜಗತ್ತನ್ನಾಗಿ ಮಾಡಿಕೊಂಡ ನಿನ್ನಂಥವಳಿಗೆ ಹೊರಗೆ ನಡೆದಿರುವ ನಾಟಕ ಏನು ಗೊತ್ತು ? ಪರಿಸ್ಥಿತಿಗೆ ತಕ್ಕ ಹಾಗೆ ಪಾತ್ರವಹಿಸಬೇಕಲ್ಲ ಈ ನಾಟಕದಲ್ಲಿ" ಎಂದಳು ಮೂದಲಿಸುತ್ತ.

"ನನಗೆ ಗೊತ್ತು ಮಾಡಿಕೊಳ್ಳುವ ಮನಸ್ಸೂ ಇಲ್ಲ ಮೀರಾ. 'ಮನೆ ಗೆದ್ದು ಮಾರು ಗೆದೆ' ಎನ್ನುವ ತತ್ವ ನನ್ನದು ಎಂದು ನಿನಗೆ ಗೊತ್ತೇ ಇದೆಯಲ್ಲ. ಇಂದು ನಿನ್ನೊಡನೆ ಬಂದದ್ದೂ ನಿನ್ನ ಒತ್ತಾಯಕ್ಕೆ ಎನ್ನುವುದನ್ನು ಮರೆಯಬೇಡ" ಎಂದೆ.

"ಸಾರಿ, ನಿನ್ನ ಮನಸ್ಸಿಗೆ ನೋವಾಯಿತೋ ಏನೋ. ಹಾಗೆ ಈ ಗೆಳತಿಯ ಮೇಲೆ ಕೃಪೆಯಿಟ್ಟು 'ಜಯಂತಿ' ದಿನವೂ 'ಸಮಾಜ'ಕ್ಕೆ ನಿನ್ನ ಪಾದಧೂಳಿ ಬೀಳಿಸಬೇಕು ಎಂದು ನನ್ನ ನಮ್ರ ವಿನಂತಿ". ಎಂದಳು.

ಅವಳ ನಾಟಕೀಯತೆಗೆ ನಸುನಕ್ಕು ನಾನು ಮನೆಯ ದಾರಿ ಹಿಡಿದೆ.

ಶ್ರೀಮತಿ ವಿಶಾಲಮ್ಮನವರು 'ಸಮಾಜ'ಕ್ಕೆ ಬಂದು ವೇದಿಕೆ ಏರಿದಾಗ ಕೈ ಗಡಿಯಾರ ನೋಡಿದೆ. ಸರಿಯಾಗಿ ನಾಲ್ಕು-ನಲವತ್ತೈದು ನಿಮಿಷಗಳನ್ನೆಲ್ಲಾ ಖರ್ಚು ಮಾಡಿ ವಿಶಾಲಮ್ಮ ಕಣ್ಣು ಕೋರೈಸುವ ಹಾಗೆ ಚೆನ್ನಾಗಿ ಅಲಂಕಾರ ಮಾಡಿಕೊಂಡಿದ್ದರು. ನಿಜವಾಗಿ ಅಂದಿನ ಸಭಾಭೂಷಿತೆಯಾಗಿದ್ದರು.

ಮೀರಾಳ ತಂಗಿ ಸ್ವಾಗತ ಪದ್ಯ ಹೇಳಿದಳು. ವರದಿ ವಾಚನವಾಯಿತು ಬೇರೊಬ್ಬ ಸದಸ್ಯೆಯಿಂದ. ಕಾರ್ಯಕ್ರಮ ಪಟ್ಟಿಯಲ್ಲಿ ವಿವಿಧ ವಿನೋದಾವಳಿ ಇದ್ದುದರಿಂದಲೇ ಸಭಾಮಂದಿರದಲ್ಲಿ ಹೆಂಗಸರ, ಮಕ್ಕಳ ಹಾವಳಿಯೂ ಚೆನ್ನಾಗಿಯೇ ಇತ್ತು. ಮಂದಿರದಲ್ಲಿ ದೀಪದ ವ್ಯವಸ್ಥೆ ಇಲ್ಲದ ಕಾರಣ ಮೊದಲೇ ಹಾಡು, ನಾಟಕ, ನೃತ್ಯಗಳ ಕಾರ್ಯಕ್ರಮ ನಡೆದವು. ಆ ಮೇಲೆ ಮೀರಾ ಅಧ್ಯಕ್ಷಿಣಿಯವರ ಮತ್ತು ಡಾ|| ಮಾಲಿನಿಬಾಯಿ ಅವರ ಪರಿಚಯ ಮಾಡಿಕೊಟ್ಟಳು. ಡಾ|| ಮಾಲಿನಿಬಾಯಿಯವರ ಬಗ್ಗೆ ನಾಲ್ಕು ಮಾತು ಹೇಳಿ ವಿಶಾಲಮ್ಮ ಅವರು 'ಸಮಾಜ'ಕ್ಕೆ ಹೊಸಬರಾಗಿದ್ದುದರಿಂದ ಅವರ ಪರಿಚಯವನ್ನು ವಿವರವಾಗಿ, ಸಭೆಗೆ ಮನದಟ್ಟಾಗುವಂತೆ ತಿಳಿಸಿ ಹೇಳಿದಳು.

ಡಾ|| ಮಾಲಿನಿಬಾಯಿ ಚನ್ನಾಗಿ ಅಭ್ಯಾಸ ಮಾಡಿದವರು. ಹೆಣ್ಣು ಮಕ್ಕಳ ಮತ್ತು ಮಕ್ಕಳ ಬಗ್ಗೆ ನೆಹರೂರ ವಿಚಾರಗಳು ಏನಿದ್ದವು ಎನ್ನುವುದನ್ನು ಸರಳವಾಗಿ ಸುಂದರವಾಗಿ ಹೇಳಿದರು. ಅವರು ಒಂದು ತಾಸಿನವರೆಗೆ ಮಾತನಾಡಿದರೂ ಬಹಳ ಸ್ವಾರಸ್ಯವಾಗಿತ್ತು. ಅವರದಾದ ಮೇಲೆ ಅಧ್ಯಕ್ಷರ ಭಾಷಣ. ವಿಶಾಲಮ್ಮ ಎದ್ದರು. ಬರೆದು ತಂದ ಕಾಗದ ಕೈಯಲ್ಲಿತ್ತು. ಮೊದಲೇ ಒಂದು ಗ್ಲಾಸು ನೀರು ತರಿಸಿ ಕಂಠ ಸರಿಮಾಡಿಕೊಂಡು ಪ್ರಾರಂಭಿಸಿದರು.

"ಮಹನೀಯರೇ ಮತ್ತು ಮಹಿಳೆಯರೇ. (ಅಲ್ಲಿ ಮಹನೀಯರಾರೂ ಇರಲೇ ಇಲ್ಲ. ಇದ್ದದ್ದು ಪಂ| ನೆಹರೂರ ಭಾವಚಿತ್ರವೊಂದೇ)

ದಿ. ನೆಹರೂರವರು ಮಹಾಪುರುಷರು. ಅವರು ನಮ್ಮ ಭಾರತಕ್ಕೆ ಅಷ್ಟೇ ಅಲ್ಲ ಇಡಿ ಜಗತ್ತಿಗೇ ಮಹಾಪುರುಷರಾಗಿದ್ದರು. ಅವರು ದೇಶಕ್ಕಾಗಿಯೂ ದುಡಿದರು ಮಹಿಳೆಯರಿಗಾಗಿಯೂ ದುಡಿದರು. ಅವರು ಏನೇನು ಮಾಡಿದರೆನ್ನುವುದನ್ನು ನೀವೆಲ್ಲ ಇಷ್ಟು ಹೊತ್ತಿನವರೆಗೆ ಕೇಳಿದ್ದೀರಿ. ಅದನ್ನೇ ನಾನು ಮತ್ತೆ ಮತ್ತೆ ಹೇಳಿ ನಿಮಗೆ ಬೇಸರ ಮಾಡುವುದಿಲ್ಲ. ನೀವೆಲ್ಲರೂ ಬಹುಸಂಖ್ಯೆಯಲ್ಲಿ ಇಲ್ಲಿಗೆ ಬಂದು ವಿವಿಧ ವಿನೋದಾವಳಿ ನೋಡಿದಿರಿ. ಭಾಷಣ ಕೇಳಿದಿರಿ. ಇದೇ ರೀತಿಯಾಗಿ ನಾವು ಸಮಾಜ ಸೇವೆ ಮಾಡಬೇಕು. ಇಲ್ಲದಿದ್ದರೆ ನಮ್ಮ ಉದ್ಧಾರ ಸಾಧ್ಯವೇ ಇಲ್ಲ. (ಕೈಯಲ್ಲಿನ ಕಾಗದ ಮೇಜಿನ ಮೇಲೆ ಬಿದ್ದಿತ್ತು) ನಾವು ಮನೆ ಮನೆ ಅಂತ ಮನೆ ಹಿಡಿದು ಕುಳಿತುಕೊಳ್ಳದೇ ಈ ರೀತಿ ಹೊರಗೆ ಬಂದು ಸಮಾಜ ಸೇವೆ ಮಾಡಿ ನಮ್ಮ ಸೋದರಿಯರ ಉದ್ಧಾರ ಮಾಡಲು ಟೊಂಕ ಕಟ್ಟಬೇಕು. ದುಡಿಯಬೇಕು ದುಡಿಯ ಬೇಕು. ದೇಹ ಸಣ್ಣಗಾಗುವವರೆಗೂ ದುಡಿಯಬೇಕು. (ಇವರಿಗೆ ವೇದಿಕೆಯ ಮೇಲೆ ಕುರ್ಚಿಯ ಬದಲು ಸೋಫಾ ಬೇಕಾಗಿತ್ತು.) ಈ ರೀತಿ ದುಡಿಯುತ್ತಿರುವಂಥ ನಮ್ಮಂಥವರನ್ನು ಸತ್ಕರಿಸೋದೂ ನಿಮ್ಮ ಕರ್ತವ್ಯ. ನಾನು ನಿಮಗೆ ಹೊಸಬಳು. ನಿಮ್ಮ ಕಾರ್ಯದರ್ಶಿನಿ ನನ್ನ ಅಲ್ಪ ಪರಿಚಯ ಮಾಡಿಕೊಟ್ಟರು. ನನಗೆ ಹೆಣಿಕೆ, ಹೊಲಿಗೆ, ಕಸೂತಿ, ಗೊಂಬೆ ಮಾಡುವದು, ತೋಟಗಾರಿಕೆ ಎಂದರೆ ಪ್ರೀತಿ. ಸಮಾಜಸೇವೆಯಲ್ಲಿ ಅಂದರೆ ಹೀಗೆ ಸಭೆಗಳಲ್ಲಿ ಭಾಗವಹಿಸೋದರಲ್ಲಿ ನನಗೆ ಬಹಳ ಪ್ರೀತಿ. ಇಂಥಾ ಒಂದು ದೊಡ್ಡ ಸಭೆಯ ಅಧ್ಯಕ್ಷಿಣಿಯಾಗಿ ಕೆಲಸ ನಡೆಸಿಕೊಂಡು ಹೋಗುವದು ಸಣ್ಣ ಮಾತಲ್ಲ. ಇಂಥದನ್ನು ಸಾಧಿಸಬೇಕಾದರೆ ನಾನೂ ಬಹಳ ಶ್ರಮಪಟ್ಟಿದ್ದೀನಿ. ಎಷ್ಟೋ ಕಡೆಗೆ ಇಂಥ ಸ್ಥಾನಗಳಿಗಾಗಿ ಹೋರಾಡಿದ್ದೀನಿ ಕೂಡ.

ಅವನ್ನೆಲ್ಲಾ ವರ್ಣಿಸಿ ನಿಮಗೆ ಹೇಳಲು ಈಗ ಸಾಧ್ಯವಿಲ್ಲ. ಯಾಕೆಂದರೆ ಈಗ ಅಷ್ಟು ವೇಳೆಯಿಲ್ಲ. ಆದರೂ ನಾಲ್ಕು ಮಾತುಗಳಲ್ಲಿ ಹೇಳ್ತೇನೆ........."

ಭಾಷಣ ನಿರರ್ಗಳವಾಗಿ ಶ್ರಾವಣದ ಮಳೆಯಂತೆ ಸುರಿಯಿತು. ಮಂದಿರದ ಅರ್ಧಭಾಗ ಖಾಲಿಯಾಗಿತ್ತು. ಅರ್ಧಕ್ಕೇ ಎದ್ದು ಬರುವದು ಸಭಾಮರ್ಯಾದೆಗೆ ಸಲ್ಲದ್ದು ಎಂದು ಸುಮ್ಮನಿದ್ದೆ.

ರಾಷ್ಟ್ರಗೀತೆ ನಡೆದಾಗಲೂ ವಿಶಾಲಮ್ಮ ಮೀರಳ ಜೊತೆ ಮಾತನಾಡುತ್ತಿದ್ದದ್ದು ನೋಡಿ ನನ್ನ ಬೇಸರ ಹೆಚ್ಚಾಯಿತು. ಮನೆ ಮೆಟ್ಟಲೇರುವಾಗ ಗಡಿಯಾರ ನೋಡಿದೆ, ಆರೂವರೆ! ಎರಡೂವರೆ ತಾಸು ವ್ಯರ್ಥ ಕಳೆದ ತಪ್ಪಿಗೆ ತೋಟದ ಕೆಲಸ ಮಾಡುತ್ತಿದ್ದ ನಮ್ಮವರ ಕೆಲಸಕ್ಕೆ ಸಹಾಯ ಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡೆ.

# ಇದೇ ಕೊನೆಯ ಭಾಷಣ

ಇಂಥದೇ ಇಸ್ವಿ, ವಾರ, ದಿನ, ತಾರೀಖು ಅನ್ನುವದು ಸರಿಯಾಗಿ ನನಗೂ ನೆನಪಿನಲ್ಲಿಲ್ಲ. ಆದರೂ ಈ "ನಾನು" ಅನ್ನುವ ದೇಹಕ್ಕೆ ಸುಮಾರು ೧೪-೧೫ ವರ್ಷಗಳಾದಾಗ "ನನ್ನ" ಅಂದರೆ ಈ ಭಾಷಣಕಾರನ ಜನ್ಮವಾಯಿತು ಎನ್ನುವುದನ್ನು ನಿಮಗೆ ಖಚಿತವಾಗಿ ಹೇಳಬಲ್ಲೆ. ಹೈಸ್ಕೂಲಿನಲ್ಲಿ ಮೆಟ್ರಿಕ್ ಕ್ಲಾಸಿನಲ್ಲಿದ್ದಾಗ "ಹಳ್ಳಿ ಹೆಚ್ಚೋ, ಪಟ್ಟಣ ಹೆಚ್ಚೋ" ಎನ್ನುವ ವಿಷಯದ ಬಗ್ಗೆ ಚರ್ಚಾ ಕೂಟ ನಡೆದಾಗಲೇ ನಾನು ಭಾಷಣಕಾರ, ಒಳ್ಳೆಯ ವಾಗ್ಮಿ - ಎಂದು ಹೆಸರು ಪಡೆದದ್ದು. ನಾನು ನನ್ನ ಭಾಷಣ ಮುಗಿಸಿದಾಗ ಎರಡು ನಿಮಿಷ ಚಪ್ಪಾಳೆಯಿಂದ ಎಲ್ಲರ ಕಿವಿ ಗಡಚಿಕ್ಕಿದವು. ಎಲ್ಲರೊಡನೆ ಕೈ ಕುಲುಕಿ, ಸಲುಗೆಯ ಗೆಳೆಯರಿಂದ ಬೆನ್ನು ಚಪ್ಪರಿಸಿಕೊಂಡು, ಮಾಸ್ತರರಿಂದ ಹೊಗಳಿಕೆಯ ಮಾತು ಕೇಳಿದ ನನ್ನ ಕಾಲು ನೆಲದ ಮೇಲೆ ನಿಂತಿರಲಿಲ್ಲ.

ಅಂದಿನಿಂದ ಇಂದಿನವರೆಗೂ ನನ್ನ ಕಾಲು ನೆಲದ ಮೇಲೆ ಸ್ಥಿರವಾಗಿ ನಿಂತೇ ಇಲ್ಲ. ಹುಟ್ಟಿನಿಂದಲ್ಲದಿದ್ದರೂ ವೃತ್ತಿಯಿಂದ ನಾನೊಬ್ಬ ಜಂಗಮನಾಗಿದ್ದೇನೆ. ಮುಂಜಾನೆ ಇಲ್ಲಿ, ಮಧ್ಯಾಹ್ನ ಅಲ್ಲಿ, ಸಂಜೆ ಮತ್ತೊಂದು ಕಡೆಗೆ. ಈ ದಿನ ಈ ಊರು, ಮರುದಿನ ಮತ್ತೊಂದು ಊರು, ಮೂರನೆಯ ದಿನ ಇನ್ನೊಂದು ಊರು. ಹೀಗೆ ಭಾಷಣ ಮಾಡುತ್ತ ತಿರುಗುತ್ತಿರುವುದೇ ನನ್ನ ಮುಖ್ಯ ಕೆಲಸ. ಉಪಜೀವನಕ್ಕೊಂದು ಕಾಲೇಜಿನಲ್ಲಿ ಕಲಿಸುವ ನೌಕರಿ ಇದೆ. ಮನೆ, ಮನೆಯಲ್ಲಿ ಹೆಂಡತಿ, ನಾಲ್ಕು ಮಕ್ಕಳೂ ಇದ್ದಾರೆ.

ಹೊಸದಾಗಿ ಮದುವೆಯಾದಾಗ ನನ್ನ ಕಾವೇರಿಗೆ ಬಲು ಹೆಮ್ಮೆ, ತನ್ನ ಗಂಡ ಸುಪ್ರಸಿದ್ಧ ಭಾಷಣಕಾರನೆಂದು. ಎಲ್ಲೆಲ್ಲಿಯ ಜನ ಕಾಗದ ಬರೆಯುತ್ತಾರೆ. "ಭಾಷಣಕ್ಕೆ ಬನ್ನಿ" ಎಂದು. ದಿನಾಲೂ ಮುಂಜಾನೆ, ಸಂಜೆ ಕಾಗದಗಳೇ ಕಾಗದಗಳು. ನಮ್ಮ ಶಾಲೆಯ ವಾರ್ಷಿಕೋತ್ಸವ, ನಮ್ಮ ಸಂಘದ ಉದ್ಘಾಟನಾ ಸಮಾರಂಭ, ನಮ್ಮ ಮಂಡಲದ ಮುಕ್ತಾಯ ಸಭೆ, ನಮ್ಮಲ್ಲಿ ಪಾರಿತೋಷಕ ವಿತರಣೆ ಇತ್ಯಾದಿ ಇತ್ಯಾದಿ. ಕರೆದವರನ್ನು ನಿರಾಸೆಗೊಳಿಸಬಾರದೆಂದು ನನ್ನ ಇಚ್ಛೆ. ಕಾವೇರಿಯದೂ ಅದೇ ಸಲಹೆ.

ಸರಿ. ಚಕ್ಕಡಿ, ಜಟಕಾ, ಟಾಂಗಾ, ಕಾರು, ಬಸ್ಸು, ಟ್ರೇನು, ವ್ಯಾನು, ಟ್ರ್ಯಾಕ್ಟರು, ಜೀಪು ಎಲ್ಲವುಗಳಲ್ಲಿ ಪ್ರಯಾಣ ಮಾಡಿ ಊರು-ಕೇರಿ, ಹಳ್ಳಿ-ದಿಳ್ಳಿ, ಪಟ್ಟಣ-ರಾಜಧಾನಿ ಎಲ್ಲವನ್ನೂ ಸುತ್ತಿ ಸುತ್ತಿ ಭಾಷಣ ಮಾಡಿದ್ದಾಯಿತು. ಪೇಪರಿನಲ್ಲಿ ನನ್ನ ಕಾರ್ಯಕ್ರಮಗಳ ವರದಿ ಓದಿ ಓದಿ ನಾವಿಬ್ಬರೂ ಸಂತೋಷಪಟ್ಟದ್ದೂ ಆಯಿತು.

ಈ ಸಂತೋಷ ಬಹಳ ದಿನ ಉಳಿಯಬೇಕಲ್ಲ. ಭಾಷಣ ಮಾಡಿ ಮಾಡಿ ಇದುವರೆಗೆ ಓದಿ ತಿಳಿದುಕೊಂಡಿದ್ದ ಬಂಡವಾಳವೆಲ್ಲ ಖರ್ಚಾಗಿತ್ತು. ಮತ್ತೆ ಮತ್ತೆ ಬಂದರು ಭಾಷಣಕ್ಕೆ ಕರೆಯಲು. ಹಳೆಯ ನೀರು ಕೊಚ್ಚಿಕೊಂಡು ಹೋದ ಮೇಲೆ ಹೊಸ ನೀರು ಬೇಕೇ ಬೇಕಲ್ಲ. ನನಗದೇ ಚಿಂತೆ, ಈ ರೀತಿ ಕರೆ ಬಂದರೆ ಏನು ಮಾತನಾಡಲಿ ಎಂದು. ಇನ್ನೂ ಓದಬೇಕು, ಚಿಂತನ ಮಾಡಬೇಕು ಎಂದರೆ ವೇಳೆಯೇ ಇಲ್ಲ. ಮತ್ತೆ ಮತ್ತೆ ಬಂದ ಕೆಲವರನ್ನು ಮೆತ್ತಗೆ ತಿರುಗಿ ಕಳಿಸಿದೆ. ಮೊಂಡು ಹಿಡಿದವರ ಜೊತೆಗೆ ಭಂಡ ಧೈರ್ಯ ಮಾಡಿ ಹೋಗಿ ಹಳೆಯ ವಿಷಯಗಳಿಗೆ ಹೊಸ ರಾಗಹಾಕಿ ಕೊಟ್ಟು ಹಾಡಿಬಂದೆ. ಅವುಗಳಿಗೇ ಮತ್ತೆ ಮತ್ತೆ ಬೇಡಿಕೆ ಬಂತು. ಊರೂರು ತಿರುಗಿ ಎರಡು ಹೋಲ್ದಾಲು ನಾಲ್ಕು ಚದ್ದರು ಸವೆದು ಸಿಂಪಿಯಾಗಿದ್ದವು. ಮನೆಯಲ್ಲಿ ಎರಡು ಚಿಕ್ಕ ಮಕ್ಕಳೊಡನೆ ಗುದ್ದಾಡುತ್ತಿದ್ದ ಕಾವೇರಿಯ ಗೊಣಗಾಟವೂ ಆಗಾಗ ಕೇಳಿ ಬರುತ್ತಿತ್ತು. ಹಬ್ಬ-ಹುಣ್ಣಿಮೆಗಳಲ್ಲಿಯೂ ಮನೆಯ ಹೋಳಿಗೆ ಪಾಯಸದ ರುಚಿ ನನಗೆ ತಪ್ಪಿ ಹೋಗಿತ್ತು.

ಒಂದು ಸಲ..... ಊರವರು ತಮ್ಮ ನಾಡಹಬ್ಬದ ಭಾಷಣಕ್ಕಾಗಿ ಕರೆಯೋಲೆ ಬರೆದರು. ಉತ್ತರವನ್ನೇ ಕೊಡಲಿಲ್ಲ ನಾನು. ನಾಲ್ಕು ದಿನ ಕಳೆಯುವುದರಲ್ಲಿ ತಾವೇ ಬಂದರು. ಬಂದವರು ನಾಲ್ಕು ಜನ. ಅವರೊಡನೆ ನಾನೊಬ್ಬನೇ ಮಾತನಾಡಿ ಕೊನೆಗೆ ಸೋತೆ. ನಮ್ಮ ಸಂಭಾಷಣೆಯ ಒಂದು ತುಣುಕು ಹೀಗಿತ್ತು :

"ನೀವು ನಮ್ಮಲ್ಲಿಗೆ ನಾಡಹಬ್ಬದ ಭಾಷಣಕ್ಕೆ ಬರಬೇಕು. ನಿಮ್ಮ ಭಾಷಣವನ್ನು ಎರಡನೇ ದಿನ ಇಟ್ಟುಕೊಂಡೇವಿ"

"ನನಗೆ ಈಗ ವೇಳೆ ಇಲ್ರಿ. ಇದೊಂದು ಸಲ ಸಾಧ್ಯವಾಗುವುದಿಲ್ಲ. ಬೇರೆ ಯಾರನ್ನಾದರೂ ಕರೆಯಿರಿ."

"ಹಾಗೆಲ್ಲ ಅನ್ನಬೇಡಿರಿ. ಮನಸ್ಸು ಮಾಡಿ ಇದೊಂದು ಸಲ ಬಂದೇ ಬರಬೇಕು ನೀವು. ನಿಮ್ಮನ್ನು ಕರೆಸಬೇಕು ಅಂತ ನಮ್ಮ ಮನಸ್ಸಿನೊಳಗೆ ಬಹಳ ದಿವಸದಿಂದ

ಇತ್ತು."

"ನಿಜವಾಗಿಯೂ ಈಗ ನನಗೆ ಎಳ್ಳಷ್ಟೂ ಪುರಸೊತ್ತಿಲ್ಲ. ಸಾಧ್ಯವಾದರೆ ಮುಂದಿನ ಸಲ ಬರ್ತೇನೆ.'

"ನಾವು ನಿಮ್ಮನ್ನು ಒಪ್ಪಿಸಿಕೊಂಡೇ ಹೋಗಬೇಕೂಂತ ಬಂದೇವಿ. ನಿಮ್ಮ ಭಾಷಣ ಕೇಳಲಿಕ್ಕೆ ನಮ್ಮಲ್ಲಿಯ ಜನರು ಉತ್ಸುಕರಾಗ್ಯಾರ. ನೀವು ಒಲ್ಲೆ ಅನ್ನಬಾರದು".

"ನನ್ನ ಆರೋಗ್ಯ ಅಷ್ಟೊಂದು ಸರಿ ಇಲ್ರಿ ಈ ಸಲ ಕ್ಷಮಿಸಿ ಬಿಡ್ರಿ."

"ಛೇ ಛೇ ಕ್ಷಮಿಸೋ ಮಾತೇ ಇಲ್ಲ ಇದರಲ್ಲಿ. ನಿಮಗೆ ಏನೂ ತೊಂದರೆಯಾಗದ ಹಾಗೆ ನೋಡಿಕೋತೀವಿ ನಾವು. ನಮ್ಮನ್ನ ನಿರಾಶ ಮಾಡಬ್ಯಾಡ್ರಿ."

ಇದೇ ತರ ಮಾತು ಒಂದು ತಾಸಿನವರೆಗೆ ನಡೆಯಿತು. ಒಪ್ಪದಿದ್ದರೆ ಇವರು ಬಿಡುವವರಲ್ಲ. ಹೇಗೂ ನಾಲ್ಕು ಜನ ಬಂದಿದ್ದಾರೆ. ಹೊತ್ತುಕೊಂಡಾದರೂ ಹೋಗುವವರೇ ಎಂದುಕೊಂಡು ನಿರ್ವಾಹವಿಲ್ಲದೆ ಒಪ್ಪಿದೆ. ಬಂದವರು ನಸುನಗುತ್ತ ಎದ್ದು ಹೋದರು. ನಾನು ಒಳಗೆ ಬಂದೆ. ಕಾವೇರಿಯ ಸುಂದರ ಮುಖ ಸಿಟ್ಟಿನಿಂದ ಕೆಟ್ಟದಾಗಿತ್ತು. "ಏನಾಯಿತು" ಎಂದೆ ಗಾಬರಿಯಾಗಿ. ನಮ್ಮಲ್ಲಿ ನಡೆದ ಮಾತು ಕೇಳಿಸಿಕೊಂಡಿದ್ದಳೋ ಏನೋ "ಹೋಗೋ ಮನಸ್ಸು ಇದ್ದಾಗ ಈ ಬಿಂಕ ಬಡಿವಾರ ಯಾಕೆ ? ಒಂದು ತಾಸಿನವರೆಗೆ ವಾದಿಸಿ ಕಡೆಗೂ ಒಪ್ಪಿಕೊಂಡಿರಲ್ಲ" ಎಂದಳು. ನಾನು ಏನು ತಪ್ಪು ಮಾಡಿದೆನೋ ನನಗೇ ತಿಳಿಯದೆ ಕಣ್ಣು ಕಣ್ಣು ಬಿಟ್ಟೆ.

ವಸಂತೋತ್ಸವ, ಚೈತ್ರೋತ್ಸವ, ಗಣೇಶೋತ್ಸವ, ನಾಡ ಹಬ್ಬಗಳಲ್ಲದೆ, ಸಂಘ-ಸಂಸ್ಥೆಗಳ ಆರಂಭ-ಮುಕ್ತಾಯ ಭಾಷಣಗಳು, ವಾರ್ಷಿಕೋತ್ಸವ, ಪಾಲಕರ ದಿನಾಚರಣೆ, ಮಹಾಪುರುಷರ - ಸಂತರ ಜಯಂತಿ ಪುಣ್ಯ ತಿಥಿ - ಸಪ್ತಾಹಗಳು, ಸಮ್ಮೇಳನಗಳು, ಸಂಕಿರಣಗಳು, ಪ್ರಕಾಶನ ಸಮಾರಂಭಗಳು. ಒಂದಲ್ಲ ಎರಡಲ್ಲ ಇಡಿಯ ವರ್ಷ ದುದ್ದಕ್ಕೂ ದಿನವೂ ಬೆಳಗು ಬಂದಾಗ ಒಂದಿಲ್ಲೊಂದು ಕಾರ್ಯಕ್ರಮ ನನಗೆ ಕಾದಿರುತ್ತಿತ್ತು.

ಕಾವೇರಿಯ ಗೊಣಗಾಟದ ಸ್ಥಳವನ್ನು ಈಗ ಜಗಳಾಟವು ಆಕ್ರಮಿಸಿಕೊಂಡಿದೆ. "ಮನೆಯಲ್ಲಿ ಹೆಂಡತಿ ಮಕ್ಕಳು ಇದಾರೆ ಎನ್ನುವ ಅರಿವು ನಿಮಗಿದೆಯೆ ?" "ಮನೆಯವರೊಡನೆ ಸಿನಿಮಾ, ಪೇಟೆ, ಪಿಕ್‌ನಿಕ್‌ಗಳಿಗೆ ಎಂದಾದರೂ ಹೋಗಿದ್ದಿರಾ ?" "ನೆರೆ ಮನೆಯವರು ನನ್ನ ಕೇಳ್ತಿರ್‍ತಾರೆ ನಿಮ್ಮ ಯಜಮಾನರು ಮನೆಯೊಳಗೆ ಇರೋದೇ ನೋಡಿಲ್ಲ ನಾವು ಎಂದು," ಅವಳಿಂದ ಇಂಥ ಮಾತು ಬಂದಾಗಲೆಲ್ಲಾ

ನಾನು ನಿರುತ್ತರ.

ಹೀಗೆ ಊರೂರು ತಿರುಗುವುದು ನನಗೂ ಬೇಸರದ ಕೆಲಸವೇ? ಹೋದೆಡೆ ಕೆಲವು ಕಡೆಗಳಲ್ಲಿ ಪ್ರವಾಸಕ್ಕೆ ಒಳ್ಳೆಯ ಕಾರು, ಸುಗ್ರಾಸ ಭೋಜನ. ವಿರಾಮಕ್ಕೆ ಸುಸಜ್ಜಿತ ಕೋಣೆ ಎಲ್ಲ ಇದ್ದರೆ, ಕೆಲವು ಸ್ಥಳಗಳಲ್ಲಿ ಕೈಯಿಂದ ಖರ್ಚುಮಾಡಿಕೊಂಡು ಬಸ್ಸಿಗೆ ಕ್ಯೂ ನಿಂತು ಗುದ್ದಾಡಿ, ಒದ್ದಾಡಿಕೊಂಡು ಊರು ತಲುಪಿದಾಗ ಆಮಂತ್ರಿಸಿದವರ ಪತ್ತೆಯೇ ಇರುವುದಿಲ್ಲ. ದಾರಿಯ ಧೂಳಿನ ಸ್ನಾನ, ಪ್ರವಾಸದ ದಣಿವು, ಭಾರ ಎಲ್ಲಾ ಸಹಿಸಿಕೊಂಡು ಕರೆದವರ ಸುಳಿವು ಹಚ್ಚಿದ ಮೇಲೆ ಸಿಗುವುದು ಖಾನಾವಳಿಯ ಖಾರದ ಊಟ, ಸೊಳ್ಳೆಯ ಗಾನದೊಡನೆ ಕೊಳೆತ ಕೋಣೆಯಲ್ಲಿ ವಿಶ್ರಾಂತಿ. ಮತ್ತೆ ಭಾಷಣವಾದ ಮೇಲೆ ನಿದ್ದೆಗೆಟ್ಟು ತೂಕಡಿಸುತ್ತಾ ವಿವಿಧ ಮನರಂಜನೆಯ ಕಾರ್ಯಕ್ರಮ ನೋಡಿ ಮರುದಿನ ನಸುಕಿನಲ್ಲಿ ಚಹದಂಗಡಿಯ ಬೆಲ್ಲದ ಚಾ ಕುಡಿದು ಊರ ಕಡೆಗೆ ಪ್ರಯಾಣ. ಒಲ್ಲೆ, ಒಲ್ಲೆ ಎಂದರೂ ಕೇಳದೇ ವಿನಂತಿಸಿ, ಆಗ್ರಹ ಮಾಡಿ ಒತ್ತಾಯದಿಂದ ಪ್ರೀತಿಪೂರ್ವಕವಾಗಿ ಕರೆದವರ ಆದರಾತಿಥ್ಯ ಇಂಥಾದ್ದೂ ಇರಬಲ್ಲುದು ಎನ್ನುವ ಮಾತು ನನಗೆ ಅನುಭವಿಸಿದ ಮೇಲೆಯೇ ಗೊತ್ತು.

ಆದರೇನು, ಬಿಟ್ಟೆನೆಂದರೆ ಬಿಡದೀ ಮಾಯೆ. ಮಾಯೆಯ ಹಾಗೆ ಈ ಭಾಷಣದ ಕರೆ ನನ್ನನ್ನು ಬಿಟ್ಟೂ, ಬಿಡದೇ ಬೆಂಬತ್ತಿ ಸುತ್ತುತ್ತಾ ಇದೆ. ಈ ಮಾಯೆಯ ಮುಂದೆ ನಾನು ಅಸಹಾಯ.

ನನ್ನ ಇಂಥ ಅಸಹಾಯ ಪರಿಸ್ಥಿತಿಯಲ್ಲಿಯೂ ಕಾವೇರಿಯದೊಂದು ಕರಾರು. ಎಲ್ಲಿಯೇ ಭಾಷಣಕ್ಕೆ ಹೋದರೂ ರಾತ್ರಿ ಮನೆಗೆ ಹಿಂತಿರುಗಲೇ ಬೇಕು ಎಂಬುದು. ಸರಿ, ಅವಳು ಹೇಳುವುದೂ ಒಳ್ಳೆಯದೇ. ಸಾಧ್ಯವಿದ್ದಾಗಲೆಲ್ಲ ಅಂದರೆ ಹೋದ ಊರು ಸಮೀಪದಲ್ಲಿದ್ದರೆ, ತಿರುಗಿ ಬರಲು ಕಾರು ಸಿಕ್ಕರೆ ಖಂಡಿತ ರಾತ್ರಿ ಮನೆಗೇ ಬರುವೆನೆಂದು ಅವಳಿಗೆ ಮಾತು ಕೊಟ್ಟೆ.

ಆ ದಿನ... ಅವರು ಬಂದು ತಮ್ಮ ಪುಸ್ತಕ ಪ್ರಕಾಶನ ಸಮಾರಂಭಕ್ಕೆ ಬರಲೇ ಬೇಕೆಂದರು. ಕಾರು ಇದೆ. ರಾತ್ರಿ ತಿರುಗಿ ಬರುವುದೆಂದು ಮಾತನಾಡಿ ಮನೆಯಲ್ಲಿಯೂ ಹಾಗೆಯೇ ಹೇಳಿ ಹೋದೆ. ಆ ಊರಿನಲ್ಲಿ ನನ್ನ ಭಾಷಣ ಮುಗಿಯುವುದೊಂದೇ ತಡ, ಅದರ ಹತ್ತಿರವೇ ಇದ್ದ ಇನ್ನೊಂದು ಊರ ಶಾಲೆಯ ಹೆಡ್‌ಮಾಸ್ತರರು ಬಂದು ಕುಳಿತರು. ತಮ್ಮ ಶಾಲೆಯ ಬಡ ವಿದ್ಯಾರ್ಥಿಗಳ ಸಹಾಯನಿಧಿಗೆ ಮನರಂಜನೆ ಕಾರ್ಯಕ್ರಮಗಳಿವೆ

ಅದಕ್ಕೆ ನಾನು ಅಧ್ಯಕ್ಷನಾಗಬೇಕೆಂದು ಅವರ ಇಚ್ಛೆಯಂತೆ. ಅವರ ಕೋರಿಕೆಯನ್ನು ತಿರಸ್ಕರಿಸಲಾರದೆ ಆ ರಾತ್ರಿ ಅಲ್ಲಿಯೇ ನಿಂತು ಮರುದಿನದ ಕಾರ್ಯಕ್ರಮ ಮುಗಿಸಿಯೇ ಊರಿಗೆ ಹಿಂತಿರುಗಬೇಕೆಂದುಕೊಂಡೆ. ಮರುದಿನ ಕಾರ್ಯಕ್ರಮ ಮುಗಿದ ಮೇಲೆ ನಮ್ಮ ಊರಿಗೆ ಹೋಗೋಣ ಎಂದು ಕೇಳಿದರೆ ನನ್ನನ್ನು ಕರೆದುಕೊಂಡು ಹೋದ ಕಾರು ಕೆಟ್ಟಿತ್ತು. ರಿಪೇರಿಗೆ ಹೋಗಿದೆ ಬರಲಿ ಎಂದರು.

ಹಾಗೆ ಹೀಗೆ ದಿನಕಳೆದು ನಾನು ಮನೆ ಮುಟ್ಟಿದಾಗ ಮತ್ತೆ ರಾತ್ರಿಯೇ ಆಗಿತ್ತು. ಆದರೆ ಅದು ನಾನು ಮನೆಯಿಂದ ಹೊರಟ ಮೂರನೆಯ ರಾತ್ರಿ. ಬಾಗಿಲು ತೆಗೆದ ಕಾವೇರಿಯ ಮುಖ ನೋಡುವ ಧೈರ್ಯ ನನಗಾಗಲಿಲ್ಲ. ಅವಳ ಬಗಲಲ್ಲಿ ನಮ್ಮ ನಾಲ್ಕನೆಯ ಮಗ ಇದ್ದ. ಅವನಿಗಿನ್ನೂ ಒಂದು ವರುಷ. ನನ್ನನ್ನು ಮಾತನಾಡಿಸದೇ ಅವಳು ಅವನನ್ನು ತೊಡೆಯ ಮೇಲೆ ಹಾಕಿ ಚುಕ್ಕು ಬಡಿಯಹತ್ತಿದಳು. ಹೆದರುತ್ತ ನಾನೇ ಮಾತಾಡಿದೆ. ತಡವಾಗಿ ಬಂದದ್ದರ ಕಾರಣವನ್ನೂ ತಿಳಿಸಿದೆ, ಕೊನೆಗೆ 'ಕಾವೇರಿs, ಹಸಿವಿ ಅಗೇದ" ಅಂದೆ.

ಕಾವೇರಿ ಮೂಕಳಾಗಿ ನನ್ನ ಮೋರೆಯನ್ನೇ ನೋಡಿದಳು. 'ಎರಡು ರಾತ್ರೀನೂ ನಿಮ್ಮ ಸಲುವಾಗಿ ಅಡಿಗೆ ಮಾಡಿ ಊಟ ಮಾಡದೆ ದಾರಿ ಕಾಯ್ದೆ. ನೀವು ಬರಲಿಲ್ಲ. ಇಂದು ಎಲ್ಲಾರಿಗೂ ನೀಡಿ ನಾನು ಊಟಮಾಡಿ ಪಾತ್ರೆ ಖಾಲಿಮಾಡಿ ಇಟ್ಟೇನಿ" ಎಂದಳು.

"ಏನೂ ಉಳಿದಿಲ್ಲೇನು ? ನಿಮ್ಮ ಜೊತೆಗೆ ಊಟಮಾಡಬೇಕು ಅಂತ ನಾನು ಅಲ್ಲೆ ಏನೂ ತಿನ್ನದ  ಬಂದೆ."

ಕಾವೇರಿಯ ಮುಖ ಮೃದುವಾಯಿತು. "ಸ್ವಲ್ಪ ತಡೀರಿ, ಲಗೂನು ಅನ್ನಾ ಮಾಡ್ತೀನಿ. ಹಪ್ಪಳಾ, ಉಪ್ಪಿನ ಕಾಯಿ ಬಾಯಾಡಿಸಿಕೊಂಡು ಊಟಮಾಡುವಿರಂತೆ. ಮ್ಯಾಲೆ ಹಾಲು, ಹಣ್ಣು ತಗೊಳ್ಳಿರಿ" ಎಂದು ಅಡಿಗಿ ಮನೆಗೆ ನಡೆದಳು.

"ಅವನ್ನ ತಾ ಇಲ್ಲೀ, ನಾ ಆಡಿಸ್ತೀನಿ ಅಷ್ಟೊತ್ತನಾ" ಎಂದು ಮಗುವಿನ ಕಡೆಗೆ ಕೈಚಾಚಿದೆ. ಅವನು ನನ್ನ ಕಡೆಗೆ ನೋಡದೆ ಅವ್ವನ ಸೆರಗು ಹಿಡಿದ. "ಬಾರೋ ಇಲ್ಲೆ" ಎಂದು ಬೆನ್ನ ಮೇಲೆ ಕೈ ಆಡಿಸಿದೆ. ಚಿಟ್ಟನೇ ಚೀರಿ ಕಾವೇರಿಯನ್ನು ಇನ್ನೂ ಗಟ್ಟಿಯಾಗಿ ಹಿಡಿದುಕೊಂಡ.

ಥಟ್ಟನೆ ಕಾವೇರಿ "ಇರಲಿ ಬಿಡ್ರೀ ಪಾಪ ಅದಕ್ಕೇನು ಗೊತ್ತು ನೀವು ಅದರ ಅಪ್ಪ ಅನ್ನೋದು" ಎಂದುಬಿಟ್ಟಳು. ತಲೆಯ ಮೇಲೆ ಆಟಂಬಾಂಬ್ ಬಿದ್ದಂತಾಯಿತು. ಭೂಕಂಪದಿಂದ ಕಾಲ ಕೆಳಗಿನ ನೆಲವೇ ಕುಸಿದಂತಾಗಿತ್ತು ನನಗೆ. ಮೈಮೇಲಿನ ಎಚ್ಚರ

ತಪ್ಪಿತು. ಕಾವೇರಿಯ ಅಡಿಗೆ ಮುಗಿದು ತಾಟುಹಾಕಿ ಊಟಕ್ಕೆ ಕರೆದಾಗಲೇ ಈ ಭೂಮಿಗೆ ಬಂದದ್ದು.

ನನ್ನ ಆತ್ಮವೃತ್ತಾಂತವನ್ನೆಲ್ಲಾ ನಿಮ್ಮ ಮುಂದೆ ಈಗ ಚಿಕ್ಕ ಭಾಷಣ ರೂಪದಲ್ಲಿ ತಿಳಿಸಿದ್ದೇನೆ. ನನ್ನ ಹುಟ್ಟಿನ ಬಗ್ಗೆ ಹೇಗೆ ಹೇಳಿದೆನೋ ಹಾಗೆಯೇ ನನ್ನ ಅಂದರೆ ಈ ಭಾಷಣಕಾರನ ಸಾವಿನ ಬಗ್ಗೆಯೂ ನಿಮಗೆ ಈಗ ಹೇಳಲಿದ್ದೇನೆ. ಇದು ನನ್ನ ಬಹಿರಂಗ ಪತ್ರ. ಇನ್ನು ಭಾಷಣಕಾರನೆನ್ನುವ ವೃತ್ತಿಯನ್ನು ನಾನು ಬಿಟ್ಟುಕೊಟ್ಟದ್ದ ರಿಂದ ದಯವಿಟ್ಟು ಯಾರೂ ಎಲ್ಲಿಯೂ ನನ್ನನ್ನು ಭಾಷಣಕ್ಕೆ ಕರೆಯಬಾರದು. ನಾನು ನಿಮ್ಮೆಲ್ಲರ ಪಾಲಿಗೆ ಇನ್ನು ಇಲ್ಲವಾಗಿದ್ದೇನೆ ಎಂದು ತಿಳಿಸಲು ನನಗೆ ಬಹಳ ವಿಷಾದ - ಅಲ್ಲ ಬಹಳ ಸಂತೋಷವೆನಿಸುತ್ತದೆ. ನಿಜವಾಗಿಯೂ ಇದೇ ನನ್ನ ಕೊನೆಯ ಭಾಷಣ.

# ಕರಿಯಪ್ಪನ ಕಥೆ

ಅಂದು ಶ್ರಾವಣ ಸೋಮವಾರ. ಬಸವಣ್ಣನ ಜಾತ್ರೆ. ಪೀಪಿ, ಬಲೂನು, ಚುರುಮುರಿ, ಭಜಿ, ಬತ್ತಾಸು, ತೆಂಗಿನಕಾಯಿ ಜಾತ್ರೆಯಲ್ಲಿ ನನ್ನದೇನು ಕೆಲಸ. ಹೆಂಡತಿ ಮಕ್ಕಳು ನೆರೆಮನೆಯವರೊಡನೆ ಹೋದರು. ಅವಳಿಗೆ ಹೇಳಿದೆ: 'ನನ್ನ ಪರವಾಗಿ ನೀನೇ ದೇವರಿಗೆ ನಮಸ್ಕಾರ ಹಾಕಿ ಬಾ, ಹೇಗೂ ತೆಂಗಿನಕಾಯಿಗೆ ನಾನೇ ರೊಕ್ಕ ಕೊಟ್ಟಿದ್ದೇನೆ' ನಿಶ್ಶಬ್ದವಾಗಿ ಎದ್ದೋಡಿಸುವಂತಿದ್ದ ಮನೆಯಲ್ಲಿ ಕುಳಿತಿರಲಾರದೆ ನಾನೂ ಪೇಟೆಗೆ ಹೋಗಿ ಕಂಗಾಲ್ ಕರಿಯಪ್ಪನ 'ರೇನಬೋ ರೆಡಿಮೇಡ್' ಅಂಗಡಿಯಲ್ಲಿ ಕುಳಿತೆ. ಜನರೆಲ್ಲ ಜಾತ್ರೆಯಲ್ಲಿದ್ದುದರಿಂದಲೋ ಏನೋ ಪೇಟೆಯಲ್ಲಿಯೂ ಲವಲವಿಕೆ ಇರಲಿಲ್ಲ. ಹರಟೆ ಹೊಡೆಯುತ್ತಾ ಹೊತ್ತು ಕಳೆದದ್ದೇ ಗೊತ್ತಾಗುತ್ತಿರಲಿಲ್ಲ.

'ನೋಡ್ರಿ ರಾಯರ, ಹೆಣ್ಣುಮಕ್ಕಳ ಗುಣಾ ತಿಳಕೊಳ್ಳೂದು ಬಹಾಳ ಕಠಿಣ ಏನ್ರಪಾ. ಅವರು ಮಾತಾಡೂದೊಂದು, ಮನಸ್ಸಿನ್ಯಾಗ ಇರೂದೊಂದು' ಎನ್ನುತ್ತಿದ್ದ 'ಮಹಿಳಾಗುಣ ವಿದ್ಯಾಪ್ರವೀಣ' ಕರಿಯಪ್ಪನ ಆವೇಶಭರಿತ ಮಾತು ತಟಕ್ಕನೆ ನಿಂತಾಗ ನಾನು ಕಣ್ಣು ತೆರೆದೆ. ಯಾರೋ ವಯಸ್ಸಾದ ಹೆಣ್ಣುಮಗಳು ಸಣ್ಣ ಮಕ್ಕಳ ಜೊತೆಗೆ ಅಂಗಡಿ ಪ್ರವೇಶಿಸಿದ್ದಳು.

'ಬರ್ರಿ, ಬರ್ರಿ ಅವ್ವಾ ಅವರ ಏನು ಬೇಕಾಗಿತ್ತು ತಮಗ ?' ವ್ಯಾಪಾರಿ ಕರಿಯಪ್ಪ ಕಾರ್ಯನಿರತನಾದ.

ಟೋಪ ಸೆರಗಿನ ಹಳೆಯ ಇಳಕಲ್ಲ ಸೀರೆಯನ್ನು ಉಟ್ಟ. ವಯಸ್ಸಾದ ವಿಧವೆ ಈಗ 'ಅವ್ವಾ ಅವರು' ಆಗಿದ್ದಳು. ತನಗೇನು ಬೇಕು ಹೇಳುವ ಮೊದಲು ಅವಳು ಕರಿಯಪ್ಪನನ್ನೇ ದಿಟ್ಟಿಸಿ ನೋಡಿದಳು. ಕಣ್ಣಲ್ಲಿ ಪರಿಚಯದ ಮಿಂಚು ಹೊಳೆದಾಗ ಹಸನ್ಮುಖಿಯಾಗಿ ಅಂದಳು.

'ನಿಮನ್ನ ಎಲ್ಲೋ ನೋಡಿದಾಂಗ ಅನಸತೈತಿ. ನೆಪ್ಪಿಗೆ ಬರವೊಲ್ಲದು.'

'ನನ್ನ ನೋಡೀನಿ ಅಂದ್ರೇನು ಅವ್ವಾ ಅವರ, ನಾನು ಇಲ್ಲೆ ಅಂಗಡಿ ತೆಗೆದು 10-12 ವರ್ಷಾದವು. ಇಲ್ಲೇ ನೋಡಿರಬೇಕು' ಕರಿಯಪ್ಪನೂ ಈಗ ಅವಳ ಮುಖವನ್ನೇ

ದಿಟ್ಟಿಸಿದ.

'ಇಲ್ಲಿ ಅಲ್ಲ ಬಿಡರಿ. ನಮ್ಮೂರಾಗ ನೋಡೇನಿ. ನೀವು ದೊಡ್ಡೂರಾಗ ಇದ್ದಿರೇನು? ನಮ್ಮೂರಾಗ ಮಾಸ್ತರಿಕಿ ಮಾಡತಿದ್ರಿ. ಹಾಂ ನೆಪ್ಪಾತು. ಕರಿಯಪ್ಪ ಮಾಸ್ತರ ಅಲ್ಲ ನೀವು?'

ಕರಿಯಪ್ಪನಿಗೂ ಶಾಕ್ ಹೊಡೆಯಿತು.

'ಹೌದ್ರೀ ಕರಿಯಪ್ಪ ನಾನು. ನೀ ನೀ.... ನೀವು ಪುಟ್ಟಕ್ಕವರ ಅಲ್ಲ ? ಹೌದು. ನನಗೂ ನೆನಪಾತು. ಭಾಳ ವರ್ಷಾತು ನೋಡ್ರಿ. ಅದಕ್ಕ ಲಗೂ ಗುರುತು ಹತ್ತಲಿಲ್ಲ. ಭಾಳ ಸೊರಗೀರಿ ನೀವು' ಎಂದವನೇ ಧ್ವನಿ ಇಳಿಸಿದ, 'ಇಟ್ಟಪ್ಪ ಗೌಡರು ಯಾವಾಗ ಹೋದರು ? ನನಗೆ ಗೊತ್ತ ಇಲ್ಲಲ್ಲ' ಹಲ್ಲಿಯಂತೆ ಲೊಚಗುಟ್ಟಿದ.

'ಅವರು ಹೋಗಿ ನಾಕು ವರ್ಷಾದ್ವು. ಏನು ಮಾಡೂದು ನಮ್ಮ ನಸೀಬ ಖೊಟ್ಟಿ. ಹೊಟ್ಯಾಗ ಗಂಟು ಆಗಿತ್ತಂತ. ಕೋರ್ಟು - ಕಚೇರಿ ಎಡತಾಕೂದರಾಗ ಲಗೂ ಹೇಳಲೇ ಇಲ್ಲ. ಅಲಕ್ಷ್ಯ ಮಾಡಿದರು. ನ್ಯಾಯಾ ಗೆದ್ದರು. ನಮ್ಮ ಹೊಲಾ ನಮಗ ಬಂದ್ವು. ಅದರ ಸುಖಾ ಪಡೂ ಕಾಲದಾಗ ಅವರs ಹೋಗಿಬಿಟ್ಟರು. ನಮ್ಮ ಸಲುವಾಗಿ ಸಣ್ಣಾದರು. ನಮ್ಮನ್ನ ನಡುನೀರಾಗ ಕೈಬಿಟ್ಟರು' ಪುಟ್ಟಕ್ಕನ ಅದುಮಿಟ್ಟ ದುಃಖ ಕಟ್ಟೆ ಒಡೆದು ಹೊರಗೆ ಬರುವುದರಲ್ಲಿತ್ತು; ಕಷ್ಟದಿಂದ ತಡೆದುಕೊಂಡು 'ಶಾರಕ್ಕ ಆರಾಮ ಅದಾಳೇನ್ರಿ. ಹುಡುಗರು ದೊಡ್ಡವರ ಆಗಿರಬೇಕು. ನಮ್ಮ ಇರಪ್ಪಣ್ಣ ಇಲ್ಲೇ ಹಿಟ್ಟಿನ ಗಿರಣಿ ಸುರೂ ಮಾಡ್ಯಾನ. ಎರಡು ವರ್ಷಾದ್ವು, ನಾವು ದೊಡ್ಡೂರು ಬಿಟ್ಟು ಇಲ್ಲೇ ಬಂದು ಅದೀವಿ' ಎಂದಳು.

ಕರಿಯಪ್ಪ ತನ್ನ ಮನೆಯವಳ ಮಕ್ಕಳ ವಿಚಾರವನ್ನೆಲ್ಲ ಹೇಳಿದಾಗ 'ಆಯ್ತು, ದೇವರು ಛೊಲೋ ಮಾಡಿದ ನಿಮಗ. ಎಲ್ಲಾದರೂ ಸುಕದಿಂದ ಇರ್ರಿ. ಶಾರಕ್ಕಗ ಹೇಳ್ರಿ' ಎಂದು ಕಳಕಳಿಯಿಂದ ಹೇಳಿ ಮೊಮ್ಮಕ್ಕಳಿಗೆ ಬೇಕಾಗಿದ್ದ ಅಂಗಿ - ಚೊಣ್ಣ ಖರೀದಿ ಮಾಡಿಕೊಂಡು ಹೋದಳು ಪುಟ್ಟಕ್ಕ. ಅವಳು ಹೋದ ಮೇಲೆಯೂ ಕರಿಯಪ್ಪ ಕನಸಿನ ಲೋಕದಲ್ಲಿದ್ದವನ ಹಾಗೆ ಸುಮ್ಮನೇ ಕುಳಿತಿದ್ದ. ಒಮ್ಮೆಲೇ ನಿಟ್ಟುಸಿರುಬಿಟ್ಟ.

'ರಾಯರ, ನಾನು ಈ ಲೋಕದಾಗ ಇದ್ದೀನೋ ಇಲ್ಲೋ ಅನಸತದ. ನನ್ನ ಕಣ್ಣ ನಂಬದ್ಹಾಂಗ ಆಗೇದ ನನಗ. ಜಾದೂ ಆದ್ಹಾಂಗ ಕಾಣತದ ಈ ಹೆಣ್ಣು ಮಗಳಿಗೆ. ಮೊದಲು ನೋಡಿದಾಗ ಪುಟ್ಟಕ್ಕನ ಮೈ ಏನು, ಮಾತು ಏನು, ಜಗಳ ಏನು ಒಂದೂ ಇನ್ನೂ ಮರೆತಿಲ್ಲ ನಾನು. ಹಾಂ ಆಗಳೆ ನಾ ಹೇಳತಿದ್ದೆನಲ್ಲ....'

'ಛೇ.... ಛೇ ಏನು ಮಾತಾಡ್ತೀ ಕರಿಯಪ್ಪಾ, ಸೂರ್ಯ ಪಶ್ಚಿಮಕ್ಕ ಮೂಡ್ಯಾನ

ಅಂದಂಗಾತು ನಿನ್ನ ಮಾತು. ಎಂಥಾ ಹೆಣ್ಣುಮಗಳು. ಏನು ದೊಡ್ಡಿಸ್ತನದ ಕಳಾ ಅದ ಮಾರೀಮ್ಯಾಲೆ, ಕಳಕಳಿ ಪ್ರೀತಿಯಿಂದ ಮಾತಾಡೂದೇನು. ನೀ ನೋಡಿದರ ಏನೇನೋ ಅಂತೀಯೆಪಾ. ನಂಬಲಿಕ್ಕೆ ಆಗೂದಿಲ್ಲ.'

'ರಾಯರ ನಿಮಗ ಹೊತ್ತು ಇದ್ದರ, ಕೂಡ್ರಿ ಸ್ವಲ್ಪ ಹೊತ್ತು. ನನ್ನ ಗತ ಇತಿಹಾಸ ಕೇಳಿದಿರಿ ಅಂದರ ನಿಮಗೂ ನಂಬಿಗಿ ಆದೀತು' ಎಂದ ಕರಿಯಪ್ಪ, ಕಥೆ ಹೇಳತೊಡಗಿದ.

'ರಾಯರ ನಾನು ಅಂಗಡೀ ಸುರು ಮಾಡೂದಕ್ಕಿಂತ ಮೊದಲು ಕನ್ನಡ ಸಾಲೀ ಮಾಸ್ತರ ಆಗಿದ್ದೆ. ಅದು ನಿಮಗ ಗೊತ್ತಿಲ್ಲ. ನನ್ನ ಸರ್ವೀಸ ಸುರು ಆಗಿ 7-8 ವರ್ಷ ಆಗಿರಬೇಕು. ಮೂರು ಮಂದಿ ಮಕ್ಕಳು. ಆಗ ಈ ಇಟ್ಟಪ್ಪ ಗೌಡರ ಪುಟ್ಟಕ್ಕನ ದೊಡ್ಡೂರಿಗೆ ನನಗೆ ವರ್ಗಾತು. ಅದು ಹೆಸರಿಗೇ ದೊಡ್ಡೂರು. ಇರಲಿಕ್ಕೆ ಒಂದು ಸಣ್ಣ ಮನೀ ಸಿಗಬೇಕಾದರ ಸಾಕಾಗಿ ಹೋಯಿತು. ಎರಡು-ಮೂರು ಫರ್ಲಾಂಗ್ ದೂರದ ಬಾವಿಯಿಂದ ದಿನಾಲು ನೀರು ಜಗ್ಗಿ, ಹೊತ್ತು ತರಬೇಕು. ಮುಂಜಾನೆ 7 ಗಂಟೇಕ ಸಾಲಿಗೆ ಹೋಗೂದಕಿಂತ ಮೊದಲು ನೀರು ಜಗ್ಗಿ ತಂದು ಇಟ್ಟು ಹೋಗತಿದ್ದೆ. ಯಾಕಂದ್ರ ಇಕೀಗೆ ಸಣ್ಣ ಕೂಸು ಕೈ ಬಿಡತಿದ್ದಿಲ್ಲ. ಮೂರೂ ಸಣ್ಣ ಹುಡುಗರು ಕಾಡೂವು ಬೇಡೂವು. ಮ್ಯಾಲೆ ಪರ ಊರು. ಹೆಚ್ಚು ಜನರ ಗುರುತಿಲ್ಲ. ಆದರೂ ಉಳಿದ ಕೆಲಸ ಎಲ್ಲಾ ತಾನ ಒದ್ದಾಡಿಕೋತ ಮಾಡಿಕೊಂಡು ಹೋಗತಿದ್ದಳು. ಬಹಾಳ ಮಂದೀ ಇನ್ನೂ ತನಕಾ ತಿಳಿಕೊಂಡಾರ ಏನ್ರೆಪಾ ಹಳ್ಳಿ ಊರಾಗಿನ ಕನ್ನಡ ಸಾಲಿ ಮಾಸ್ತರರು ಅಂದರ ರಾಜಾ ಇದ್ದಾಂಗ ಇರತಾರ ಅಂತ. ಶಿಷ್ಯ-ಶಿಷ್ಯೆಯರು ಅವರ ಮನೀ ಕೆಲಸಾ ಮಾಡಿಕೊಡತಾರ. ಹಿತ್ತಲದಾಗ, ಹೊಲದಾಗ ಬೆಳೆದದ್ದು ಕಾಯಿಪಲ್ಲೆ, ಕಾಳು ಕಡಿ ತಂದುಕೊಡತಾರ. ಹಾಲು ಮೊಸರು, ಬೆಣ್ಣೆ ಯಥೇಚ್ಛ ಸಿಗತದ ಅಂತ. ಆದರ ಅದೆಲ್ಲಾ ಹಿಂದಿನ ಕಾಲದ ಮಾತಾಯಿತು, ಹಿರೇರ ಕಾಲಕ್ಕೆ ಹಿಂಗ ನಡೀತಿತ್ತು ಅಂತ ನಾವು ಕೇಳೀವಿ. ಆದರ ಆ ಸುಖಾ ಏನು ಅನುಭೋಗಿಸಿಲ್ಲಾ. ಸರಕಾರದವರು ಕೊಡೂ ಅಷ್ಟ ಪಗಾರ ತೊಗೊಂಡು, ಹಾಕಿದಂಥಾ ಕೊಂಪಿಗೆ ಹೋಗಿ, ಬುದ್ಧಿ ಇಲ್ಲದವರ ಕೂಡ ಗುದ್ಯಾಡಿಕೋತ, ಒಂದಿತ್ತು ಒಂದಿಲ್ಲಾ ಅನ್ನೂ ಹಾಂಗ ನಾವು ಜೀವನ ನಡೆಸಿದಿವಿ. ಅವರು ಕುರಿಗಳನ್ನ ಹೆತ್ತು ದೊಡ್ಡಿಗೆ ಹಾಕಿದಾಂಗ ಸಾಲಿಗೆ ಹಾಕಿದರ, ನಾವು ಅದೇ ಕುರಿಗಳನ್ನು ಮುಂದಿನ ದೊಡ್ಡ ದೊಡ್ಡಿಗೆ ಕಳಿಸತಿದ್ವಿವಿ. 'ಏನು ಕರಿಯಪ್ಪಾ. ಹೀಂಗ ಕಹಿಯಾಗಿ ಮಾತಾಡ್ತೀ ನೀನು, ಶಿಕ್ಷಕರು ಅಂದರ ಭಾವಿ ಪ್ರಜೆಗಳ ನಿರ್ಮಾಪಕರು. ರಾಷ್ಟ್ರದ ಭವಿತವ್ಯ ಅವರ ಕೈಯೊಳಗ ಇರತದ' ಅಂತ ನೀವು ಅಂದೀರಿ. ಪೇಪರಿನೊಳಗಿನ ತಲೆ ಬರಹಗಳನ್ನ ಓದಿ ಓದಿ, ದೊಡ್ಡ ಮನುಷ್ಯರು ತುಂಬಿದ

ಸಭೆಯೊಳಗಿನ ಭಾಷಣ ಮಾಡುವುದನ್ನು ಕೇಳಿ ಕೇಳಿ ನೀವು ಹಾಂಗ ಅನ್ನಬಹುದು. ಆವರ ಯಾವುದೇ ಮಾತಿಗಾದರೂ ಸ್ವತಃ ಅನುಭವ ಬೇಕು ನೋಡ್ರಿ. ಅನುಭವಿಸಲಾರದ ಮಾತಾಡಲಿಕ್ಕೆ ಹಗುರ ಆಗ್ತದ. ಅದಕ್ಕ ಮೊದಲ ನನ್ನ ಅನುಭವ ಕೇಳ್ರಿಲ್ಲೆ.

ನಾವು ಆ ಊರಿಗೆ ಹೋಗಿ 3-4 ತಿಂಗಳು ಆಗಿರಬಹುದು. ಸರಕಾರದವರು ಕುಟುಂಬ ಯೋಜನಾದ ಪ್ರಚಾರಕ್ಕಂತ ದಾಯಿನ್ನ ಕಳಿಸಿದ್ದರು. ಅವಳು ಮತ್ತು ಗ್ರಾಮಸೇವಿಕೆ ಇಬ್ಬರೂ ಕೂಡಿ ಓಣಿ ಓಣಿ ತಿರುಗಾಡಿ ಹೆಣ್ಣುಮಕ್ಕಳಿಗೆ ಕುಟುಂಬ ಯೋಜನಾದ ಮಹತ್ತ್ವ ತಿಳಿಸಿ ಹೇಳುತ್ತಿದ್ದರು. ಅವರಿಬ್ಬರೂ ನಮ್ಮ ಓಣಿಗೆ ಬಂದಾಗ ಮಧ್ಯಾಹ್ನ ಆಗಿತ್ತು. ಗಂಡಸರೆಲ್ಲಾ ಹೊಲಕ್ಕ ಹೋಗಿದ್ದರು. ಹೆಣ್ಣುಮಕ್ಕಳಿಗೆ ಕೈ ಬಿಡುವಾಗಿತ್ತು. ನೆರಮನಿ ಕಟ್ಟೀಮ್ಯಾಲೆ ಕೂತು ಅವರ ಮಾತುಕತೆ ಸುರು ಆದವು. ನಾನು ಮಧ್ಯಾಹ್ನದ ಸಾಲಿಗೆ ಹೋಗೂದಕ್ಕಿಂತ ಮೊದಲು ಊಟ ಆದಮ್ಯಾಲೆ ಸ್ವಲ್ಪ ಹೊತ್ತು ವಿಶ್ರಾಂತಿ ಪಡೀತಿದ್ದೆ. ಈ ಯೋಜನಾದ ಬಗ್ಗೆ ನನಗೂ ಕುತೂಹಲ ಇತ್ತು, ಅದಕ್ಕೆ ಹೊರಗಿನ ಸಂಭಾಷಣೆಗೆ ಕಿವಿಗೊಟ್ಟೆ. ಮೊದಲು ಅವರು ಇಬ್ಬರೂ ಕುಟುಂಬ ಯೋಜನಾ ಅಂದರ ಏನು, ಅದು ಯಾಕ ಅವಶ್ಯ ಅದ, ಅದರಿಂದ ದೇಶಕ್ಕೆ ಹ್ಯಾಂಗ ಕಲ್ಯಾಣ ಆಗ್ತದ ಅನ್ನೂದನ್ನೆಲ್ಲಾ ತಿಳಿಸಿ ಅಲ್ಲೇ ಕೂಡಿದವರಿಗೆ ಹೇಳಿದರು. ಆಮೇಲೆ ಒಬ್ಬೊಬ್ಬರನ್ನೇ ನಿಮ್ಮ ಮಕ್ಕಳೆಷ್ಟು ? ಗಂಡನ ಉದ್ಯೋಗ ಏನು ? ಎಲ್ಲಾ ವಿವರ ಕೇಳಿ ಅವರಿಗೆ ಔಷಧಿ ಗುಳಿಗೆ ಆಪರೇಷನ್ನಿನ ಉಪಯೋಗ ತಿಳಿಸಿ ಹೇಳಿದರು. ಒಬ್ಬಳ ಸರದಿ ಬಂದಾಗ-

'ನನಗ ನಾಲ್ಕು ಗಂಡು, ನಾಲ್ಕು ಹೆಣ್ಣು ಅದಾವ್ರಿ. ಈಗ ಮತ್ತ ನಾಕರಾಗ್ಯೆತಿ' ಎಂದು ತನ್ನ ಸಂತಾನ ಸಂಪತ್ತಿನ ವೈಭವ ತೋರಿಸಿಕೊಂಡಳು.

'ಒಂಬತ್ತು ಮಕ್ಕಳು !! ಅಬ್ಬಾ !! ನಿಮ್ಮ ಗಂಡಗ ಹೊಲಾ ಎಷ್ಟದ' ಅವಳ ತೂಕದಿಂದಾಗಿ ಗ್ರಾಮಸೇವಿಕೆ ಬಹುವಚನ ಪ್ರಯೋಗಿಸಿದ್ದಳೆನ್ನುವದು ಆಮೇಲೆ ತಿಳಿಯಿತು.

'ನನ್ನ ಗಂಡಗ ಏನು ಕಡಿಮಿ ಇತ್ತರಿ ? ಹೊಲಾ ಬೇಕಾದಷ್ಟು, ನೂರಾರು ಎಕರೆ, ಆದರ ಈಗ ನ್ಯಾಯದಾಗ ಬಿದ್ದದ. ಅದಕ್ಕ ನಾವು ಈಗ ಉಣ್ಣೂದು ಹತ್ತೆಕರೆ ಹೊಲದಾಗ' ಅವಳು ಗತವೈಭವವನ್ನೂ ಕೊಚ್ಚಿಕೊಂಡಳು.

'ಅಲ್ರೆವ್ವಾ, ಇಷ್ಟು ಕಡಿಮೆ ಉತ್ಪನ್ನದಾಗ ನೀವು ಒಂಬತ್ತು ಮಕ್ಕಳನ್ನ ಹ್ಯಾಂಗ ಬೆಳೆಸವರು, ಹ್ಯಾಂಗ ದೊಡ್ಡವರನ್ನ ಮಾಡುವವರು ?' ಗ್ರಾಮಸೇವಿಕೆ ಕಳಕಳಿಯಿದ ಕೇಳಿದಳು.

'ಅಯ್ಯ, ಬೆಳಸಾಕ ನಾವೇನ ಮಾಡೂದೈತ್ರಿ. ತಾವ ಉಣತಾವ, ತಿಂತಾವ, ಬೆಳೀತಾವ' ಇವಳ ಅಜ್ಞಾನಕ್ಕೆ ನಕ್ಕಳು ಆ ಮಹಾತಾಯಿ.

'ಹಾಂಗಲ್ಲಬೇ, ಈ ಮಾಸ್ತರರ ಶಾರಕ್ಕನ್ನ ನೋಡು. ಮೂರು ಮಕ್ಕಳದಾವ, ಇಷ್ಟ ಸಾಕು. ಇವರನ್ನ ವಿದ್ಯಾವಂತರನ್ನ ಮಾಡಿ ಬೆಳಸತೀವಿ ಅಂತಾರ. ನಿನಗ ಒಂಬತ್ತು ಮಕ್ಕಳು....'

'ಅವರಿಗೇನ್ರಿ, ನೌಕರಿ ಮಾಡುವವರು, ಸರಕಾರದ ಚಾಕರಿ ಮಾಡಿಕೋತ ಊರೂರು ಗುಳೇ ಕಟ್ಟಿಕೊಂಡು ತಿರುಗೂವವರು, ನಮ್ಮಾಂಗ ಏನ ವತನದಾರರ ? ನಮಗ ಏನ ಕಡಿಮಿ ಆಗೇದರಿ. ಶಿವಾ ಕೊಡೂ ಫಲಾ ಬ್ಯಾಡ ಅನ್ಯಾಕ' ಮಾತಿನಲ್ಲಿ 'ಅಹಂ' ಸಾಕಷ್ಟಿತ್ತು.

'ಹೋಗಲಿ ಬಿಡವಾ. ನೀವು ಶ್ರೀಮಂತರು, ಇದ್ದುಳ್ಳವರೂ ಅಂತ ತಿಳಕೊ. ಇಷ್ಟು ಮಕ್ಕಳನ್ನ ಹೊತ್ತು, ಹೆತ್ತು ನಿನ್ನ ಆರೋಗ್ಯ ಹಾಳಾಗೂದಿಲ್ಲೇನು ? ಮಕ್ಕಳಿಗೆ ಹಾಲು ಸಾಲೂದಿಲ್ಲ. ಸರಿಯಾಗಿ ಬೆಳಿಯೂದಿಲ್ಲ. ಸಾಕಲ್ಲ, ಇನ್ನು ಮುಂದಾದರೂ ಆಪರೇಷನ್ ಮಾಡಿಸಿಕೊ, ನಿನಗ ಛೊಲೋ ಆಗತದ' ದಾಯಿ ಸಮಜಾಯಿಸಿದಳು.

'ಏನ್ರೀ ಸುಮ್ಮನ ಇದ್ದಾಂಗ ಬಾಯಿ ಭಾಳ ಬಿಡತೀರಲ್ಲ, ನಾ ಯಾಕ ಹೊಟ್ಟೀ ಕೊಯ್ಯಿಸಿಕೊಳ್ಳಲಿ. ಯಾವುದಕ್ಕೂ ಕಡಿಮಿ ಆಗಿಲ್ಲ ನನಗ. ಉಪದೇಸಾ ಮಾಡಾಕ ಬಂದಾರಿವರು. ಸುಮಾಕ ಹೋಗ್ರಿ. ಲಗ್ನಾ ಮಾಡಿಕೊಂಡು ಮಕ್ಕಳು ಮರಿ ಹಡದು ಸುಕದಿಂದ ಸಂಸಾರಾ ಮಾಡಹೋಗ್ರಿ. ನಿಮಗ್ಯಾತಕ್ಕ ಬೇಕು ಇಲ್ಲದ ಕಾರಭಾರಾ' ಎಂದು ಒಂಬತ್ತು ಮಕ್ಕಳ ತಾಯಿ ಆರ್ಭಟಿಸಿದಾಗ ಸಭೆ ಬರಖಾಸ್ತಾಯಿತು. ಶಾರದಾ ಒಳಗೆ ಬಂದವಳೇ ನನ್ನ ಮುಖ ನೋಡಿ ಕಿಸಕ್ಕನೆ ನಕ್ಕಳು.

'ಯಾರು ಆ ಗಾಂಧಾರಿ ?' ಅಂದೆ.

'ಆಕೀ ಇಟ್ಟಪ್ಪ ಗೌಡರ ಪುಟ್ಟಕ್ಕ. ಹೆಸರಿಗೆ ಪುಟ್ಟಕ್ಕ. ನಮ್ಮ ಮನೀಗೆ ಕರೀಬೇಕಂದರೆ ಆಕೀ ಸಾಲೂದೆ ಇಲ್ಲ ನಮ್ಮ ಬಾಗಿಲಿನೊಳಗ' ಅಂದಳು.

ಪುಟ್ಟಕ್ಕನ ಕಂಠಗಾಂಭೀರ್ಯವನ್ನಷ್ಟೇ ಸವಿದಿದ್ದ ನನಗೆ ಅವಳನ್ನ ಪ್ರತ್ಯಕ್ಷ ನೋಡುವ ಭಾಗ್ಯವೂ ಬಂತು. ಅವತ್ತು ಮೂರನೇ ಕ್ಲಾಸಿಗೆ ಸಾಮಾನ್ಯ ವಿಜ್ಞಾನದ ಪಾಠ ಹೇಳುತಾ ಇದ್ದೆ. ಚಟಾಕು, ಗಿರ ಪಾವು, ಅರಪಾವು, ಪಾವು, ಪಡಿಯಂಥ ನಾಲ್ಕೈದು ಮಕ್ಕಳು ಸಾಲೆ ಒಳಗೆ ಬಂದರು. ಅವರ ಹಿಂದಿನಿಂದ ಬಗಲಲ್ಲೊಂದು ಕೂಸನ್ನೆತ್ತಿಕೊಂಡು ಗುಡಿಯ ಬಾಗಿಲಿನಲ್ಲಿ ಶರೀರ ತೂರಿ ಈಚೆಗೆ ಎಳೆದುಕೊಂಡು ಬಂದಳು ಪುಟ್ಟಕ್ಕ. ನಮ್ಮ ಸಾಲೆ ಕಟ್ಟಡ ಇನ್ನೂ ಮುಗಿದಿರಲಿಲ್ಲ. ಆದ್ದರಿಂದ ಸಾಲೆ ಈಗ ಗುಡಿಯೊಳಗೆ ನಡೀತಿತ್ತು.

'ಮಾಸ್ತರs ಕರಿಯಪ್ಪ ಮಾಸ್ತರ ಅಂದರ ನೀವs ಏನ್ರೀ. ನಮ್ಮ ಬಸ್ಯಾ, ಸಿದ್ಯಾ, ಇರಪ್ಯಾ ಅವರಿಗೆಲ್ಲಾ ರೊಕ್ಕಾ ತರಾಕ ಹೇಳೀರಂತ. ಯಾತಕ್ಕ ರೊಕ್ಕಾ ?' ಗುಡುಗಿದಳು ಪುಟ್ಟಕ್ಕ. ಹುಡುಗರೆಲ್ಲ ಸ್ತಬ್ಧರಾಗಿ ನಮ್ಮನ್ನೇ ನೋಡುತ್ತಿದ್ದರು.

"ಹೌದ್ರಿ, ನಾನs ಹೇಳಿದ್ದೆ. ನಿಮ್ಮ ಮೂರು ಮಂದಿ ಮಕ್ಕಳು ಎರಡು, ಮೂರು, ನಾಲ್ಕನೇ ಕ್ಲಾಸಿನೊಳಗ ಅದಾರಲ್ಲ. ಅವರಿಗೆ ಪುಸ್ತಕ, ಕಾಪಿಬುಕ್, ನಕಾಶ - ಪುಸ್ತಕ ಕೊಡಿಸಬೇಕಾಗಿತ್ತು. ಅದಕ ರೊಕ್ಕಾ ತರ್ರೆಪ್ಪಾ. ನಾವು ಸಾಲಿಯಿಂದ ತರಿಸಿಕೊಡ್ತೀವಿ' ಅಂತ ಹೇಳಿದ್ದೆ.

'ನಿಮಗೇನು, ಕೂತು ಅದನ್ನ ತರ್ರಿ, ಇದನ್ನ ತರ್ರಿ ಅಂತ ಹೇಳತೀರಿ. ಇಲ್ಲೇನು ರೊಕ್ಕದ ಗಿಡಾ ಹಚ್ಚೇವೇನ ನಾವು ? ಹಿರ್‍ಯಾ ನೋಡಿದರ ಕೋರ್ಟು ಕಚೇರಿ ಅಂತ ತಿರಗತಾನ. ಇಲ್ಲಿ ದುಡಿಯೂವವರು ಯಾರು ? ಹಿರ್‍ಯಾ ಕಲಿಯಲಿ, ಮುಂದ ಹಿಂಗೆಲ್ಲಾ ರೊಕ್ಕಾ ಬೇಡತಿದ್ದಿಲ್ಲ ಅಂತ. ಈಗ ಯಾತಕ್ಕ ಬೇಕು ?'

'ಗೌಡರು ಕಲಿತದ್ದು ಹಿಂದಿನ ಕಾಲದ ಮಾತಾತು. ಈಗ ಮಕ್ಕಳು ಶಾಣ್ಯಾರು ಆಗಬೇಕಂತ ಪುಸ್ತಕಾ ಭಾಳಾ ಹಚ್ಯಾರ ಸರಕಾರದವರು. ಭಾಳ ವಿಷಯಾ ಕಲಿಸಬೇಕಾಗತದ. ಅದಕ್ಕೆಲ್ಲಾ ಸಾಧನ ಇರದಿದ್ದರ ನಾವರ ಹ್ಯಾಂಗ ಕಲಿಸಬೇಕು ಹೇಳ್ರೆವ್ವಾ ನೀವs' ಸಿಟ್ಟು ಉಕ್ಕಿ ಬರುತ್ತಿದ್ದರೂ ಅದುಮಿ ತಾಳ್ಮೆಯಿಂದಲೇ ಮಾತನಾಡಿದ್ದೆ.

'ಐ ತಗಿ, ಏನು ದೊಡ್ಡ ವಿದ್ಯಾ. ಅದsಕಾಗಿ - ಗುಬ್ಬಿ ಕತಿ, ಹಣ್ಣು ಹಂಪಲ ಕತಿ, ಯಾರಿಗ್ಗೊತ್ತಿಲ್ಲ ಅದು. ಅದೆಲ್ಲಾ ಬಿಡಿರಿ. ಇಂಥಾ ರೊಕ್ಕಾ ಖರ್ಚು ಮಾಡು ವಿದ್ಯಾನ ಬ್ಯಾಡ ನನಗ. ನಮಗೇನ ಬೇಕಾಗಿಲ್ಲ ಈ ಸಾಲಿ. ನಮ್ಮ ಹುಡುಗೂರ್‍ನ ಮನೀಗೆ ಕಳಿಸಿಬಿಡ್ರಿ' ಒಂದು ಪೆಟ್ಟು, ಎರಡು ತುಂಡು ಎನ್ನುವ ಹಾಗಿತ್ತು ಅವಳ ಮಾತಿನ ರೀತಿ.

ಇದನ್ನೆಲ್ಲಾ ಕೇಳುತ್ತಿದ್ದ ನನ್ನ ಜೊತೆ ಮಾಸ್ತರರು ನನ್ನನ್ನು ಬದಿಗೆ ಕರೆದು 'ಇರಲಿ ಬಿಡ್ರಿ. ರೊಕ್ಕಾ ತರೂದು ಬ್ಯಾಡಾ. ಹುಡುಗರನ್ನ ಸಾಲೀ ಬಿಡಿಸಬ್ಯಾಡರಿ ಅಂತ ಹೇಳಿರಿ. ಕಲಿತರ ಕಲೀಲಿ, ಇಲ್ಲಾಂದರ ಹಾಂಗs ಕೂತು ಹೋಗಲಿ. ಆ ಮಾತಾಯಿ ಕೂಡ ಜಗಳಾ ಕಟಗೋಬ್ಯಾಡರಿ' ಎಂತು ತಿಳಿಹೇಳಿದಾಗ ಅನುಭವಿಕರ ಮಾತು ತೆಗೆದು ಹಾಕಬಾರದು ಎಂದು ನಾನು ಅವಳಿಗೆ ಹಾಗೆಯೇ ಹೇಳಿಕಳಿಸಿದೆ. ಆದರೆ ಅವಳು ಹೋಗುವಾಗ ಬಿಟ್ಟ ಬಾಣ ನನ್ನ ಎದೆಯಲ್ಲಿ ನಟ್ಟುಹೋಯಿತು.

'ನನಗ ಗೊತ್ತಿತ್ತು ಈ ಮಾಸ್ತರ ಹಿಂಗ ಅಂತಾನಂತ. ರೊಕ್ಕಾ ತರ್ರಿ ತರ್ರಿ ಅಂದು ಕಿಸೇಕ ಹಾಕುವವರು ಇವರೆಲ್ಲಾ. ಇವರ ಐದೇಶಿ ಗೊತ್ತು ನನಗ' ನಾನು ಶಸ್ತ್ರರಹಿತನಾಗಿ

ಅಸಹಾಯನಾಗಿದ್ದೆ. ಮುಂದೆ ಅವಳನ್ನೆಂದೂ ನೋಡಬಾರದು, ಮಾತಾಡಬಾರದು ಎನ್ನುವಷ್ಟು ಮನಸ್ಸು ಮುರಿದು ಹೋಗಿದ್ದರೂ ಅವಳು ಮಾಡಿದ ಅಲ್ಲೊಂದು ಇಲ್ಲೊಂದು ಜಗಳ, ಕಿತ್ತಾಟ, ಬೈದಾಟಗಳ ವಿಷಯ ಶಾರದಾ ನನ್ನ ಕಿವಿಯ ಮೇಲೆ ಹಾಕತಾನೇ ಇದ್ದಳು. ತಾಟಕಿ, ಕಿರಾತಿ, ಚಂಡಿ, ಚಾಮುಂಡಿ, ಶೂರ್ಪನಖಿ ಎಲ್ಲರ ಭಟ್ಟಿ ಇಳಿಸಿಯೇ ಹುಟ್ಟಿದವಳು ಈ ಪುಟ್ಟಕ್ಕ.

ಶಾಲೆ ಅಂದಮೇಲೆ ಪಾಠಗಳೊಡನೆ ಆಟವೂ ಇರಬೇಕಲ್ಲ. ಹುಡುಗರಿಗೆ ಮಾಸ್ತರರಿಗೆ ಪ್ರೀತಿ ಉತ್ಸಾಹ ಇರಲಿ ಬಿಡಲಿ ಸರಕಾರವಂತೂ ಆಟವನ್ನು ಕಡ್ಡಾಯವಾಗಿ ಮಾಡಿತ್ತು ಮಕ್ಕಳ ಒಳ್ಳೆಯದಕ್ಕೆ. ಹುಡುಗರಿಗೆ ಲೆಝೀಮ್ ಕಲಿಸುವುದೂ ಕವಾಯತು ಮಾಡಿಸುವುದೂ, ನನ್ನ ಕೊರಳಿಗೇ ಬಿದ್ದಿತ್ತು. ಹಳ್ಳಿಯ ಶಾಲೆಯಲ್ಲಿ ರಾಜಾನೂ ನಾವೇ, ಸೇವಕರೂ ನಾವೇ. ಆಟಕ್ಕೆ ಬರದೆ ತಪ್ಪಿಸುತ್ತಿದ್ದ ಹುಡುಗರನ್ನ ಹುಡುಕಿ ಹಿಡಿದುಕೊಂಡು ಬರಬೇಕಾಗಿತ್ತು. ಹಾಗೆ ಒಮ್ಮೆ ಒಬ್ಬ ಹುಡುಗ ಸಿಕ್ಕ. ಆಟಕ್ಕೆ ಹೋಗಲು ಒಲ್ಲೆ ಎಂದ. ಒತ್ತಾಯದಿಂದ ಬೆನ್ನ ಮೇಲೆ ಕೈಯಿಟ್ಟು 'ಹೋಗಪ್ಪಾ, ಹೋಗು ಆಟಾ ತಪ್ಪಿಸಬಾರದು' ಎಂದು ಸ್ವಲ್ಪ ಮುಂದೆ ದೂಡಿದೆ. ಅಷ್ಟಕ್ಕೆ ಅವನು ಮುಂದೆ ಹೋಗಿ ಮುಗ್ಗರಿಸಿ ಬಿದ್ದ. ಚೂಪು ಕಲ್ಲು ತುಟಿಗೆ ನಟ್ಟು ರಕ್ತ ಸೋರುತ್ತಿತ್ತು. ಮೊದಲೇ ನಿಶ್ಶಕ್ತನಾಗಿದ್ದ ಹುಡುಗ ನೋವಿನಿಂದ ಎಚ್ಚರ ತಪ್ಪಿದ. ಎಲ್ಲ ಕಡೆಯಿಂದ ಹುಡುಗರೂ ಜೊತೆ ಮಾಸ್ತರರೂ ಓಡಿ ಬಂದರು. ಯಾರೋ ಓಡಿ ಅವನ ಮನೆಗೆ ಸುದ್ದಿ ಮುಟ್ಟಿಸಿದರು. ಎದೆ ಎದೆ ಹೊಡೆದುಕೊಳ್ಳುತ್ತ.

'ನನ್ನ ಮಗನ್ನ ಕೊಂದರಪ್ಪೋ, ಇವರು ಕೊಂದರು' ಎಂದು ಪುಟ್ಟಕ್ಕ ಶಾಪ ಹಾಕಿದಾಗಲೇ ಅರಿವಾಯಿತು ನನಗೆ ಬಿದ್ದ ಹುಡುಗ 'ಇರಪ್ಪಾ' ಎನ್ನುವದು. ಕೆಲಸ ಕೆಟ್ಟಿತು ಎಂದವನೇ ದೇಸಾಯಿಯ ಮನೆಗೆ ಧಾವಿಸಿದೆ. ಆ ಊರಿಗೆ ಆ ಮಾಜಿ ಕಂಪೌಂಡರನೇ ಡಾಕ್ಟರ. ಅವನು ಬಂದು ನೋಡಿ ತಲೆ ಅಲ್ಲಾಡಿಸಿ.

'ತುಡಿ ಹರದದ. ಟಾಕಿ ಹಾಕಬೇಕು. ಗೌಡರ ಇಲ್ಲಿ ಆಗೂದಿಲ್ಲ. ಹುಬ್ಬಳ್ಳಿಗೆ ಒಯ್ಯಿರಿ'' ಅಂದ.

ಇಟ್ಟಪ್ಪಗೌಡರು ಒದರುತ್ತಿದ್ದ ಹೆಂಡತಿಯ ಬಾಯಿ ಮುಚ್ಚಿಸಿ ಮಗ ಮತ್ತು ಮಂಡಳಿಯೊಡನೆ ಹುಬ್ಬಳ್ಳಿ ಗಾಡಿ ಹತ್ತಿದರು. ಹುಡುಗನ ಉಪಚಾರಕ್ಕೆ ಹತ್ತಿರ ತಾಯಿ ಬೇಕು. ಗಂಡಸು ದಿಕ್ಕೆಂದು ಗೌಡರು ಬೇಕು. ಇನ್ನು ಉಳಿದ ಏಳು ಮಕ್ಕಳು ತಂದೆ-ತಾಯಿ ಬಿಟ್ಟು ಇರಲಾರದೆ ಅವರೂ ರವಾನೆಯಾದರು. ನಾನು ಹಾಯಾಗಿ ಉಸಿರುಬಿಟ್ಟೆ.

ಹದಿನೈದು ದಿನ ಕಳೆದಿತ್ತು. ಹೆಡ್ ಮಾಸ್ತರರು ಕರೆಯುತ್ತಿದ್ದಾರೆಂದು ಒಬ್ಬ ಹುಡುಗ ಬಂದು ಹೇಳಿದ. ಅವರೊಡನೆ ಇಟ್ಟಪ್ಪಗೌಡರೂ ಇದ್ದರು. ನನ್ನನ್ನ ಕಂಡಕೂಡಲೆ ಒಂದು ಕಾಗದ ಮುಂದೆ ಚಾಚಿ, 'ಮಾಸ್ತರ್ರ ತೊಗೊಳ್ರಿ. ಇದು ಡಾಕ್ಟರನ ಬಿಲ್ಲು. 159 ರೂ. 80 ಪೈಸೆ ಮಾಡ್ಯಾರ. ಇದನ್ನು ಚುಕ್ತಾ ಮಾಡದ ರೋಗಿನ್ನ ಡಿಸ್‌ಚಾರ್ಜ್ ಮಾಡೂದಿಲ್ಲಂತ ಅಂತಾರಂತ ಡಾಕ್ಟರರು. ಬಿಲ್ಲು ನೀವು ಕೊಡಬೇಕು ಅಂತಾರ ಇಟ್ಟಪ್ಪ ಗೌಡರು.' ದಿಕ್ಕು ತೋಚದವನಂತಾಗಿ ಸುಮ್ಮನೇ ನಿಂತು ಬಿಟ್ಟೆ. 'ನಾನು ಯಾಕ ತುಂಬುಬೇಕ್ರೀ ಬಿಲ್ಲು' ಅಂದೆ ಧೈರ್ಯದಿಂದ.

'ಮತ್ತ ಯಾರರೀ ಹುಡುಗನ ಕುತ್ತಿಗೆ ಹಿಡಿದು ದಬ್ಬಿದವರು ? ನೀವು ನುಗಿಸಿದಿರಿ. ಅವ ಬಿದ್ದ. ತುಟೀ ಹರೀತು. ಹೊಲಿಸಿದೆವು ಇಲ್ಲಾಂದರ ನಮ್ಮ ಮಗಾ ಸಾಯೂ ತನಕಾ ಸೊಂಡಿಹರಕ ಆಗಿ ಇರಬೇಕಾಗಿತ್ತು. ಅವಗ ಹೆಣ್ಣು ಕೊಡುವವರು ಯಾರು ? ಇಷ್ಟು ರೊಕ್ಕಾ ಖರ್ಚಾತು. ಆ ಹಣಾ ಭರ್ತಿಮಾಡಬೇಕಾದವರು ನೀವ ಅಲ್ಲ ?' ಇಟ್ಟಪ್ಪ ಗೌಡರು ಪೇಚಿಗೆ ಸಿಕ್ಕಿಸಿದರು.

ನನ್ನ ಗಂಟಲು ಒಣಗಿದ್ದರೂ ಉಗುಳು ನುಂಗಿ ಹೆಡ್ ಮಾಸ್ತರರಿಗೆ ಹೇಳಿದೆ 'ಅಲ್ರೀ ಮಾಸ್ತರ ನೀವರೆ ಹೇಳ್ರಿ. ಆಟಕ್ಕ ಹೋಗಪ್ಪ ಅಂದು ಸ್ವಲ್ಪ ಮುಟ್ಟಿದೆ. ಬಿದ್ದ, ಅದು ನನ್ನ ತಪ್ಪೇನ್ರಿ ? ಸರಕಾರದವರು ಆಟಾ ಕಡ್ಡಾಯ ಮಾಡ್ಯಾರಂತ ನಾವು ಆಡಸತೀವಿ. ಅವ ಒಲ್ಲೆ ಯಾಕ ಅನಬೇಕ ? ನೀವರೆ ಹೇಳ್ರಿ.'

ಹೆಡ್ ಮಾಸ್ತರರಿಗೆ ಬಾಯಿ ತೆರೆಯಗೊಡದೆ ಇಟ್ಟಪ್ಪ ಗೌಡರೆಂದರು "ಆಡಿಸರಿ ಅಂದರ ನುಗಿಸಿ ಹುಡುಗರನ್ನ ಕೆಡವಿ ಜೀವಾ ತೊಗೋಬೇಕೇನ್ರಿ ? ನಿಮ್ಮ ಸರ್ವಿಸಿನ್ಯಾಗ ಹಿಂಗ ಎಷ್ಟು ಮಂದಿನ್ನ ದವಖಾನಿಗೆ ಕಳಿಸೀರಿ ?"

ನನ್ನ ಮೈರಕ್ತ ಕುದಿಯುತ್ತಿದ್ದರೂ ಹೇಳಿದೆ - 'ಹುಡುಗನ ದವಾಖಾನಿ ಖರ್ಚಂತ ಗಂಡ ಹೆಂಡತಿ ಎಂಟು ಮಕ್ಕಳು ಹದಿನೈದು ದಿನಾ ಹುಬ್ಬಳ್ಳಿಯೊಳಗ ಮಾಡಿದ ಖರ್ಚೆಲ್ಲಾ ನಾನು ಕೊಡಬೇಕ ? ನೀವು ಹೆದರಿಸಿ ಬೆದರಿಸಿ ರೊಕ್ಕಾ ವಸೂಲು ಮಾಡುವವರು ಏನು ?' ಹೆಡ್ ಮಾಸ್ತರರು ತಣ್ಣಗಿದ್ದರು.

'ನಿಮ್ಮಂಥವರನ್ನ ಬಹಾಳ ಮಂದಿನ್ನ ನೋಡೀನ್ರೀ ಮಾಸ್ತರರ. ಇಟ್ಟಪ್ಪ ಗೌಡ ಅಂದರ ಯಾರು ಅನ್ನೋದು ನಿಮಗ ಗೊತ್ತಿಲ್ಲ. ಒಳ್ಳೇ ಮಾತಿಲೆ ಕೇಳಿದರ ಕೊಡೂ ಹಾಂಗ ಕಾಣೂದಿಲ್ಲ ನೀವು. ಆಯ್ತು, ಏಳ ಕೆರೀನೀರ ಕುಡಿಸತೀನಿ ನಿಮಗ' ಕೋರ್ಟು-ಕಚೇರಿಯಲ್ಲಿ ಪಳಗಿದ ಗೌಡರ ಮುಂದೆ ನನ್ನ ವಾದವೇನು ನಡೆದೀತು.

'ಎರಡು ದಿನ ಬಿಟ್ಟು ಹೇಳುತ್ತೇನೆ' ಎಂದೆ. ಬಗ್ಗಲಿಲ್ಲ ಆಸಾಮಿ. 'ಅಲ್ಲೀತನಕಾ ಹುಡುಗ ದವಾಖಾನಿಯೊಳಗ ಕೊಳೀಬೇಕೇನು ?' ಅಂದರು. ಮನಸ್ಸು ರೋಸಿ ಹೋಯಿತು. ಕೂಡಲೆ ಊರಗೌಡರ ಹತ್ತಿರ ಹೋಗಿ ನಡೆದ ಸಂಗತಿ ಹೇಳಿದೆ. ಅವರೂ 'ಮಾಸ್ತರ, ಇಟ್ಟಪ್ಪ ಗೌಡನ ಸಂಗತಿ ಅಂದರ ಹಾಂವಿನ ಸಂಗತಿ ಇದ್ದ್ಹಾಂಗ. ಅಂವಾ ಬಿಟ್ಟರೂ ಪುಟ್ಟಕ್ಕ ಬಿಡಬೇಕಲ್ಲ. ನಿಮ್ಮ ವಂಶಾನ ಹುರಿದು ಮುಕ್ಕ್ಯಾಳು. ನಾನು ರೊಕ್ಕದ ಸಹಾಯಾ ಮಾಡ್ತೀನಿ ಕೊಟ್ಟುಬಿಡ್ರಿ, ಹಾಳಾಗಿ ಹೋಗ್ಲಿ' ಎಂದರು.

ನಾನೂ ಗಟ್ಟಿ ಮನಸ್ಸು ಮಾಡಿ 'ಈ ಊರು ಹಾಳಾಗ ಹೋಗ್ಲಿ' ಅಂದು ರೊಕ್ಕಾ ಕೊಟ್ಟು ಕೆಲಸಕ್ಕೆ ರಾಜೀನಾಮೇನೂ ಕೊಟ್ಟು ಬಿಟ್ಟೆ. ಆಮೇಲೆ ಶಾರದಾನ ಮೈಮ್ಯಾಲಿನ ಬಂಗಾರಾ ಮಾರಿ ಸಾಲ ಮಾಡಿ ಈ ಅಂಗಡಿ ತೆಗದೆ. ನನ್ನ ಕಥೀ ಮುಗೀತು ನೋಡ್ರಿ.' ಎಂದು ಕರಿಯಪ್ಪ ಅಂದಾಗ ಗಡಿಯಾರ ನೋಡಿದೆ. ಒಂಬತ್ತು ಗಂಟೆಯಾಗಿತ್ತು. ಬಸ್ಸು ಹಿಡಿಯಲು ಏಳುತ್ತ 'ಕರಿಯಪ್ಪ ಅಂಥಾ ಹೆಣ್ಮಗಳು ಹೀಗೆ ಹ್ಯಾಂಗ ಆದಳು. ಇದೊಂದು ಸೋಜಿಗ ಆಗೇದ ನನಗ' ಅಂದೆ.

'ರಾಯರ, ದೊಡ್ಡೂರವರು ಆಗಾಗ ನನ್ನ ಅಂಗಡೀಗೆ ಬರ್ತಿರತಾರ. ಪುಟ್ಟಕ್ಕ ಇಳದಾಳ ಅಂತ ಹೇಳತಿದ್ದರು. ಆದರ ನಾನು ನಂಬಿದ್ದಿಲ್ಲ.'

'ಗಂಡ ತೀರಿಹೋದ ಮ್ಯಾಲ ಹೀಂಗ ಆಗಿರಬೇಕು' ನಾನು ಚಪ್ಪಲಿ ಮೆಟ್ಟುತ್ತ ಹೇಳಿದೆ.

'ನಾನು ಬ್ಯಾರೆ ಸುದ್ದೀ ಕೇಳಿನೇಳ್ರಿ, ಗಂಡ ಸತ್ತದಕ್ಕೂ ಅಲ್ಲ. ಅವಳ ಮಕ್ಕಳಿಗೆ ಲಗ್ನಾ ಆಗಿ ಶಾಕಿನಿ ಡಾಕಿನಿಯರಂಥಾ ಇಬ್ಬರು ಸೊಸೇರು ಬಂದಾರಂಥ ಅದಕ್ಕ....'

ನಾನು ಬಸ್ಸು ಹಿಡಿಯಲು ಓಡಿದೆ.

# ಕಮಲೇಶನ ಕಾವ್ಯ (ನಿ)ವೇದನೆ

'ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಭಕುತಿಯಿಲ್ಲಾ'- ದಾಸರ ಪದವನ್ನು ಮೆಲುದನಿಯಲ್ಲಿ ಹೇಳಿಕೊಳ್ಳುತ್ತ ಮನೆಯ ಅಂಗಳ ಸಾರಿಸಿ ರಂಗೋಲಿ ಇಡುತ್ತಿದ್ದ ಬಾಜೂಬಂದ ಬಕುಳಾ ಬಾಯಿಯ ಲಕ್ಷ್ಯ ನಾಲ್ಕು ಮನೆಗಳಾಚೆ ನಿಂತ ಟಾಂಗಾದತ್ತ ಹರಿದಾಗ ಪದ ಅಲ್ಲಿಗೇ ನಿಂತಿತು. ಇನ್ನೂ ನಸುಕಾಗಿ ಇದ್ದುದರಿಂದ ಹೆಚ್ಚು ಮನೆಗಳ ಬಾಗಿಲುಗಳೇ ತೆಗೆಯದ ಇಂಥ ಹೊತ್ತಿನಲ್ಲಿ ಕವಿಪತ್ನಿ ಕಮಲಾಬಾಯಿ ಹಾಸಿಗೆ ಟ್ರಂಕಿನ ಸಮೇತ ಹೊರಬಂದು ಟಾಂಗಾ ಹತ್ತಿದ್ದನ್ನು ಬಕುಳಾಬಾಯಿ ನೋಡಿದರು. ಕವಿ ಕಮಲೇಶರಾಯ ಕೊಟ್ಟ ಮುಂಗಡಿ ಕೂಸನ್ನು ಎತ್ತಿಕೊಂಡು ಕಮಲಾ 'ಈ ಸಾರೆ ನೀವು ಪತ್ರ ಹಾಕಿದರೂ ನಾ ಬರೂದಿಲ್ಲಾ. ನೀವs ಸ್ವತಃ ಕರೀಲಿಕ್ಕೆ ಬಂದಾಗ ನಾ ಬರೋವಾಕಿ ತಿಳೀತೇನ್ರಿ' ಎಂದು ಜೋರಾಗಿ ಕೂಗಿ ಹೇಳಿದ್ದನ್ನು ಟಾಂಗಾ ಸಪ್ಪಳದಲ್ಲಿಯೂ ಚುರುಕು ಕಿವಿಯ ಬಕುಳಾಬಾಯಿ ಕೇಳಿದರು. ಚಟ್ಟನೆ ಎದ್ದು ರಂಗೋಲಿಯ ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡೇ ಕೈ ತಿರುವುತ್ತ. ವಾರಿಬೈತಲೆಯ ವನಜಾಬಾಯಿಯ ಮನೆಗೆ ನಡೆದೇ ಬಿಟ್ಟರು.

ಸರಿ. ಯಜಮಾನರೆನ್ನಿಸಿಕೊಂಡ ಮನೆಯ ಗಂಡಸರಿಗೆಲ್ಲ ಬೆಳಗಿನ ಚಹದೊಡನೆ ಬಿಸಿ ಸುದ್ದಿಯೂ ತಯಾರಾಗಿತ್ತು. ಕವಿ ಕಮಲೇಶ ಹೆಂಡತಿಯೊಡನೆ ಜಗಳವಾಡಿ ಆಕೆಯನ್ನು ತವರು ಮನೆಗೆ ಕಳಿಸಿಬಿಟ್ಟಿದ್ದಾನೆ ಎನ್ನುವ ಸುದ್ದಿಯನ್ನು ಕೇಳಿದ ಯಜಮಾನರು ಬೆಳಗಿನ ಪತ್ರಿಕೆಯನ್ನು ಮರೆತರು. ಅವರಿಗೆಲ್ಲ ಆಶ್ಚರ್ಯ - ಇಷ್ಟೊಂದು ಧೈರ್ಯ ಇವನಿಗೆ ಹೇಗೆ ಬಂತೂ ಅಂತ. ಅವರೆಲ್ಲ ಅವನನ್ನು ಅಭಿನಂದಿಸೋದಕ್ಕೆ ಹೊರಟೇಬಿಟ್ಟರು. ಹೆಂಗಸರಿಗೆಲ್ಲ ಕಮಲಾಬಾಯಿ ಬಗ್ಗೆ ಅಭಿಮಾನ, ಹೆಮ್ಮೆ ; ಗಂಡನೇ ಮೂಗು ತಿಕ್ಕುತ್ತ ಬಂದು ಕರೆದ ಹೊರತು ಮನೆಗೆ ಕಾಲಿಡುವುದಿಲ್ಲ ಎಂದು ಅವಳು ಪ್ರತಿಜ್ಞೆ ಮಾಡಿದ್ದಕ್ಕಾಗಿ. ಆದರೆ ಅವಳನ್ನು ಅಭಿನಂದಿಸೋದಕ್ಕೆ ಅವರಿನ್ನೂ ಕಾಯಬೇಕಾಗಿತ್ತು.

ಹೆಂಡತಿಯನ್ನು ಟಾಂಗಾ ಹತ್ತಿಸಿ ಒಳಗೆ ಬಂದ ಕಮಲೇಶ ಅವಳೇ ಮಾಡಿ ಥರ್ಮಾಸಿನಲ್ಲಿ ಇಟ್ಟುಹೋದ ಚಹವನ್ನು ಮತ್ತೊಂದು ಕಪ್ಪು ಕುಡಿದು, ಹಾಳೆ, ಪೆನ್ನು ಎಲ್ಲವನ್ನೂ ಸಿದ್ಧಪಡಿಸಿಟ್ಟಿದ್ದ ಕಮಲೆಯನ್ನೇ ನೆನೆಸುತ್ತ ಕುರ್ಚಿಯ ಮೇಲೆ ಕುಳಿತು

ಪೆನ್ನು ಕೈಗೆತ್ತಿಕೊಂಡ. ಏನು ಬರೆಯಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿತ್ತಲ್ಲ. ಹಾಗೆಯೇ ಕಣ್ಣು ಮುಚ್ಚಿ ಹಣೆಗೆ ಕೈಯಿಟ್ಟುಕೊಂಡ. ನಿಮಿಷಾರ್ಧದಲ್ಲಿ ಬಾಗಿಲು ತಟ್ಟಿದ ಶಬ್ದ. ಕೆಲಸದ ನಿಂಗಿ ಎಷ್ಟು ಬೇಗ ಬಂದು ತನ್ನನ್ನು ಡಿಸ್ಟರ್ಬ್ ಮಾಡಿದಳಲ್ಲ, ನಾಳೆಯಿಂದ ಅವಳಿಗೆ ಕೆಲಸಕ್ಕೆ ಬರುವುದೇ ಬೇಡ ಎಂದರಾಯಿತು ಎಂದುಕೊಳ್ಳುತ್ತ ಬಾಗಿಲು ತೆಗೆದ. ಕವಿ ಕಮಲೇಶ ಎನ್ನುವವನು ಕವಿತೆ ಬರೆಯುತ್ತಾನೆ. ಅವುಗಳನ್ನು ತಾವು ಓದಿ ಸಂತೋಷಪಡಬೇಕು. ತಮ್ಮ ಮೆಚ್ಚಿಗೆ ತಿಳಿಸಬೇಕು. ಅಂಥ ಕವಿಯ ಬಗ್ಗೆ ಹೆಮ್ಮೆಪಟ್ಟುಕೊಳ್ಳಬೇಕು, ಎನ್ನುವ ಮಾತು ಹಾಗಿರಲಿ, ಆ ಕವಿ ಎನ್ನುವ ಪ್ರಾಣಿ ತಮ್ಮ ಬೀದಿಯಲ್ಲಿಯೇ ಇದ್ದಾನೆ ಎನ್ನುವುದನ್ನು ಕೂಡ ಲಕ್ಷಿಸದ ಅಕ್ಕಪಕ್ಕದ ಮನೆಯವರೆಲ್ಲ ಈ ದಿನ ತನ್ನ ಮನೆಗೆ ಆಗಮಿಸಿದ್ದನ್ನು ನೋಡಿ ಕಮಲೇಶ ಕಕ್ಕಾವಿಕ್ಕಿಯಾದ.

'ಹಂಗ್ಯಾಕೆ ನಿಂತ್ರೀ ಕಪಿಲೇಶರಾಯರ' ಒಂದು ಒಬ್ಬ ಧಡೂತಿ ಆಸಾಮಿ ಅಂದಾಗ ಕವಿ ಜಾಗೃತನಾದ.

'ನನ್ನ ಹೆಸರು ಕಪಿಲೇಶ ಅಲ್ರೀ ಕವಿ ಕಮಲೇಶ ಅಂತ'.

'ಇದ್ದೀತು ಬಿಡ್ರಿ, ಯಾವದರೇ ಒಂದು ಈಶ. ಆದರ ಈಶನಿಂದಲೂ ಆಗದಂಥಾ ಕೆಲಸಾ ನೀವು ಮಾಡಬಿಟ್ಟರೆಪಾ ' ಇನ್ನೊಬ್ಬ ಯಜಮಾನರ ಪ್ರಶಂಸೆ.

'ಛೆ, ಛೇ, ನಾನೇನು ಮಾಡ್ತೀನಿ ಅಂಥಾದ್ದು. ಎಲ್ಲೋ ಕಿರಿ ಕವಿ'- ವಿನಯದಿಂದ ಕವಿ ಹಲ್ಲುಕಿರಿದ.

'ಹೆಣ್ಣುಮಕ್ಕಳದs ರಾಜ್ಯ ಈಗಿನ ದಿವಸದಾಗ.'

'ನಾನಂತೂ ನಮ್ಮನಿಯಾಕಿ ಹಾಕಿದ ಉಗುಳು ದಾಟೋದಿಲ್ರೆಪಾ.'

'ಹೌದ್ರೀ, ಅಕಸ್ಮಾತ್ ನಾವು ಅವರ ಮನಸ್ಸಿನ ವಿರುದ್ಧ ಮಾತಾಡಿದರ ಮನೀ ಕುರುಕ್ಷೇತ್ರ ಆತಂತೆ ತಿಳೀರಿ.'

'ದಿನಾಲು ಎರಡೂ ಹೊತ್ತು ಕೂಳು ಕಾಣೋದು ಕಠಿಣ ಆಗ್ತದರೆಪಾ'

'ನೀ ಮಾಡಿದ್ದs ಸೋಕ್ಷಾ ಮೋಕ್ಷಾ ಅಂತ ಹೇಳಿ ನಾನಂತೂ ಕೈ ಊರಿನ್ರೆಪಾ.'

'ಒಲಿದರೆ ನಾರಿ ಮುನಿದರೆ ಮಾರಿ ಅಂತಾರಲ್ಲ ಹಾಂಗರೆಪಾ. ಅವಳನ್ನ ಒಲಿಸೂವರಾಗ ನನ್ನ ಕೂದಲು ಹಣ್ಣಾದ್ವು. ಹಲ್ಲು ಉದುರಿಹೋದ್ವು.'

ಈಗ ಮತ್ತೊಮ್ಮೆ ಬಾಯಿ ತೆರೆದ ಕಮಲೇಶ, ಮುತ್ತಿನಂತಹ ಒಂದೇ ಮಾತನ್ನಾಡಿದ. 'ಅದೆಲ್ಲಾ ನಿಮ್ಮ ಅನುಭವ ಇರ್ಬೇಕು. ಆದರೆ ನನ್ನದು ಬ್ಯಾರೇನ ಅದ.'

ಹೌದ್ರೀ, ನಿಮ್ಮದು ಬ್ಯಾರೇನs ಅದ ಅನ್ನೂದು ನಮಗೂ ಇಂದ ಗೊತ್ತಾತು. ಅದ್ಯಾಂಗ ನೀವು ಒಬ್ರs ಬ್ಯಾರೆ ಆದ್ರಿ. ಹಿಂಗಾಗಲಿಕ್ಕೆ ನೀವು ಏನು ಸಾಧನಾ ಮಾಡಿದಿರಿ ಹೇಳ್ರಿ ನಮಗೂ ಒಂದಿಷ್ಟು; ಅದಕ್ಕs ಬಂದೀವಿ ನಾವೆಲ್ಲಾ. ಮನೀಯಾಕಿನ ಎದುರಿಸಿ, ಜಗಳಾ ಮಾಡಿ 'ಇರತಿದ್ದರ ನಾ ಹೇಳಿದ್ದ ಕೇಳಿಕೊಂಡ ಬಿದ್ದಿರು. ಇಲ್ಲಾಂದರ ಒದ್ದು ತವರ್ಮನಿಗೆ ಓಡಿಸೇನು' ಅನ್ನೊ ಧೈರ್ಯ ನಿಮಗ ಹ್ಯಾಂಗ ಬಂತು. ದಯಮಾಡಿ ಹೇಳ್ರೀ.

'ಅಲ್ರೀ ನೀವು ನನ್ನ ತಪ್ಪು ತಿಳಿಕೊಂಡ ಹಾಂಗ ಕಾಣ್ತದ. ನಾನು ಜಗಳಾ ಗಿಗಳಾ ಏನೂ.....'

'ಇಲ್ರೀ ನಾವೇನೂ ತಪ್ಪು ತಿಳಿಕೊಂಡಿಲ್ಲಾ. ನಮಗ ಎಲ್ಲಾ ಗೊತ್ತಾಗೇದ. ನೀವೇನೂ ಮುಚ್ಚಿಟಕೋಬ್ಯಾಡ್ರಿ, ಎಲ್ಲಾರ ಮನೀಯೊಳಗೂ ನಡಿಯೂ ಮಾತು ಏನ್ರೆಪಾ ಇದು. ಇದರೊಳಗ ನಾಚೂ ಕಾರಣಾನs ಇಲ್ಲಾ, ನಾ ಹೇಳ್ತಿನಿ ಕೇಳ್ರಿಲ್ಲೆ ಜಗಳ ಯಾಕ ಸುರುವಾತು ಅನ್ನೋದು, ನಿಮ್ಮ ಹೆಂಡತಿ ಚಪಲಹಾರಾ ಮಾಡಿಸಿಕೊಡ್ರೀ ಅಂದರು.'

'ಅದರ ಜೋಡಿ ಜರದ ಧಡೀ ರೇಶಿಮಿ ಸೀರಿನೂ ಬೇಡಿದರು.'

'ಸ್ಟೀಲಿನ ಭಾಂಡಿ ಸೆಟ್ಟು ತೊಗೋತೀನಿ ಅಂದರು.'

'ಅಣ್ಣನ ಲಗ್ನದಾಗ ಮದುಮಗನಿಗೆ ಎರಡು ತೊಲಿ ಬಂಗಾರಾ ಅಹೇರು ಮಾಡ್ತೀನಿ ಅಂದರು ನೀವು ಬ್ಯಾಡಾ ಅಂದಿರಿ.'

'ತಂಗೀನ್ ಕಾಲೇಜಿಗೆ ಕಳಸ್ಬೇಕು. ಇಲ್ಲೇ ತಂದ ಇಟ್ಟುಕೋತೀನಿ ಅಂದರು. ಅದಕ್ಕೂ ನೀವು ಬ್ಯಾಡಾ ಅಂದಿರಿ, ಜಗಳಾ ಮಾಡಿದರೂ ನೀವೇನೂ ಜಗ್ಗಲಿಲ್ಲ. ತವರ್ಮನಿಗೆ ಓಡಿಸೇ ಬಿಟ್ಟಿರಿ. ಆಯ್ತು ಬಿಡಿ. ಕಾಳಜೀ ಮಾಡಬ್ಯಾಡರಿ. ಇನ್ನು ಆರಾಮ ಆಗಿ ಉಂಡು, ತಿಂದು ರಾಜಾಸಂಗ ಇರ್ರಿ. ರೆಸ್ಟು ತೊಗೊಳ್ರಿ. ತೂಕಾ ಏರಿಸಿಕೊಳ್ರಿ. ಏನಾದರೂ ನಮ್ಮಿಂದ ಹೆಲ್ಪ ಬೇಕಾದರ ಕೇಳ್ರಿ. ಮಾಡ್ತೀವಿ'.

ತಂದೆಯರ ಹಿಂದೆ ತಾಯಿಯರ ಸಿ.ಐ.ಡಿ.ಗಳಾಗಿ ನುಗ್ಗಿದ ಚಟಾಕು, ಪಾವು, ಅರಪಾವುಗಳನ್ನು ನೋಡಿ, ಯಜಮಾನರ ಮಾತಿನ ದಾಳಿಯನ್ನು ಎದುರಿಸಿದ ಕಮಲೇಶ ಕೂಡಲೇ ಶರಣಾಗತನಾದ.

'ಆಗಲ್ರೀ ಹಾಂಗs ಆಗಲಿ. ನಿಮ್ಮ ಸಹಾಯ ಬೇಕಾದರ ಕೇಳ್ತೀನಿ. ಥ್ಯಾಂಕ್ಸ್‌ರೆಪಾ' ಎಂದು ಬಾಗಿಲು ಮುಚ್ಚಿ ಕಿಟಕಿಯಿಂದ ಹಣಿಕಿದ. ಗುಂಪು ಕರಗಿತ್ತು. ಗಂಟೆ ಹತ್ತೂವರೆಯಾಗಿತ್ತು, ತಿಂಡಿ ಇಲ್ಲದೇ ಬೆಳಿಗ್ಗೆ ಬರೀ ಚಹವನ್ನೇ ಕುಡಿದ ಹೊಟ್ಟೆಯಲ್ಲಿ

ದೊಂಬರಾಟ ನಡೆದಿತ್ತು. ಕವಿ ಅಡಿಗೆ ಮನೆಗೆ ಧಾವಿಸಿದ. ಅಲ್ಲೇನಿತ್ತು ! ಒಲೆಯ ಬೂದಿಯಲ್ಲಿ ಮಲಗಿದ ಬೆಕ್ಕು ಭರ್ರೆಂದು ಓಡಿದಾಗ ಬೂದಿ ಮುಖಕ್ಕೇ ಚಿಮ್ಮಿತು. ಇನ್ನು ಮೇಲೆ ಒಲೆ ಹತ್ತಿಸಿ, ಅಕ್ಕಿ ತೊಳೆದು ಅನ್ನ ಮಾಡಿ, ಅದಕ್ಕೆ ವ್ಯಂಜನಗಳನ್ನು ಹೊಂದಿಸಿಕೊಂಡು ಊಟ ಮಾಡಬೇಕಲ್ಲ. ಅಷ್ಟು ಹೊತ್ತು ಹೊಟ್ಟೆ ತಡೆದೀತೇ. ಅದಕ್ಕೇ ಆ, ಈ ಡಬ್ಬಿಗಳನ್ನು ತಡಕಾಡಿ, ಜೋರಲು ಮಾಡಿ ಒಂದಿಷ್ಟು ಅವಲಕ್ಕಿ ಹುಡುಕಿ ನೆನೆಸಲು ಹಾಲು, ಮೊಸರು ಇಲ್ಲದೆ ನೀರಿನಿಂದಲೇ ನೆನೆಸಿ, ಉಪ್ಪು ಖಾರ ಉದುರಿಸಿಕೊಂಡು ಮುಕ್ಕಿದ. ಮೇಲೆ ಗಳಗಳ ನೀರು ಕುಡಿದು ಕೋಣೆಗೆ ಬಂದು ಪೆನ್ನು ಕೈಗೆತ್ತಿಕೊಂಡ.

ಬೇರೆ ಏನೂ ಹೊಳೆಯದೆ ಕವಿತೆಯ ನೋಟು ಬುಕ್ಕಿನ ಹಿಂದಿನ ಹಾಳೆಗಳನ್ನೇ ತಿರುವುತ್ತ ಕಣ್ಣಾಡಿಸುತ್ತಲಿದ್ದ. ತನ್ನ ಬಾಳಸಂಗಾತಿಯಾಗಿ ಕಮಲಾ ಬಂದ ಹೊಸತರಲ್ಲಿ ಬರೆದ ಪದ್ಯ ಹೀಗಿತ್ತು;

*ಓ ಎನ್ನ ಸಂಗಾತಿ*
*ನೀನೆನ್ನ ಬಾಳಜ್ಯೋತಿ*
*ನೀನೆಂದರೆ ನನಗೆಷ್ಟು ಪ್ರೀತಿ*
*ನೀನಿಲ್ಲದ ನನ್ನ ಜೀವನವಿಲ್ಲ,*
*ಕಮಲೆ, ನೀನೆ ನನ್ನ ಸರುವೆಲ್ಲ*

ಕಣ್ಣು ಮುಚ್ಚಿಕೊಂಡು ಅದನ್ನೇ ಮತ್ತೆ ಮತ್ತೆ ಅಂದುಕೊಳ್ಳುತ್ತ ಕಮಲೆಯ ರೂಪವನ್ನು ಕಣ್ಣ ಮುಂದೆ ತಂದುಕೊಳ್ಳುತ್ತಿದ್ದ ಕಮಲೇಶ ಒಮ್ಮೆಲೇ ಬೆಚ್ಚಿದವನಂತೆ ಎಚ್ಚತ್ತ.

'ಅಯ್ಯಪ್ಪಾ, ಮರೆತೇಬಿಟ್ಟೆ. ಕಮಲಾ ಈಗ ತನ್ನ ಹತ್ತಿರವಿಲ್ಲ. ತಾನು ಏಕಾಂಗಿ. ತಾನೀಗ ವಿರಹದಲ್ಲೇ ಬೇಯಬೇಕು. ಕತ ಕತ ಕುದಿಯಬೇಕು. ಅಶಾಂತಿ, ನಿರಾಶೆ, ಜುಗುಪ್ಸೆ, ಅರೆಹೊಟ್ಟೆ, ವಿರಹ, ದಾರಿದ್ರ್ಯ - ಹೂಂ. ತನ್ನ ಪರ್ಸು ಕಮಲೆಯ ಜೊತೆಗೇ ಹೋಗಿಬಿಟ್ಟಿತಲ್ಲ. ಬಿಡಿ ರೂಪಾಯಿ ಬಿಟ್ಟರೆ ತನ್ನಲ್ಲಿ ಏನೂ ಇಲ್ಲ. ತಾನೀಗ ದರಿದ್ರನೇ - ಇವೆಲ್ಲ ಇವೆ ತನ್ನ ಹತ್ತಿರ ಈಗ. ತಾನೀಗ ನವ್ಯ ಕವಿತೆ ಬರೆಯೋವಕ್ಕೆ ಸಿದ್ಧವಾಗಿದೀನಿ. ಸುಖ, ಸೌಂದರ್ಯ, ಶಾಂತಿ, ದೇವರು, ತೃಪ್ತಿ ಯಾವುವೂ ತನ್ನ ಹತ್ತಿರವಿಲ್ಲ. ತಾನೇ ದೂರ ಮಾಡಿದ್ದಾನೆ. ತಾನು ಬರೆಯೋದೇ ರಮ್ಯ ಕವನ. ಅದನ್ನೇ ತಾನು ಇಷ್ಟಪಡೋದು. ಅದರಲ್ಲೇ ತನ್ನ ಕೈ ಪಳಗಿದೆ. ತನ್ನ ಕವಿತೇನ ನಿಮ್ಮ ಸಂಚಿಕೆಗಳಲ್ಲಿ ಬೇಕಾದರೆ ಹಾಕ್ಕೊಳ್ಳಿ

ಬೇಡವಾದರೆ ಬಿಡಿ ಎಂದು ಹಟ ತೊಟ್ಟು ತನಗೆ ಸಿಕ್ಕ ಪ್ರತಿಫಲ ನಾಲ್ಕು ವರ್ಷಗಳ ಅಜ್ಞಾತ ವಾಸ. ತಾನು ಕವಿ ಎನ್ನುವುದನ್ನೇ ಮರೆಯುವ ಪರಿಸ್ಥಿತಿ ಉಂಟಾಗಿತ್ತು. ಕಚೇರಿಯಲ್ಲಿ ಕೆಲಸ ಮಾಡಿ, ಮನೆಗೆ ಬಂದು ಮಕ್ಕಳೊಡನೆ ಆಟವಾಡಿ, ಹೆಂಡತಿಯೊಡನೆ ಸರಸವಾಡಿ, ಅವಳು ನೀಡುವ ರಸಕವಳ ಉಂಡು, ಮಲಗಿ ದಿನಕಳೆಯುವ ಸಭ್ಯ ನಾಗರಿಕನಾಗಿದ್ದವನನ್ನು ಅವತ್ತೊಂದು ದಿನ ಬಂದ ಸತ್ಕಾರ ಸಮಾರಂಭದ ಆಮಂತ್ರಣ ಪತ್ರಿಕೆ ಬಡಿದೆಬ್ಬಿಸಿತ್ತು.

"ಕವಿ ನಂದನರ ಇಪ್ಪತ್ತೈದನೆಯ ಕವಿತಾ ಸಂಕಲನದ ಪ್ರಕಟನಾ ಸಮಾರಂಭದ ನಿಮಿತ್ತವಾಗಿ ಕವಿಗೆ ಸತ್ಕಾರ ಸಮಾರಂಭ" ಎಂದಿತ್ತು ಪತ್ರಿಕೆಯಲ್ಲಿ. ತನ್ನ ಮೈಯೇ ಉರಿದಿತ್ತು - ಅದನ್ನು ನೋಡಿ. ಬೇಗ ಬೇಗ ಬಚ್ಚಲು ಮನೆಗೆ ಓಡಿ ಹಂಡೆ ನೀರನ್ನು ತಲೆಯ ಮೇಲೆ ಸುರಿದುಕೊಂಡಿದ್ದ. ಗಾಬರಿಯಾಗಿದ್ದ ಕಮಲೆಗೆ ತಲೆ ಒರೆಸಿಕೊಳ್ಳುತ್ತಲೇ ಹೇಳಿದ್ದ.

"ನಮ್ಮೂರ ಶೀನಪ್ಪ, ನನ್ನ ಕ್ಲಾಸ್ ಮೇಟು - ಈಗ ಕವಿ ನಂದನ ಅಂತ ಹೆಸರು ಇಟಕೊಂಡಾನ ಮಗಾ - ಕನ್ನಡ ವ್ಯಾಕರಣ ನೆಟ್ಟಗ ಬರತಿದ್ದಿಲ್ಲಾ ಅವಗ. ಏಳನೆ ಕ್ಲಾಸಿಗೆ ಬಂದರೂ 'ಶ್ರೀ ಗುರುಸಿದ್ಧ ವಿದ್ಯಾಧರರು' ಅನ್ನೊ ಒಂದು ಶಬ್ದಾ ಬರೀಲಿಕ್ಕೆ ಬರಲಾರದ, ಮಾಸ್ತರರ ಕಡೇಂದ ಹೊಡೆಸಿಕೊಂಡು, ಇಪ್ಪತ್ತು ಸಾರೆ ತಿದ್ದಿ ಬರೆದಿದ್ದಾ. ಆ ಮಗಗ ಮೂವತ್ತೈದು ವರ್ಷ ಆಗಿಲ್ಲಾ, ಇಪ್ಪತ್ತೈದು ಕವಿತಾ ಪುಸ್ತಕಾ ಬರದಾನಂತ. ಸತ್ಕಾರ ಮಾಡತಾರಂತ" ಕೋಪದಿಂದ ಕುದಿಯುತ್ತಲೇ ಕೂಗಾಡಿದ್ದ ತಾನು.

ಕಮಲೆ ಹೆಚ್ಚೇನೂ ವಾದಿಸದೆ, 'ಅವರು ತಮ್ಮ ಭಾಷಾ ತಿದ್ದಿಕೊಂಡು ಈಗಿನವರಿಗೆ ಹ್ಯಾಂಗ ಬೇಕೋ ಹಾಂಗ ಬರೀತಿದ್ದಾರು. ಜನಪ್ರಿಯ ಆಗಿದ್ದಾರು. ಅದಕ್ಯಾಕ ಅಷ್ಟು ಸಿಟ್ಟಿಗೇಳಬೇಕು. ನೀವೂ ಪ್ರಯತ್ನ ಮಾಡಿ ನೋಡ್ರಿ.... ಯಾರ ಬ್ಯಾಡಂತಾರ' ಎಂದು ಒಂದು ಬಾಣ ಬಿಟ್ಟು ತನ್ನ ಉತ್ತರ ನಿರೀಕ್ಷಿಸದೆ ಒಳಗೆ ಹೋಗಿದ್ದಳು.

ಎಂಟುದಿನ ವಿಚಾರ ಮಾಡಿದ ಮೇಲೆ ಈ ಸಲವಾದರೂ ತಾನೂ ಪ್ರಯತ್ನಪಟ್ಟು, ಪರಿಸ್ಥಿತಿಯನ್ನು ಅನುಕೂಲಿಸಿಕೊಂಡು ಒಂದು ನವ್ಯ ಕವಿತೆ ಬರೆದೇ ತೀರಬೇಕು. ಅದು ಅಚ್ಚಾಗಲೇ ಬೇಕು: ಕವಿ ಕಮಲೇಶರು ರಮ್ಯ ಬರೆದಂತೆಯೇ ನವ್ಯವನ್ನೂ ಬರೆಯಬಲ್ಲರು ಎನ್ನುವುದನ್ನು ಜನತೆಗೆ ತೋರಿಸಿ ಕೊಡಲೇಬೇಕು ಎನ್ನುವ ನಿರ್ಧಾರಕ್ಕೆ ಬಂದಿದ್ದ. ಹಟ ತೊಟ್ಟು ಹದಿನೈದು ದಿನವಾದರೂ ಕವಿತೆಗೆ ವಸ್ತುವೇ ಹೊಳೆದಿರಲಿಲ್ಲ. ಊರ ಹೊರಗೆ ಹೋಗಿ ಕುಳಿತರೆ ಸೂರ್ಯೋದಯ, ಸೂರ್ಯಾಸ್ತ. ಥಳ ಥಳಿಸುವ ಕೆರೆಯ ನೀರು

ಹಸಿರು ಗುಡ್ಡ, ಹೂದೇರಿನಂತೆ ನಿಂತ ಮರಗಳು - ಇವೇ ಮಾಮೂಲಿ ದೃಶ್ಯಗಳು, ಮನೆಗೆ ಬಂದರೆ ಪುಟ್ಟ ಮಗುವಿನ ಬೊಚ್ಚ ಬಾಯಿಯ ನಗೆ, ಮಗನ ತೊದಲ ಮಾತು, ಮಗಳ ಚಿತ್ರಕಲೆ, ಹೆಂಡತಿಯ ಪ್ರೀತಿಯ ನೋಟ ಇವೆಲ್ಲವುಗಳಿಂದ ಎಲ್ಲೆಲ್ಲೂ ಸಂತೃಪ್ತಿ, ಶಾಂತಿಯ ಭಾವನೆಯೇ ತುಂಬಿ ಹರಿಯುತ್ತಿತ್ತು. ಛೇ, ಇಂಥ ವಾತಾವರಣದಲ್ಲಿ ತಾನು ನವ್ಯ ಬರೆಯುವದು ಸಾಧ್ಯವೇ ? ಇಲ್ಲವೆನ್ನಿಸಿತು. ಮರುದಿನವೇ ತಾನು ಕಮಲೆಯೊಡನೆ ಮಾತನಾಡಿ ಅವಳನ್ನು ತವರು ಮನೆಗೆ ಕಳುಹಿಸಿ ತಾನೇ ಸ್ವತಃ ಇಂಥ ನೀರಸ, ಬೇಸರದ ವಾತಾವರಣವನ್ನು ಸೃಷ್ಟಿಸಿಕೊಂಡಿದ್ದ. ಕಮಲೇಶ ಪೆನ್ನು ಹಿಡಿದು ಕುಳಿತೇ ಇದ್ದ. ಎದುರಿನ ಬಿಳಿ ಹಾಳೆಯಂತೆಯೇ ಅವನ ತಲೆಯೂ ಪೂರ್ತಿ ಖಾಲಿಯಾಗಿತ್ತು. ಹೊಟ್ಟೆಯಲ್ಲಿ ಮತ್ತೆ ತಾಂಡವ ನೃತ್ಯ ತೊಡಗಿತು. ಎದ್ದು ಚಹ ಮಾಡಿಕೊಳ್ಳಬೇಕೆಂದರೆ ಮನೆಯಲ್ಲಿ ಹಾಲೂ ಇಲ್ಲ. ಚಹದಂಗಡಿಗೆ ಹೋಗಲು ಕೈಯಲ್ಲಿ ಹೆಚ್ಚು ಹಣವಿಲ್ಲ. ಇದ್ದ ಪುಡಿಗಾಸುಗಳಲ್ಲೇ ಕಮಲೆ ಬರುವವರೆಗೆ ನಡೆಯಬೇಕು. ಇಲ್ಲದಿದ್ದರೆ ಯಾರಿಗಾದರೂ ಹಣಕ್ಕೆ ಕೈಯೊಡ್ಡಬೇಕು. ಎಂಥಾ ದಾರುಣ ಪರಿಸ್ಥಿತಿ ತನ್ನದು. ಮನಸ್ಸಿನಲ್ಲಿ ಜೀವನದ ಬಗ್ಗೆ ಜುಗುಪ್ಸೆ, ದುಃಖ, ನಿರಾಶೆ, ಸಂಕಟ ಉಕ್ಕಿ ಬಂದವು. ಸರಿ ಸ್ಫೂರ್ತಿ ಬಂದೇ ಬಿಟ್ಟಿತೆಂದು ಪೆನ್ನಿನ ಮುಚ್ಚಳ ತೆರೆದ. ಬಿಳಿಹಾಳೆಯ ಮೇಲೆ ಒಂದು ಅಕ್ಷರವೂ ಮೂಡಿರಲಿಲ್ಲ. ಬಾಗಿಲು ಸದ್ದಾಯಿತು. ಛೇ ಯಾರು ವಕ್ಕರಿಸಿದರೋ ಮೂಡು ಹೋಗಿಬಿಟ್ಟಿತು ಎಂದು ಗೊಣಗುತ್ತ ಬಾಗಿಲು ತೆಗೆದ. ವಿಲಾಸಿ ಪುಟ್ಟಣ್ಣ ಬಿರುಗಾಳಿಯಂತೆ ಒಳಗೆ ನುಗ್ಗಿದ.

ವಿಲಾಸಿ ಎನ್ನುವದು ಕಂಟ್ರಾಕ್ಟರ್ ಪುಟ್ಟಣ್ಣನ ಅನ್ವರ್ಥನಾಮ. ಕೈತುಂಬ ಹಣ, ಹೇಳಿದ್ದನ್ನು ಕೇಳಿಕೊಂಡು ತೆಪ್ಪಗಿರುವ ಬೆಪ್ಪ ಹೆಂಡತಿ, ಪೆದ್ದ ಮಕ್ಕಳು, ಸುಖಕ್ಕೇನೂ ಕೊರತೆಯಿಲ್ಲ. ಆದರೂ ಅವನು ಸುಖವನ್ನು ಹುಡುಕುವದು ಬಾರಿನಲ್ಲಿ, ವೇಶ್ಯಾಗೃಹವಲ್ಲಿ. ಆಸಾಮಿ ಜಿಗುಟು ಬಹಳ, ರಕ್ತಹೀರುವ ತಗಣಿ ಹಾಗೆ. ಅವನ ಕೈಗೆ ಸಿಕ್ಕರೆ ತಪ್ಪಿಸಿಕೊಳ್ಳುವ ಹಾಗಿಲ್ಲ. ಆದರೆ ಧಾರಾಳಿ. ಇಂಥ ಹೊತ್ತಿನಲ್ಲಿ ಅವನು ಬಂದುದು ನೋಡಿ ಗಾಬರಿಯಾದರೂ ತನ್ನ ಪರಿಸ್ಥಿತಿ ? ಕವಿತೆ ಬರೆಯಲೇಬೇಕಾಗಿರುವ ಸಂದರ್ಭವನ್ನು ವಿವರಿಸಿದ. ಎಲ್ಲವನ್ನೂ ಶಾಂತನಾಗಿ ಕೇಳಿದ ಪುಟ್ಟಣ್ಣ ಹುರ್ರಾ ಎಂದು ಹಾರಿಬಿದ್ದ. ಕೋಟು ತಂದು ಮೇಲೆ ಒಗೆದ. ಹಾಕಿಕೋ ಹೊರಗೆ ಹೋಗೋಣ. ನಿನಗೆ ಸ್ಫೂರ್ತಿಯ ಉಗಮಸ್ಥಾನ ತೋರಿಸುತ್ತೇನೆ ಎಂದ. ಖರ್ಚಿಗೆ ಹಣವಿಲ್ಲವೆಂದ. ಇಬ್ಬರ ಖರ್ಚೂ ತನ್ನದೇ ಎಂದ. ಇನ್ನು ತಪ್ಪಿಸಿಕೊಳ್ಳುವ ಹಾಗೆಯೇ ಇಲ್ಲವೆನ್ನಿಸಿದಾಗ ತಾನು ಅವನೊಡನೆ

ಹೊರಟ. ಒಳಗೆಲ್ಲೋ ದೂರದ ಆಸೆಯೊಂದು ಇಣುಕುತ್ತಿತ್ತು. ಎಂದೂ ಬಾರಿಗೆ ಹೋಗದ ತನಗೆ ಕುಡಿತದ ಅಮಲಿನಲ್ಲಾದರೂ ಕವಿತೆ ಒಲಿಯುವದೇ ಎಂದು.

ತಿಂದು, ಕುಡಿದು, ಮಜಾ ಮಾಡಿ ಮತ್ತೇರಿದ ಕಮಲೇಶ ಸರಿ ರಾತ್ರಿಗೆ ತೂರಾಡುತ್ತ ಬಂದು ಜೋರಾಗಿ ಬಾಗಿಲು ತಟ್ಟಿ, ತಟ್ಟಿ ಕಿರುಚಾಡಿದಾಗ ಬೀದಿಯ ಜನರೆಲ್ಲ ಎದ್ದು ಕಿಟಕಿಗಳಿಂದ ಹಣಿಕಿದ್ದರು. ಹೊಸ್ತಿಲಿಗೆ ತಲೆ ಇಟ್ಟು ಮಲಗಿದ ತಾನು ಬೆಳಗಿನ ತಂಪು ಗಾಳಿಗೆ ಎಚ್ಚತ್ತು ಒಳಗೆ ಹೋಗಿದ್ದ. ಮರುದಿನ ಪೂರ್ತಿ ತಾನು ತನ್ನ ಆದರ್ಶವನ್ನೆಲ್ಲಾ ಮರೆತು ಹಿಂದಿನ ದಿನ ತಪ್ಪು ಹೆಜ್ಜೆ ಇಟ್ಟಿದ್ದಕ್ಕಾಗಿ, ಕಮಲೆಗೆ ದ್ರೋಹ ಮಾಡಿದುದಕ್ಕಾಗಿ ಪಶ್ಚಾತ್ತಾಪ ಪಟ್ಟುಕೊಳ್ಳುವುದರಲ್ಲಿಯೇ ಕಳೆದುಹೋಗಿತ್ತು. ಅವಳಿಗಾಗಿ ದುಃಖಿಸಿದ್ದ. ಕಣ್ಣೀರು ಸುರಿಸಿದ್ದ. ರಾತ್ರಿ ಬಹಳ ಹೊತ್ತಿನವರೆಗೆ ಎಚ್ಚತ್ತಿದ್ದ, ಏನೇನೋ ಗೀಚುತ್ತಿದ್ದ. ಎರಡನೆಯ ದಿನ ಮನೆಯ ಎದುರಿಗೆ ಟಾಂಗಾ ನಿಂತ ಸಪ್ಪಳವಾಯಿತು. ಎದ್ದು ಬಾಗಿಲು ತೆರೆದ. ಕಮಲೆ ಗಂಭೀರವಾಗಿ ಮಕ್ಕಳೊಡನೆ ಒಳಗೆ ಬಂದಳು.

"ನಮ್ಮನ್ನ ಊರಿಗೆ ಕಳಿಸಿ ನೀವು ಏನೇನು ಕಾರಭಾರಾ ಮಾಡಿದಿರಿ ಅನ್ನೂದು ನನಗ ಗೊತ್ತಾಗೇದ. ನೀವು ಎಂಥಾ ಕವಿತಾ ಬರೆದೀರಿ ತೋರಿಸರಿ ನೋಡೋಣ. ನಾ ಈಗ ನೋಡ್ಲಿಕ್ಕೇಬೇಕು ಅದನ್ನ" ಎನ್ನುತ್ತ ಕೋಣೆಗೆ ಹೋದಳು. ಅಲ್ಲಿಯೇ ಇತ್ತು ಕವಿತೆ :

*ಬೆಚ್ಚನಾ ಮನೆಯಾಗೆ ವೆಚ್ಚಕ್ಕೆ ಹೊನ್ನಾಗೆ*
*ಇಚ್ಛೆಯನರಿವ ಸತಿಯಾಗೆ ಕವಿತೆಗೆ*
*ಕಿಚ್ಚು ಹಚ್ಚೆಂದ - ಕಮಲೇಶ||*

ಕಮಲೆಯ ಕೋಪ ಭರ್ರನೆ ಇಳಿಯಿತು.

ಬಕುಳಾಬಾಯಿ, ವನಜಾಬಾಯಿಯರ ವಾಯರಲೆಸ್‌ನಿಂದ ಕಮಲೆಯ ಆಗಮನವಾಯಿತೆನ್ನುವುದು ಕಮಲೇಶನಿಗೆ ಕೊನೆಗೂ ತಿಳಿಯಲಿಲ್ಲ.

# ಮಾದರಿ ಪತಿರಾಯರು

ಯಜಮಾನರು ಅದೇ ತಾಸೆ ಅವಸರದಿಂದ ಊಟ ಮುಗಿಸಿ, ಆಫೀಸಿಗೆ ಹೋಗಲು ತಯಾರಾಗುತ್ತ ಪೋಸ್ಟಮನ್ ವರಾಂಡದಲ್ಲಿ ಎಸೆದು ಹೋದ ಪತ್ರವನ್ನು 'ನಿಮಗೊಂದು ಪತ್ರ ಬಂದsದ ನೋಡ್ರಿ' ಎಂದು ನನಗೆ ಹೇಳಿ ಕೈಗಿತ್ತು ಹೊರಟುಹೋದರು. ನಿಮಗೆ ಆಶ್ಚರ್ಯವಾಯಿತೇನೋ ಅವರ ಮಾತಿನಿಂದ. ಅವರು ನನ್ನೊಡನೆ ಮಾತನಾಡುವದು ಬಹುವಚನದಲ್ಲಿಯೇ, 'ಇದೇನ್ರೀ, ಲೋಕದ ಹೊರ್ತು' ಎಂದು ಮೊದಲು ಕೇಳಿದಾಗ 'ದಾಂಪತ್ಯ ಎಂದರೆ ಸಹ ಜೀವನ, ಮರ್ಯಾದೆ ಕೊಡಬೇಕು, ತೆಗೆದುಕೊಳ್ಳಬೇಕು, ಇನ್ನು ನಾನು ಹಾಗೇ ಮಾತನಾಡೋದು,' ಎಂದರು. ಹೆಮ್ಮೆಯಿಂದ ನಾನು ಬೀಗಿದೆ.

ಕೆಲಸ ಕೈಬಿಟ್ಟು ಪತ್ರ ಎತ್ತಿಕೊಂಡೆ. ಅಪರಿಚಿತ ಕೈ ಬರಹ. ಒಂದು ರೀತಿಯ ಭಯ, ಕುತೂಹಲದಿಂದ ಬಿಚ್ಚಿದೆ. ಓs ನನ್ನ ಬಾಲ್ಯ ಗೆಳತಿ ನೀಲಮಣಿ ಬರೆದಿದ್ದಳು. ಅವರ ಸ್ನೇಹಿತರ ಮಗಳ ಮದುವೆ ಇಲ್ಲಿ ನಡೆಯುವದಿತ್ತು. ಅದಕ್ಕೆ ಬಂದು ಎರಡು ದಿನ ನಮ್ಮ ಮನೆಯಲ್ಲಿ ಗಂಡ-ಹೆಂಡತಿ ಉಳಿಯುವವರಿದ್ದರು. ತುಂಬಾ ವರ್ಷಗಳ ಮೇಲೆ ಭೇಟಿಯಾಗುವ ಗೆಳತಿಯನ್ನು ನೆನೆದು ಮೈ, ಮನ ಚುರುಕಾದವು. ಸಂತೋಷದ ಜೊತೆಗೆ ಆತಂಕವೂ, ಬರಿ ಸಂಬಳದ ಮೇಲೆ ಲೆಕ್ಕ ಹಾಕುತ್ತ ಬದುಕುವವರು ನಾವು. ಅವಳೋ ಆಗರ್ಭ ಶ್ರೀಮಂತೆ. ಎಂಜಿನಿಯರರ ಹೆಂಡತಿ. ಅವರ ಸ್ವಾಗತಕ್ಕಾಗಿ ಸಿದ್ಧತೆ ನಡೆಸಿದೆ. ಎರಡು ದಿನ ಏನೇನು ಊಟ, ತಿಂಡಿಮಾಡಬೇಕೆಂದು ಯೋಚಿಸಿ ಸಾಮಾನುಗಳ ಪಟ್ಟಿಮಾಡಿಕೊಂಡು ತಂದೆ. ಅವಳಿಗೆ ಏನೇನು ಇಷ್ಟ ಎಂದು ಜ್ಞಾಪಿಸಿಕೊಂಡೆ. ಚಿಕ್ಕಂದಿನಲ್ಲಿ ನನಗೂ ಒಂದಿಷ್ಟು ಶ್ರೀಮಂತಿಕೆಯ ಸುಖ ಉಣ್ಣಿಸಿದವಳು. ಇಷ್ಟೂ ಮಾಡದಿದ್ದರೆ ಹೇಗೆ ? ಸರಿ, ಅವರು ಬಂದಾಗ ಮಕ್ಕಳು, ಗಂಡ ಹೇಗಿರಬೇಕೆನ್ನುವ ಪಾಠ ಹೇಳಿಕೊಟ್ಟೆ. ಅವರು ಬರುವ ದಿನ ನಾನೇ ಟ್ಯಾಕ್ಸಿಮಾಡಿಕೊಡು ಸ್ಟೇಶನ್ನಿಗೆ ಕರೆಯಲು ಹೋದೆ. ಮನೆ ಹುಡುಕಲು ಕಷ್ಟವಾಗಬಾರದಲ್ಲ. ಬೆಂಗಳೂರು ಟ್ರೇನ್ ಒಂದು ತಾಸು ಲೇಟ್ ಎನ್ನುವ ಸುದ್ದಿ ತಿಳಿದಾಗ ಝುರ್ರನೆ ಇಳಿದು ಹೋದೆ. ದೂರದ ಮನೆಯನ್ನು ನೆನೆಸಿ ವೇಟಿಂಗ್ ರೂಮಿನಲ್ಲಿ ಕಾಯುವದೆಂದು ನಿರ್ಧರಿಸಿದೆ. ಒಂದು ಆರಾಮ ಕುರ್ಚಿಗೆ ಬೆನ್ನು ತಾಗಿಸಿ

ಕಾಲು ಚಾಚಿದೆ. ನಾಲ್ಕಾರು ದಿನ ಓಡಾಡಿ ತುಂಬಾ ದಣಿವಾಗಿತ್ತು. ಹಾಗೇ ಜೊಂಪು ಹತ್ತಿತು.

ವೇಳೆ ಸರಿದದ್ದು ತಿಳಿಯಲಿಲ್ಲ. ಸದ್ದಿನಿಂದ ಎಚ್ಚರವಾಯಿತು. ಒಂದು ಜೋಡಿ ಬಂದಿತು. ನವನಾಗರಿಕ ತರುಣಿಯೊಬ್ಬಳು ಪರ್ಸ್ ತೂಗಾಡಿಸುತ್ತ ಒಳಗೆ ಬಂದಳು. ಅವಳ ಹಿಂದೆ ಎರಡೂ ಕೈಗಳಲ್ಲಿ ಸಾಮಾನು ತೂಗಿಸಿಕೊಂಡು ಮತ್ತೆ ಮಗುವನ್ನೂ ಎತ್ತಿಕೊಂಡಿದ್ದ ಗಂಡ ಬಂದು, ಸಾಮಾನು ಕೆಳಗಿಟ್ಟು ಕರಚೀಫಿನಿಂದ ಕುರ್ಚಿಯ ಧೂಳು ಒರೆಸಿ ಹೆಂಡತಿಯನ್ನು ಕೂಡ್ರಿಸಿದ. ಮಗು ತಾಯಿಯತ್ತ ಕೈ ಚಾಚಿ ಅಳುತ್ತಿತ್ತು. ಹೆಂಡತಿ ಪರ್ಸ್ ತೆಗೆದು ತುಂಬಿದ ಹಾಲಿನ ಬಾಟಲ್ ಗಂಡನ ಕೈಗೆ ಕೊಟ್ಟು, 'ಹಸಿವಿ ಆಗಿ ಅಳತಾನ ಹಾಲ ಕುಡಿಸಿರಿ' ಎಂದಾಗ ಅವನು ಮೂಲೆಯ ಇನ್ನೊಂದು ಖಾಲಿ ಕುರ್ಚಿಗೆ ಹೋದ. ತನ್ನ ಡ್ಯೂಟಿ ಎನ್ನುವಂತೆ ಹಾಲು ಕುಡಿದಾದ ಮೇಲೆ ಮಗುವನ್ನು ಹೊರಗೆ ಅಡ್ಡಾಡಿಸಿಕೊಂಡು ಬಂದ. ಸವಿ ನಿದ್ರೆಯಿಂದ ಎಚ್ಚತ್ತ ಹೆಂಡತಿಯನ್ನು ನೋಡಿ ಪ್ರೀತಿಯಿಂದ 'ಮ್ಯಾಗಜಿನ್ಸ್, ಆಯಿಸಕ್ರೀಮ್ ತರಲ್ಯಾ' ಎಂದ. ಅವಳು ತೆಗೆದುಕೊಟ್ಟ ಹಣ ಹಿಡಿದು ಹೊರಗೆ ಹೋದ. ಆಧುನಿಕ ಹೆಣ್ಣುಮಕ್ಕಳು ಪರಿಚಯವಿಲ್ಲದೆ ಇತರರೊಡನೆ ಮಾತಾಡುವ ರೂಢಿ ಇಲ್ಲವಲ್ಲ! ನಾನೇ ಮಾತಾಡಿಸಿದರೆ 'ಹಳ್ಳಿ ಗುಗ್ಗು' ಅಂದು ಕೊಂಡಾಳು ಅನ್ನೋ ಭಯ. ಆ ಗಂಡನ ಪ್ರೀತಿ, ವಾತ್ಸಲ್ಯ ತುಂಬ ಮೆಚ್ಚಿಕೆಯಾಯಿತು. ಇಂಥ ಗಂಡ ಸಿಗೋದಕ್ಕೂ ಪುಣ್ಯ ಮಾಡಿರಬೇಕು. ನನ್ನ ಉಸಿರಿನೊಂದಿಗೇ ಟ್ರೇನೂ ಸಿಳ್ಳು ಹಾಕಿತು.

* * *

ನನ್ನ ಎಣಿಕೆಯಂತೆ ನೀಲಮಣಿ ಎ.ಸಿ. ಕೋಚನಿಂದಲೇ ಇಳಿದಳು. ಮೊದಲಿಗಿಂತ ಸ್ಥೂಲವಾಗಿದ್ದಳು. ನೀಲಮಣಿ ಹೆಸರಿಗೆ ತಕ್ಕ ಹಾಗೆ ಕೃಷ್ಣನ ಬಣ್ಣದವಳು. ಶ್ಯಾಮಲೆ. ಮತ್ತೆ ಮೇಲೆ ಜರಿಸಿಲ್ಕು, ಮೈ ತುಂಬ ಆಭರಣ, ಸ್ಟೇಶನ್ನಿನ ತುಂಬ ಅದೇ ಬೆಳಕು. ಎಂಜಿನಿಯರು, ನಾನು ಕೂಡಿ ಲಗೇಜನ್ನು ಕಾರಿಗೆ ಸಾಗಿಸಿದೆವು. ನೀಲಮಣಿ ತನ್ನ ತೂಕಕ್ಕೆ ಸರಿಯಾದ ವ್ಯಾನಿಟಿ ಬ್ಯಾಗ್ ಮಾತ್ರ ಹಿಡಿದು ಟ್ಯಾಕ್ಸಿ ಹತ್ತಿದಳು. ಮನೆಗೆ ಬಂದೊಡನೆ ನನಗೆ ಅವಸರ. ಬಚ್ಚಲು ಮನೆ ಸ್ವಿಚ್ ಆನ್ ಮಾಡಿ, ಕಾಫಿ ಮಾಡಿಕೊಟ್ಟು, ನಮ್ಮ ರಾಯರಿಗೆ ಫೋನ್ ಮಾಡಿದೆ. ಲಂಚ್ ಹೊತ್ತಿನಲ್ಲಿ ಮನೆಗೆ ಬಂದು ಅತಿಥಿಗಳ ಪರಿಚಯ ಮಾಡಿಕೊಂಡರು.

ಗಂಡಸರು ಮಾತಾಡುತ್ತ ಕೂಡ್ರಲಿ ಎಂದು 'ನೀನು ಸ್ನಾನಕ್ಕೇಳು' ಎಂದೆ. 'ನೀಲಮಣಿ ಏಳುವ ಮೊದಲು ಅವಳ ಗಂಡ ಎದ್ದರು. ಯಾಕೆ ಅನ್ನೋದ ನಮಗೆ ತಿಳಿಯಲಿಲ್ಲ. ನಮ್ಮ ಯಜಮಾನರು 'ಯಾಕ ಎದ್ದಿರಿ, ಸ್ನಾನಾ....' ಅನ್ನುವಷ್ಟರಲ್ಲಿ ಅವರು ತಮಗೆ ಕೊಟ್ಟ ರೂಮಿನ ಬಾಗಿಲಲ್ಲಿ ಇದ್ದರು.

'ಯಾವ ಸೆಟ್ಟು ತೆಗೀಬೇಕು ಗೊತ್ತಾ ?' ನೀಲಮಣಿಯ ಪ್ರಶ್ನೆ.

'ಓಹೋ ಗೊತ್ತು, ಈಗ ನೀಲೀದು, ಸಂಜೆ ಹಸಿರು, ನಾಳೆ ಕೆಂಪು' ಅವರ ಉತ್ತರ. ಅವರ ಮಾತಿನ ತಲೆ ಬುಡ ನಮಗೆ ಅರ್ಥವಾಗಲಿಲ್ಲ. ಮಿಕಿ ಮಿಕಿ ನೋಡಿದೆವು. ಐದು ನಿಮಿಷಗಳಲ್ಲಿ ಸಾಹೇಬರು ನೀಲಿ ಸಿಲ್ಕ್ ಸೀರೆ, ಮ್ಯಾಚಿಂಗ್ ರವಿಕೆ, ಪೆಟಿಕೋಟ್, ಬ್ರಾ, ಟಾವೆಲ್, ಸೋಪಬಾಕ್ಸ್ ಹಿಡಿದು ಹೊರಗೆ ಬಂದಾಗಲೇ ನಮಗೆ ತಿಳಿದದ್ದು ಅವರ ಪತ್ನಿಸೇವೆ. ಇವರಿಗೆ ನಗು ಉಕ್ಕಿ ಉಕ್ಕಿ ಬರುತ್ತಿತ್ತು. ನಗು ತಡೆಯಲು ನಾನು ಇವರಿಗೆ ಕಣ್ಣು ಸನ್ನೆ ಮಾಡಿ ಅಡಿಗೆ ಮನೆಗೆ ಹೋದೆ, ಇವರು ಹಿಂಬಾಲಿಸಿದರು.

'ಬಸಪ್ಪಾs ಅವ್ವಾರಿಗೆ ನೀರು ಹದಾ ಮಾಡಿಕೊಡಪ್ಪ' ಅಲ್ಲಿಂದಲೇ ಕೂಗಿದೆ. 'ಪರವಾಗಿಲ್ಲ, ನಾನೆಲ್ಲ ನೀರು ಬೆರೆಸಿ ಕೊಟ್ಟ ಬರ್ತೀನಿ.' ಎಂದು ಸಾಹೇಬರು ಬಸಪ್ಪನಿಗಿಂತ ಮೊದಲೇ ಬಚ್ಚಲು ಮನೆಯಲ್ಲಿ ಹಾಜರಾದರು. ಇವರು ನಗು ತಡೆಯದೆ ಹಿತ್ತಿಲಿನ ತೋಟಕ್ಕೆ ಓಡಿದರು.

ಎರಡೂ ದಿನ ಎಂಜಿನಿಯರ್ ಸಾಹೇಬರು ಪತ್ನಿಯ ಊಟ, ತಿಂಡಿ, ಸ್ನಾನ, ಅಲಂಕಾರ, ಊಟ, ತಿರುಗಾಟ, ಆಯಾಸ, ವಿಶ್ರಾಂತಿ, ನಿದ್ದೆ ಎಲ್ಲದರಲ್ಲೂ ನನಗೆ ಕೈಜೋಡಿಸಿ ಕೆಲಸ ಹಗುರಮಾಡಿದರು. 'ಆಹಾ! ನೀಲಮಣಿಯ ನಸೀಬು' ನಾನು ಉದ್ಗಾರ ತೆಗೆದಾಗ ಇವರು ಹುಬ್ಬುಗಂಟು ಹಾಕಿದ್ದರು.

* * *

ಪ್ರೊ. ಚಿನ್ನಸ್ವಾಮಿ ಬೆಂಗಳೂರು ಕಡೆಯವರು. ನಮ್ಮ ಮನೆಯ ಹಬ್ಬ-ಹುಣ್ಣಿಮೆಗಳಲ್ಲಿ ಅವರು ಕಾಯಂ ಅತಿಥಿ. ಉತ್ತರ ಕರ್ನಾಟಕದ ಊಟ ಅವರಿಗೆ ಅಚ್ಚು-ಮೆಚ್ಚು. ಬಿಳಿಜೋಳದ ರೊಟ್ಟಿ, ಎಣೆಗಾಯಿ ಬದನೆಕಾಯಿ, ಕಾಳಿನ ಉಸುಳಿ, ಸೇಂಗಾ ಚಟ್ನಿ, ಬೆಣ್ಣೆ, ಗಟ್ಟಿಮೊಸರು ಅವರ ಬಾಯಿಗೆ ನೀರೂರಿಸುವವು. ಕಡಬು, ಹೋಳಿಗೆ ಕರಚೀಕಾಯಿಗಳಂತೂ ಪ್ರಾಣಕ್ಕಿಂತ ಪ್ರಿಯ ಎಂದು ಹೇಳುವರು. ಪರಿಚಯವಾದಾಗಿನಿಂದ ಅವರ ಸಂಸಾರ ನಮ್ಮ ಆತಿಥ್ಯ ಎಷ್ಟೋ ಸಲ ಪಡೆದಿದ್ದರೂ ತಮ್ಮ ಮನೆಗೆ ಮಾತ್ರ

ಒಂದು ಸಲವೂ ಕರೆದಿರಲಿಲ್ಲ. ಇವರಿಗೆ ನಾನು ಹಗಲೆಲ್ಲ ಹಂಗಿಸುತ್ತಿದ್ದೆ. 'ಅತ್ತು ಔತಣ ಹೇಳಿಸಿಕೊಂಡಂತೆ', ಅಂತೂ ಕೊನೆಗೆ ಆ ಒಂದು ಸುದಿನ ಬಂದೇ ಬಿಟ್ಟಿತು. ಅವರ ಮನೆಗೆ ಊಟಕ್ಕಲ್ಲ....... ಚಹಕ್ಕೆ ಆಮಂತ್ರಣ.

ಮಕ್ಕಳು, ನಾವು ಮಧ್ಯಾಹ್ನದ ಚಹ ತಿಂಡಿ ಬಿಟ್ಟೆವು, - ಹೇಗೂ ಚಿನ್ನಸ್ವಾಮಿಯವರ ಮನೆಗೆ ಹೋಗುವದಿದೆಯಲ್ಲ ಎಂದು. ಹುರುಪಿನಿಂದ ಅವರ ಮನೆ ಒಳಹೊಕ್ಕಾಗ ನಮ್ಮನ್ನು ಸ್ವಾಗತಿಸಲು ಯಾರೂ ಅಲ್ಲಿ ಇರಲಿಲ್ಲ. ಏಕಮಾತ್ರ ಪುತ್ರ ಪೃಥ್ವಿ ಹೊರಗೆ ಬಂದ.

'ಅಮ್ಮ ಏನ್ಮಾಡ್ತಿದ್ದಾರಪಾ' ಅಂದೆ. ಒಳಗೆ ರುಬ್ಬುವ ಸಪ್ಪಳ ಕೇಳುತ್ತಿತ್ತು. 'ಭಾರೀ ತಯಾರಿ ನಡೆದಿರಬೇಕು ಕೈಗೆ ಪುರಸತ್ತಿಲ್ಲ' ಎಂದುಕೊಂಡೆ.

'ಅಮ್ಮ ಮಲಗಿದ್ದಾರ.'

'ಯಾಕೋ ಏನಾತು ?' ಹುರುಪಿನ ಬಲೂನು ಠುಸ್ಸೆಂದಿತ್ತು.

'ಬೆಳಗ್ಗಿನಿಂದ ಚೆನ್ನಾಗಿದ್ದು, ಊಟ ಆದ್ಮೇಲೆ ಹೊಟ್ಟೆನೋವಂತೆ ಮಲಗಿಕೊಂಡ್ಳು. ತಲೆನೂ ನೋಯ್ತದಂತೆ.'

'ಮತ್ತೆ ರುಬ್ಬೋರು ಯಾರು ?'

ಅಷ್ಟರಲ್ಲಿ ಮೇಲಕ್ಕೆತ್ತಿ ಕಟ್ಟಿದ ಲುಂಗಿಯನ್ನು ಕೆಳಗಿಳಿಸಿ, ಪೆದ್ದು ಕಳೆ ಸೂಸುತ್ತ ಚಿನ್ನಸ್ವಾಮಿ ಹೊರಗೆ ಬಂದರು 'ಬನ್ನಿ, ಬನ್ನಿಯಮ್ಮಾ' ಅನ್ನುತ್ತ. ಅವರ ಅವತಾರ ನೋಡಿ ಬಂದ ನಗುವನ್ನು ತಡೆದುಕೊಳ್ಳುತ್ತ ಒಳಕೋಣೆಗೆ ಹೋದೆ.

ಎಲ್ಲ ಗೊತ್ತಿದ್ದೂ 'ಏನಾಯ್ತು ಕಾಮಾಕ್ಷಮ್ಮಾ' ಸಹಾನುಭೂತಿ ದನಿ ಎಳೆದು ತಂದಿದ್ದೆ. ಅವಳು ಪಡಬಾರದ ಕಷ್ಟದಿಂದ ಮುಖ ಕಿವಿಚುತ್ತ ಎದ್ದು ಕೂತಳು.

'ಅಯ್ಯೋ ಎಂದೂ ಆಗದ್ದು ನೀವು ಬರೋದಿನಾನೇ ಹೀಗಾಗಬೇಕೆ ? ವಿಪರೀತ ಹೊಟ್ಟೆನೋವು, ತಲೆಭಾರ.' ನರಳಿದಳು.

'ಔಷಧಿ, ಮಾತ್ರೆ ತಗೊಂಡೀರಾ, ನಾಳೆ ಆರಾಮವಾಗುತ್ತೆ ಬಿಡಿ, ನೀವು ಮಲಕ್ಕೊಳ್ಳಿ...' ಎನ್ನುವಷ್ಟರಲ್ಲಿ ಯಜಮಾನರು ಹೊರಗಿನಿಂದಲೇ ಕೂಗಿದರು. 'ನೀವು ಬರ್ರಿ ಅಡಿಗೆ ಮನೀಗೆ. ಈ ಚಟ್ನಿ ರುಬ್ಬಿಕೊಡ್ರಿ, ಚಿನ್ನಸ್ವಾಮಿ ಪರದಾಟ ನಾ ನೋಡ್ಲಾರೆ, ನಾವಿಬ್ಬರೂ ಕೂಡಿ ಕಾಫಿ ಮಾಡ್ತೀವಿ. ಮಕ್ಕಳಿರಾ ನೀವೆಲ್ಲಾ ಕೂಡಿ ಇಲ್ಲಿ ರಂದೀ ತಗದು ಸ್ವಚ್ಛ ಮಾಡ್ರಿ' ನಾನು ಸೆರಗು ಕಟ್ಟಿ, ಅಡಿಗೆ ಮನೆಗೆ ಹೋದೆ. ವಡೆ ಹಿಟ್ಟು ತಯಾರಾಗಿತ್ತು.

'ಏಳ್ರಿ ಅಣ್ಣಾ, ನಾ ರುಬ್ತೀನಿ. ನಿಮಗ ರೂಢಿ ಇರೊದಿಲ್ಲ' ಅಂದೆ. ಅಲ್ಲಿಯೇ ಇದ್ದ ಪೃಥ್ವಿ 'ರೂಢಿ ಯಾಕಿಲ್ಲ ಆಂಟೀ, ದಿನಾನೂ ಅವರs ರುಬ್ಬೂದು. ಅಡಿಗೆ, ತಿಂದಿ ಎಲ್ಲಾನೂ ಮಾಡ್ತಾರ, ಅಲ್ನೋಡ್ರಿ ಬೆಳಿಗ್ಗೇನೆ ಗುಲಾಬ ಜಾಮೂನು ಮಾಡಿ ಇಟ್ಟಾರ. ಬಾಳ ರುಚಿ' ಅಂದ. ನಾನು ಇವರನ್ನು ದುರುಗುಟ್ಟಿದೆ. ಗಂಡಸರಿಬ್ಬರ ಮುಖ ಹುಳ್ಳಗಾಗಿತ್ತು.

* * *

ನನ್ನ ಅಣ್ಣನ ಗೆಳೆಯನ ಮಗನಿಗೆ ಹುಡುಗಿ ಮನಸ್ಸಿಗೆ ಬಂದಿದ್ದಳು. ವ್ಯಾಪಾರಸ್ಥರು, ಒಕ್ಕಲುತನವೂ ಇತ್ತು. ಹುಡುಗ ಪದವೀಧರನಾದರೂ ವ್ಯಾಪಾರ ಮಾಡಿಕೊಂಡು ಊರಲ್ಲೇ ಇದ್ದ. ಪಾಸು ಮಾಡಿದ ಹುಡುಗಿಯ ಮನೆಯವರು ಮನೆತನ ನೋಡಲು ಬಂದರು. ಅವಲಕ್ಕಿ, ಉಂಡಿ, ಚಹಾ ಉಪಚಾರವಾದ ಮೇಲೆ ಹುಡುಗಿಯ ತಾಯಿ ಮುಂಚಿಯಿಂದ ಹಿತ್ತಲವರೆಗೆ ತಿರುಗಾಡಿ ಮನೆ ನೋಡಿ ಬಂದಳು. ಮನೆ ಜನರನ್ನು ಕರೆದು ಚೌಕಶಿ ಮಾಡಿದಳು. ಇನ್ನೇನು ಮಾತು-ಕತೆಗೆ ಕೂಡ್ರಬೇಕು ಎನ್ನುವ ಹೊತ್ತಿನಲ್ಲಿ ಹೊರಗೆ ಹೋಗಿ ಹಿರಿಯರಲ್ಲಿ ಈ ಸಂಬಂಧ ಬೇಡವೆಂದು ಹೇಳಿದಳು. ನಡುವಿನವರು ತಡವರಿಸುತ್ತ 'ಒಳ್ಳೇ ಮನೆತನಾ, ಯಜಮಾನರು ಒಪ್ಪ್ಯಾರ...' ಅನ್ನುವಾಗ ದನಿ ಏರಿಸಿ, 'ಏನ್ರೀ, ಮನೀಗೆ ಯಜಮಾನರು ಅವರೋ ನಾನೋ ಕೇಳ್ರಿ ಅವರ್ನ. ಅವರಿಗೆ ವ್ಯವಹಾರದಾಗ ಏನೂ ತಿಳಿಯೂದಿಲ್ಲ. ನಾವಿನ್ನ ಹೊರಡ್ತೇವಿ' ಎಂದು ಖಡಾಖಂಡಿತವಾಗಿ ಹೇಳಿ ಪಿಳಿ ಪಿಳಿ ಕಣ್ಣು ಬಿಡುತ್ತ ಕುಳಿತ ಗಂಡನನ್ನು ಎಬ್ಬಿಸಿ ಕರೆದುಕೊಂಡು ಹೋಗೇ ಬಿಟ್ಟಳು. ಕೂಡಿದ ಓಣಿಯ ಜನ, ಹಿರಿಯರು ಬೆರಗಾಗಿ ಬಾಯಿ ತೆರೆದು ನಿಂತಿದ್ದರು. ಅಣ್ಣಾ ಈ ಸಂದರ್ಭ ವರ್ಣಿಸಿದಾಗ, 'ಅಬ್ಬಾ! ಹಿಡಿಂಬೆ' ಎಂದು ಇವರು ನನ್ನ ನೋಡುತ್ತ ನಕ್ಕಿದ್ದರು.

* * *

ಅವ್ವಾ ಇವತ್ತ ಕ್ಲಾಸಿನ್ಯಾಗ ಒಂದ ಮಜಾ ನಡೀತು. ಬಿ.ಎಸ್‌ಸಿ. ಓದುವ ಅರುಣ ಸುರು ಮಾಡಿದ ಒಂದು ದಿನ. ಮನೆಯ ಸದಸ್ಯರೆಲ್ಲ ಅಡಿಗೆ ಮನೆಯಲ್ಲಿ ಹಾಜರಾದರು. 'ಪ್ರೊ. ಕುಲಕರ್ಣಿ ಯವರ ಕ್ಲಾಸಿತ್ತು....'

'ಯಾವ ಕುಲಕರ್ಣಿ ? ನಲಿನಿಬಾಯಿ ಗಂಡ ಏನು ?'

'ಹೂಂ ಅವರು ಕ್ಲಾಸಿನೊಳಗ ಬಂದ ಕೂಡಲೆ ಗುಜು ಗುಜು ಶಬ್ದ ಶುರು ಆಯ್ತು. ಬರಬರತ ಗದ್ದಲ ಹೆಚ್ಚಾತು. ಪ್ರೊಫೆಸರರು ಹಳದಿ ಬಣ್ಣದ ಹೊಸಾ ಸ್ವೆಟರ ಹಾಕ್ಕೊಂಡ

ಬಂದಿದ್ದರು. ಸಣ್ಣ ಸೈಜಿನದು. ಕಷ್ಟಪಟ್ಟು ಹಿಗ್ಗಿಸಿ ಮೈಗೆ ಸಿಗಿಸಿಕೊಂಡಾಂಗ ಅದು ಇತ್ತು. ಅವರು ಬೋರ್ಡ್‌ಮ್ಯಾಲೆ ಬರೀಲಿಕ್ಕೆ ಅಂತ ಕೈ ಎತ್ತಿದರು. ಸ್ವೆಟರು ಹೊಟ್ಟೆ ಬಿಟ್ಟು ಮ್ಯಾಲೆ ಏರಿತು. ಕ್ಲಾಸು ಗೊಳ್ ಅಂತು. ಪ್ರೊಫೆಸರರು ಸ್ವೆಟ್ಟರ್ ಕೆಳಗೆ ಜಗ್ಗಿದರು. ಪಾಠಾ ಶುರು ಮಾಡಿದರು. ಸ್ವೆಟರ್ ಮ್ಯಾಲೆ ಏರಿತು. ಹುಡುಗರಿಗೆ ಪಾಠದ ಕಡೆ ಲಕ್ಷ್ಯ ಉಳೀಲಿಲ್ಲಾ. ಅವರು ಜಗ್ಗೂದು ಇವರು ನಗೂದು ಶುರುವಾಯಿತು. ಸಿಟ್ಟು ಬಂದರೂ ಏನೂ ಮಾಡೂ ಹಂಗಿಲ್ಲ. ಸರ್ ಅವಸ್ಥಾ ಹಾಂಗ ಇತ್ತು. ನೋಡಿ ನೋಡಿ ಒಬ್ಬ ಹುಡುಗಾ ಜೋರಾಗಿ ಒದರಿದ.

'ಯಾರರೇ ಎದ್ದು ಹೋಗಿ ಆ ಸ್ವೆಟರು ಜಗ್ಗಿ ಗಟ್ಟಿಯಾಗಿ ಹಿಡಕೊಳ್ರಿಪಾ ಸರ್ ಒದ್ದಾಟ ನಾ ನೋಡ್ಲಾರೆ.' ಡೆಸ್ಕ್ ಬಡಿದು ನಕ್ಕರು ವಿದ್ಯಾರ್ಥಿಗಳು. ಸರ್‌ಗೆ ಕಾಣದಾಂಗ ತಲೀ ಬಗ್ಗಿಸಿ ಹುಡುಗೇರೂ ನಗತಿದ್ದರು. ಎಲ್ಲಾರ ಜೊತಿಗೆ ಸರ್‌ನೂ ನಕ್ಕುಬಿಟ್ಟರು. ಅವರ ಮನಸ್ಸೂ ಹಗುರಾತು. ಆಮ್ಯಾಲೆ ಹೇಳಿದರು.

'ಈ ಹೊಸಾ ಸ್ವೆಟರ ನನ್ನ ಹೆಂಡತಿ ಆರು ತಿಂಗಳ ಕೂತ ಹೆಣೆದಾಳ, ಇವತ್ತ ನಾ ಹಾಕ್ಕೊಂಡೀನಿ ಅಂತ ಅವಳಿಗೆ ಎಷ್ಟು ಸಂತೋಷ ಆಗೇದ. ನೀವು ಸಣ್ಣವರು. ನಿಮಗ ಏನೂ ತಿಳಿಯುದಿಲ್ಲಾ.'

ಅವರ ಬೆನ್ನ ಕಂಡ ಕೂಡಲೇ ಇನ್ನೊಬ್ಬಾಂವ ಒದರಿದ. 'ನಮಗೆಲ್ಲಾ ತಿಳೀತದ, ಸರ್. ಸ್ವೆಟರ್ ಹಾಕೋಳದಿದ್ದರ ನಿಮಗ ರಾತ್ರಿ ಊಟಾ ಸಿಗೊದಿಲ್ಲ ಅನ್ನೂದು. ಪಾಪ.' ಕ್ಲಾಸಿನ ಹಂಚು ಹಾರಲಿಲ್ಲಾ. ಅವರು ಹೊರಗ ಹೋದ್ರು, ಅರುಣ ಮಾತು ಮುಗಿಸಿದ. ಇವರು ಹುಬ್ಬು ಗಂಟು ಹಾಕಿ 'ಅಮ್ಮಾವ್ರ ಗಂಡ' ಅನ್ನುತ್ತ ಹೊರಗೆ ಹೋದರು.

* * *

ವಿಧೇಯತೆ, ನಮ್ರಭಾವನೆ, ತಾಯಿ ವಾತ್ಸಲ್ಯ, ಪತ್ನೀಪ್ರೇಮ, ಪಾಕಶಾಸ್ತ್ರ ಪ್ರಾವೀಣ್ಯ ಈ ಎಲ್ಲ ಸದ್ಗುಣಗಳ ಖಣಿ ಮಾದರಿ ಪತಿರಾಯರನ್ನು ನೀವು ಕಂಡಿದ್ದೀರಾ? ನಿಮಗೆ ಸಿಕ್ಕರೆ ದಯವಿಟ್ಟು ನಮಗೆ ತಿಳಿಸಿ. ನನ್ನ ಆತ್ಮೀಯ ಗೆಳತಿ ಒಬ್ಬಳು ಇಂಥ ಗಂಡು ಸಿಕ್ಕಾಗ ಮದುವೆ ಆಗುವೆನೆಂದು ಇದುವರೆಗೆ ಕಾಯುತ್ತಿದ್ದಾಳೆ, - ಕನ್ಯಾಕುಮಾರಿಯಂತೆ !



......ಹೆಣ್ಣು ಮಕ್ಕಳಿಗೆ ಹರಟೆ ಪ್ರಕೃತಿಜನ್ಯ. ಹಾಗೆಂದು ಇಲ್ಲಿಯ ಈ ಹದಿನೈದು ಹರಟೆಗಳೆಲ್ಲವೂ ಬರಿ ಪ್ರಕೃತಿ ಜನ್ಯವಲ್ಲ, ಪ್ರತಿಭಾಜನ್ಯ.

......ಹರಟೆ ಪಾಶ್ಚಾತ್ಯರಲ್ಲಿ ಕಾಫಿ ಕ್ಲಬ್ಬಿನಲ್ಲಿ ಉದ್ಭವವಾಯಿತಂತೆ. ನಮ್ಮಲ್ಲಿ ಪಡಸಾಲೆ, ನಡುಮನೆಗಳಿಂದ ಅಡುಗೆ ಮನೆಯಲ್ಲಿ ತೊಟ್ಟಿಲಾಡಿದೆ. ಶ್ರೀಮತಿ ಶಾಂತಾದೇವಿಯವರು ಈ ಹರಟೆಯ ಶಿಶುವನ್ನು ಚಾಕಲೆಟ್ಟು, ಚಕ್ಕುಲಿಗಳಿಂದ ಪೋಷಿಸಿದ್ದಾರೆ. ಒಮ್ಮೊಮ್ಮೆ ಶುಂಠಿ ಮೆಣಸುಗಳ ಕಷಾಯಿಯಿಂದಲೂ ಉಪಚರಿಸಿದ್ದಾರೆ.

......ಗೃಹಿಣಿಯ ಗೃಹಕೃತ್ಯಗಳು, ತಾಯಿಯ ಕಾಳಜಿಗಳು ಶ್ರೀಮತಿ ಶಾಂತಾದೇವಿಯವರ ಲೇಖನಿಯಿಂದ ಅಡುಗೆಮನೆಯ ಎಂಜಲುಗೋ ಮಾಡಿದಷ್ಟು ಸಹಜತೆಯಿಂದ ಮೂಡಿಬರುತ್ತವೆ.

......ಅವರು ಹರಟೆ ಹೊಡೆಯುತ್ತಲೆ ಕಥೆ ಹೇಳಿಬಿಡುತ್ತಾರೆ. ಸಾಮಾನ್ಯ ಹರಟೆಗಾರನಲ್ಲಿಲ್ಲದ ಒಂದು ಹೆಚ್ಚುಗಾರಿಕೆ ಇದು.

- ಎನ್ಕೆ

(ಮುನ್ನುಡಿಯಿಂದ)